ಕರ್ನಾಟಕ ಸರ್ಕಾರ

# ಗಾಂಧೀಜಿ : ಒಬ್ಬ ಅನುಷ್ಠಾನ ತತ್ವದರ್ಶಿ

ಮೂಲ
**ಆರ್.ಆರ್.ದಿವಾಕರ್**
ಅನುವಾದ
**ಡಾ.ಸಿ.ಪಿ.ಕೆ.**

**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಬೆಂಗಳೂರು, ಕಲಾಗ್ರಾಮ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ ಆವರಣ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು–೫೬೦ ೦೫೬

**ಭಾರತೀಯ ವಿದ್ಯಾ ಭವನ, ಮೈಸೂರು**

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೫೬
ವಿಚಾರ ಸಾಹಿತ್ಯಮಾಲೆ – ೬೯
ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ
ಸಹಕಾರದೊಂದಿಗೆ

ಪ್ರಧಾನ ಸಂಪಾದಕರು
**ಡಾ. ಪ್ರಧಾನ್ ಗುರುದತ್ತ**

ಸಂಪಾದಕರು
**ಡಾ. ಎ. ವಿ. ನರಸಿಂಹಮೂರ್ತಿ**

# ಗಾಂಧೀಜಿ : ಒಬ್ಬ ಅನುಷ್ಠಾನ ತತ್ವದರ್ಶಿ

## ಭವನದ ಗ್ರಂಥ ವಿಶ್ವವಿದ್ಯಾನಿಲಯ


ಮಾಲೆಯ

ಮೂಲ ಸಂಪಾದಕರು

**ಆರ್. ಆರ್. ದಿವಾಕರ್**

**ಎಸ್. ರಾಮಕೃಷ್ಣನ್**

ವ್ಯವಸ್ಥಾಪಕ ಮಂಡಳಿ

**ಲೀಲಾವತಿ ಮುನ್ಷಿ** – ಅಧ್ಯಕ್ಷೆ

**ಕೆ. ಕೆ. ಬಿರ್ಲಾ** – ಸದಸ್ಯರು

**ಎಸ್. ಜಿ. ನೇವಾತಿಯ** – ಸದಸ್ಯರು

**ಜಿ. ಎಚ್. ದವೆ** – ಸದಸ್ಯರು

**ಎಸ್. ರಾಮಕೃಷ್ಣನ್** – ಸದಸ್ಯರು

**ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿ**

**ಎನ್. ರಾಮಾನುಜ** – ಅಧ್ಯಕ್ಷರು
(ಅಧ್ಯಕ್ಷರು, ಭಾರತೀಯ ವಿದ್ಯಾ ಭವನ, ಕರ್ನಾಟಕ)

**ಎಚ್. ಎನ್. ಸುರೇಶ್**
(ನಿರ್ದೇಶಕರು, ಭಾರತೀಯ ವಿದ್ಯಾ ಭವನ, ಬೆಂಗಳೂರು)

**ಡಾ. ಎ. ವಿ. ನರಸಿಂಹಮೂರ್ತಿ**
(ಅಧ್ಯಕ್ಷರು, ಭಾರತೀಯ ವಿದ್ಯಾ ಭವನ, ಮೈಸೂರು)




# ಗಾಂಧೀಜಿ : ಒಬ್ಬ ಅನುಷ್ಠಾನ ತತ್ವದರ್ಶಿ

**ಆನೋ ಭದ್ರಾಃ ಕ್ರತವೋ ಯನ್ತು ವಿಶ್ವತಃ**
(ಎಲ್ಲ ಸದ್ವಿಚಾರಗಳು ಎಲ್ಲೆಡೆಯಿಂದಲೂ ಬರಲಿ)
–ಋಗ್ವೇದ, I ೮೯–೧


ಮೂಲ

**ಆರ್. ಆರ್. ದಿವಾಕರ್**

ಅನುವಾದ

**ಡಾ. ಸಿ. ಪಿ. ಕೆ.**



**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ,** ಬೆಂಗಳೂರು
ಮತ್ತು
**ಭಾರತೀಯ ವಿದ್ಯಾ ಭವನ,** ಮೈಸೂರು

**Gandiji: Obba Anushthana Tatvadarshi:** Kannada translation of *Gandhiji: A Practical Philosopher* : **R. R. Diwakar;** Kannada translation by **Dr. C.P.K;** Editor-in-Chief: **Dr. Pradhan Gurudatta;** Editor of the series: **Dr. A. V. Narasimha Murthy;** Published under the joint auspices of **Kuvempu Bhasha Bharati Pradhikara,** Kalagrama, Jnana Bharathi, Behind Bangalore University Campus, Mallattahalli, Bangalore - 560 056, and **Bharatiya Vidya Bhavana,** Mysore; Published by **P. Narayana Swamy,** Registrar, Kuvempu Bhasha Bharathi Pradhikara; 2013; Pp. xxii + 56. Price : Rs. 10/-

© ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಮತ್ತು
ಭಾರತೀಯ ವಿದ್ಯಾ ಭವನ, ಮೈಸೂರು

ಮುದ್ರಣ : ೨೦೧೩
ಪುಟಗಳು : xxii + ೫೬
ಬೆಲೆ : ರೂ. ೧೦/-

ಪ್ರಕಾಶಕರು :
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ ಮತ್ತು ಚಿತ್ರ : **ಮಯೂರ ಪ್ರಿಂಟ್ ಆಡ್ಸ್**

ಮುದ್ರಕರು :
**ಮೆ|| ಮಯೂರ ಪ್ರಿಂಟ್ ಆಡ್ಸ್**
ನಂ. ೬೯, ಸುಬೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೭೨೪

ಕರ್ನಾಟಕ ಸರ್ಕಾರ

**ಸಿದ್ದರಾಮಯ್ಯ**
ಮುಖ್ಯ ಮಂತ್ರಿಗಳು

ವಿಧಾನಸೌಧ
ಬೆಂಗಳೂರು – ೫೬೦ ೦೦೧

## ಮುನ್ನುಡಿ

ಆಧುನಿಕ ಕನ್ನಡ ಸಾಹಿತ್ಯದ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿರುವ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ, ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಮಹತ್ವದ ಗ್ರಂಥಗಳನ್ನು ಹೊರತರುವ ದಿಕ್ಕಿನಲ್ಲಿ ಹೊಸ ವಿಕ್ರಮಗಳನ್ನು ಸ್ಥಾಪಿಸುತ್ತ ಮುನ್ನಡೆಯುತ್ತಿರುವುದು ಸಂತೋಷದಾಯಕ ಸಂಗತಿಯಾಗಿದೆ.

ವಿವಿಧ ವಿದೇಶೀ ಮತ್ತು ಭಾರತೀಯ ಭಾಷೆ–ಸಾಹಿತ್ಯಗಳ ಅತ್ಯುತ್ತಮ ಕೃತಿಗಳನ್ನು ಕನ್ನಡದಲ್ಲಿ ಮತ್ತು ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುತ್ತಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರಪ್ರಶಸ್ತಿ ಪುರಸ್ಕೃತ ಲೇಖಕರ ಮತ್ತು ಕನ್ನಡದ ಇತರ ಪ್ರತಿಷ್ಠಿತ ಲೇಖಕರ ಅತ್ಯುತ್ತಮ ಪ್ರಾತಿನಿಧಿಕ ರಚನೆಗಳ 'ಸಂಚಯ'ಗಳನ್ನು ಹೊರತರುತ್ತಿರುವುದು ಶ್ಲಾಘನೀಯವಾಗಿದೆ. ಈಗಾಗಲೇ ಕುವೆಂಪು, ಪುತಿನ ಮತ್ತು ಜಿ.ಎಸ್.ಶಿವರುದ್ರಪ್ಪ ಅವರ ಸಂಚಯಗಳನ್ನು ಪ್ರಕಟಿಸಿರುವ ಪ್ರಾಧಿಕಾರ ಜ್ಞಾನಪೀಠ ಪ್ರಶಸ್ತಿ ಮತ್ತು ಸರಸ್ವತೀ ಸಮ್ಮಾನ್ ಪ್ರಶಸ್ತಿ ಪುರಸ್ಕೃತರ ಸಂಚಯಗಳನ್ನೂ ಸಿದ್ಧಪಡಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಇವುಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳು ಪ್ರಕಟವಾದಾಗ ಕನ್ನಡದ ಹಿರಿಮೆ–ಗರಿಮೆಗಳು ಸಾರಸ್ವತ ಲೋಕದಲ್ಲಿ ಮತ್ತಷ್ಟು ವೃದ್ಧಿಸಲಿವೆ. ಭಾರತೀಯ ಇತಿಹಾಸ, ಧರ್ಮ ಮತ್ತು ಸಂಸ್ಕೃತಿ–ಸಾಹಿತ್ಯಗಳನ್ನು ಕುರಿತ ಮಹತ್ವದ ಗ್ರಂಥಗಳನ್ನು ಹೊರತಂದಿರುವ ಭಾರತೀಯ ವಿದ್ಯಾ ಭವನದ **'ಪುಸ್ತಕ ವಿಶ್ವವಿದ್ಯಾನಿಲಯ'** ಮಾಲೆಯ ೨೫ ಗ್ರಂಥಗಳು ಈಗಾಗಲೇ ಹೊರಬಂದಿದ್ದು, ಇನ್ನೂ ೨೫ ಗ್ರಂಥಗಳು ಅಚ್ಚಿನಲ್ಲಿರುವುದು ವಿಶೇಷವಾಗಿ ಉಲ್ಲೇಖನೀಯ. ಜ್ಞಾನ–ವಿಜ್ಞಾನ–ತಂತ್ರಜ್ಞಾನ ಕ್ಷೇತ್ರಕ್ಕೂ ಕೊಡುಗೆಯಾಗಿ ನಿಲ್ಲಬಲ್ಲಂತಹ ಮಹತ್ವದ ಮೌಲಿಕ ಕೃತಿಗಳನ್ನು ಪ್ರಾಧಿಕಾರ ಹೊರತರುತ್ತಿರುವುದು ಎಲ್ಲರ ಮೆಚ್ಚಿಕೆಗೆ ಪಾತ್ರವಾಗುತ್ತದೆ.

ವಿಲ್ ಡ್ಯೂರಾಂಟ್ ಅವರ ವಿಶ್ವಕೋಶ ಸದೃಶವಾಗಿರುವ **'ನಾಗರಿಕತೆಯ ಇತಿಹಾಸ'**ದ ಸಂಪುಟಗಳು ಹಾಗೂ ಜೆ.ಡಿ.ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'** ಸಂಪುಟಗಳು ಇದೇ ಮೊದಲ ಬಾರಿಗೆ ಭಾರತೀಯ ಭಾಷೆಯಲ್ಲಿ ಪ್ರಕಟವಾಗುತ್ತಿರುವುದು ಮತ್ತು ಆ ಹೆಮ್ಮೆ ಕನ್ನಡದ್ದಾಗಿರುವುದು ವಿಶೇಷತೆಗಳಲ್ಲಿ ವಿಶೇಷತೆಯಾಗಿದೆ. **'ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್'** ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ, ಇನ್ನೂ ಅನುವಾದಿತವಾಗದಿರುವ ಅವರ ಇತರ ಸಂಪುಟಗಳ ಅನುವಾದದ ಪ್ರಕಟಣೆ,

**‘ಕನಕದಾಸರ ಕೃತಿ’**ಗಳ ಅನುವಾದ ಯೋಜನೆ, ಮುಂತಾದವು ಪ್ರಾಧಿಕಾರದಲ್ಲಿ ಹೊಸ ಮೈಲಿಗಲ್ಲನ್ನು ಸ್ಥಾಪಿಸಲಿವೆ.

ಪ್ರಾಧಿಕಾರದ ಧ್ಯೇಯೋದ್ದೇಶಗಳನ್ನು ಗಮನಿಸಿ, ನಾಡಿನ ಶ್ರೇಷ್ಠ ವಿದ್ವಾಂಸರು ಸಲಹೆ–ಸೂಚನೆ–ಸಹಕಾರಗಳನ್ನು ನೀಡುತ್ತ, ಪ್ರಾಧಿಕಾರ ಬಹುಮುಖೀ ಸಾಧನೆಗಳನ್ನು ಮಾಡಲು ನೆರವಾಗುತ್ತಿರುವುದೂ, ಪ್ರಾಧಿಕಾರದ ಆಶ್ರಯದಲ್ಲಿ ಅನೇಕ ಶೈಕ್ಷಣಿಕ ಕಾರ್ಯಕ್ರಮಗಳನ್ನು, ತರಬೇತಿ ಶಿಬಿರಗಳನ್ನು, ವಿಚಾರ ಸಂಕಿರಣಗಳನ್ನು ನಡೆಸುತ್ತಿರುವುದು, ಜೊತೆಗೆ ಇಂತಹ ಎಲ್ಲ ಕಾರ್ಯಕ್ರಮಗಳಿಂದಾಗಿ ಪ್ರಾಧಿಕಾರವು ‘ಸಂಶೋಧನ ಕೇಂದ್ರ’ ಎಂದು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಪಡೆದುಕೊಂಡಿರುವುದು – ಇವೆಲ್ಲವೂ ನನ್ನಲ್ಲಿ ಹರ್ಷವನ್ನು ಉಂಟುಮಾಡಿದೆ.

ಪ್ರಾಧಿಕಾರದ ಎಲ್ಲ ಚಟುವಟಿಕೆಗಳಲ್ಲಿ ಕನ್ನಡ ನಾಡಿನ ಜನತೆ ಆಸಕ್ತಿಯಿಂದ ಪಾಲ್ಗೊಳ್ಳಲಿ ಹಾಗೂ ಪ್ರಾಧಿಕಾರದ ಪ್ರಕಟಣೆಗಳನ್ನು ಪ್ರೀತಿ–ವಿಶ್ವಾಸಗಳಿಂದ ಸ್ವಾಗತಿಸಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

(ಸಿದ್ದರಾಮಯ್ಯ)



ಕರ್ನಾಟಕ ಸರ್ಕಾರ

**ಉಮಾಶ್ರೀ**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ
ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ವಿಧಾನಸೌಧ
ಬೆಂಗಳೂರು – ೫೬೦ ೦೦೧

## ಸಂದೇಶ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇದು ವಿಜ್ಞಾನ – ತಂತ್ರಜ್ಞಾನ ಮತ್ತು ಸಾಹಿತ್ಯ ವಿಷಯಗಳಿಗೆ ಸಂಬಂಧಿಸಿದಂತೆ ನೂರಾರು ಮಹತ್ವದ ಮೌಲಿಕ ಹಾಗೂ ಅನುವಾದಿತ ಗ್ರಂಥಗಳನ್ನು ಹೊರತಂದಿರುವುದು ತುಂಬ ಶ್ಲಾಘನೀಯ ವಿಚಾರವಾಗಿದೆ. ಇದು ಈಗಾಗಲೇ ಹಲವು ವಿಶ್ವವಿದ್ಯಾಲಯಗಳ ಮಾನ್ಯತೆಯನ್ನುಗಳಿಸಿರುವುದು ಹಾಗೂ ಸಂಶೋಧನೆ ಕೇಂದ್ರವೆಂಬ ಹಿರಿಮೆಯೂ ಲಭಿಸಿರುವುದು ಗೌರವಾರ್ಹ ಸಂಗತಿಯಾಗಿದೆ. ಕನ್ನಡ ನೆಲ–ಜಲಗಳ ವಿಷಯದಲ್ಲಿ ಆಸಕ್ತವಾಗಿರುವ ಈ ಪ್ರಾಧಿಕಾರ ಈಗಾಗಲೇ ‘ಕಾವೇರಿ ನ್ಯಾಯಾಧಿಕರಣದ ತೀರ್ಪಿ’ನ ಕನ್ನಡ ಆವೃತ್ತಿಯನ್ನು ಹೊರತಂದಿದ್ದು, ಈಗ ‘ಕೃಷ್ಣಾ ನ್ಯಾಯಾಧಿಕರಣದ ತೀರ್ಪಿನ’ ಕನ್ನಡ ಆವೃತ್ತಿಯನ್ನು ಹೊರತರಲು ಮುಂದಾಗಿರುವುದು ಪ್ರಶಂಸನೀಯ ವಿಚಾರವಾಗಿದೆ. ಕನ್ನಡಿಗರಿಗೆ ಭಾರತೀಯ ಸಾಹಿತ್ಯದ ಮತ್ತು ವಿಶ್ವ ಸಾಹಿತ್ಯದ ಮಹತ್ವದ ಕೃತಿಗಳನ್ನು ಪರಿಚಯಿಸಿ ಕೊಡುವ ಕಾರ್ಯಗಳ ಜೊತೆಗೆ ರಾಷ್ಟ್ರೀಯ ಪ್ರಶಸ್ತಿ–ಪುರಸ್ಕಾರಗಳನ್ನು ಗಳಿಸಿರುವ ನಮ್ಮ ಲೇಖಕರ ಪ್ರಾತಿನಿಧಿಕ ಸಂಕಲನಗಳನ್ನು ಹೊರತಂದು, ಅವುಗಳನ್ನು ಬೇರೆ ಭಾಷೆಗಳಲ್ಲಿ ಪ್ರಕಟಿಸುತ್ತಿರುವುದು ತುಂಬ ಮಹತ್ವದ ಕಾರ್ಯವಾಗಿದೆ.

ಈ ರೀತಿಯ ಉತ್ತಮ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿರುವ ಪ್ರಾಧಿಕಾರವು ಮುಂದಿನ ದಿನಗಳಲ್ಲಿ ರಾಷ್ಟ್ರೀಯ, ಅಂತರರಾಷ್ಟ್ರೀಯ ಸಂಸ್ಥೆಯಾಗಿ ಬೆಳೆಯಲೆಂದು ಹಾರೈಸುತ್ತೇನೆ.

(ಉಮಾಶ್ರೀ)

ಕರ್ನಾಟಕ ಸರ್ಕಾರ

**ಬಸವರಾಜು,** ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

ವಿಧಾನಸೌಧ
ಬೆಂಗಳೂರು – ೫೬೦ ೦೦೧

## ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕುವೆಂಪು ಅವರ ಆಶಯದಂತೆ ಸಾಹಿತ್ಯ, ಸಂಸ್ಕೃತಿ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಯಾಗಬಲ್ಲಂಥ ಗ್ರಂಥಗಳನ್ನು ಹೊರತರುತ್ತಿರುವುದು ತುಂಬ ಮಹತ್ವದ ಸಂಗತಿಯೇ ಆಗಿದೆ. ಇತರ ಯಾವ ಭಾಷೆಗಳಲ್ಲೂ ಇನ್ನೂ ಹೊರಬರದೇ ಇರುವ ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ. ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ'ದಂಥ ಮಹತ್ವದ ಸಂಪುಟಗಳನ್ನೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಹತ್ವದ ರಚನೆಗಳನ್ನು ಒಳಗೊಂಡ ಸಂಚಯಗಳನ್ನೂ ಹೊರತರುತ್ತಿರುವುದೂ, ನಾಡಿನ ಇತರ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡು ಮಹತ್ವದ ಕೃತಿಗಳನ್ನು ಬೆಳಕಿಗೆ ತರುತ್ತಿರುವುದೂ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲದೆ, ಕನ್ನಡ ಜನತೆಗೆ ಹೆಮ್ಮೆಯನ್ನು ತರುವಂಥ ಸಂಗತಿಗಳಾಗುತ್ತವೆ ಎಂದು ನಂಬಿದ್ದೇವೆ.

ಇದುವರೆಗೆ ಪ್ರಕಟವಾಗಿರುವ ಡಾ. ಬಿ.ಆರ್. ಅಂಬೇಡ್ಕರ್ ಅವರ ಕೃತಿಗಳ ಆಂಶಿಕ ಪರಿಷ್ಕರಣ ಯೋಜನೆಯನ್ನು ಕೈಗೊಂಡು, ಅವುಗಳನ್ನು ಹೊಸ ರೂಪದಲ್ಲಿ ಹೊರತರುತ್ತಿರುವುದು ಹಾಗೂ ಇದುವರೆಗೆ ಪ್ರಕಟವಾಗದಿರುವ ಅಂಬೇಡ್ಕರ್ ಅವರ ಚಿಂತನೆಗಳನ್ನೊಳಗೊಂಡ ಇತರ ಸಂಪುಟಗಳನ್ನು ಹೊರತರುವ ಕಾರ್ಯವನ್ನು ಹಮ್ಮಿಕೊಂಡಿರುವುದು ವಿಶೇಷವಾಗಿ ಸ್ತುತ್ಯರ್ಹವಾದ ಕಾರ್ಯವಾಗಿದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಪ್ರಕಟಣೆಗಳಿಗೆ ಮಾತ್ರವೇ ತನ್ನನ್ನು ಸೀಮಿತಗೊಳಿಸಿಕೊಳ್ಳದೆ, ಭಾರತೀಯ ಭಾಷೆಗಳ ಮತ್ತು ವಿದೇಶಿ ಭಾಷೆಗಳ ಅನುವಾದ ಶಿಕ್ಷಣಕ್ಕೆ ಮತ್ತು ಸಂಶೋಧನೆಗೆ ಇಂಬುಕೊಡಲಿರುವ ಶೈಕ್ಷಣಿಕ ಕಾರ್ಯಕ್ರಮಗಳನ್ನು, ಸಂಶೋಧನ ಚಟುವಟಿಕೆಗಳನ್ನು ಕೈಗೊಳ್ಳಲು ಮುಂದಾಗುತ್ತಿರುವುದು ಮತ್ತು ವಿಶ್ವವಿದ್ಯಾನಿಲಯಗಳ ಮಾನ್ಯತೆಯನ್ನು ಗಳಿಸಿಕೊಳ್ಳುತ್ತಿರುವುದು ವೈಯಕ್ತಿಕವಾಗಿಯೂ ನನಗೆ ವಿಶೇಷ ಸಂತೋಷವನ್ನುಂಟುಮಾಡುತ್ತಿದೆ.

ಒಟ್ಟಿನಲ್ಲಿ ಸಾಹಿತ್ಯ–ಸಂಸ್ಕೃತಿ–ವಿಜ್ಞಾನ–ತಂತ್ರಜ್ಞಾನಗಳ ಬೆಳವಣಿಗೆಯೊಂದಿಗೆ ಆದರ್ಶ ರೀತಿಯಲ್ಲಿ ಪ್ರಾಧಿಕಾರ ಹೆಜ್ಜೆಹಾಕುತ್ತಾ ಮುನ್ನಡೆಯಲೆಂದೂ, ಹೊಸ–ಹೊಸ ವಿಕ್ರಮಗಳನ್ನು ಸ್ಥಾಪಿಸಲೆಂದೂ ಹಾರೈಸುತ್ತೇನೆ.

(ಬಸವರಾಜು)



ಕರ್ನಾಟಕ ಸರ್ಕಾರ

**ಕೆ.ಆರ್. ರಾಮಕೃಷ್ಣ,** ಭಾ.ಆ.ಸೇ.
ಆಯುಕ್ತರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

## ಪ್ರಾಸ್ತಾವಿಕ ನುಡಿ

ಕರ್ನಾಟಕ ಸರ್ಕಾರ 2005ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಲ್ಲಿ ವಿಲೀನಗೊಳಿಸಿ, ಸಾಹಿತ್ಯಿಕ–ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಭಾರತೀಯ ಮತ್ತು ವಿದೇಶಿಯ ಭಾಷೆಗಳ ನಡುವಣ ಸಂಬಂಧಗಳನ್ನು ಬೆಳೆಸಿಕೊಂಡು ಬರುವುದರ ಹಾಗೂ ಆ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡ ಸಾಹಿತ್ಯವನ್ನು ಸಂವೃದ್ಧಿಗೊಳಿಸುವುದು ಮತ್ತು ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಿಗೆ ಕೊಂಡೊಯ್ಯುವುದು ಹಾಗೂ ಮಾನವಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಪ್ರಕಟಣೆಗಳನ್ನು ಹೊರತರುವುದು ಈ ಪ್ರಾಧಿಕಾರದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಇದಕ್ಕೆ ಪೂರಕವಾಗಿ ಮತ್ತು ಪೋಷಕವಾಗಿ ರಾಷ್ಟ್ರೀಯ, ಪ್ರಾದೇಶಿಕ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು, ಭಾಷಾಂತರದ ವಿವಿಧ ಮುಖಗಳಿಗೆ ಸಂಬಂಧಿಸಿದಂತೆ ಶಿಕ್ಷಣ ಮತ್ತು ತರಬೇತಿಯ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಈ ಧ್ಯೇಯಗಳ ಅಂಗವೇ ಆಗಿದೆ. ಇಂತಹ ಕಾರ್ಯಕ್ರಮಗಳನ್ನು ಯೋಜಿಸುತ್ತಿರುವ ಹಾಗೂ ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ಪಡೆದುಕೊಂಡು ಈ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ವಿಚಾರ ನನಗೆ ವೈಯಕ್ತಿಕವಾಗಿಯೂ ತುಂಬ ಸಂತೋಷವನ್ನುಂಟುಮಾಡಿದೆ.

ಈ ಕೆಲವೇ ವರ್ಷಗಳಲ್ಲಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹೊರತಂದಿರುವ ಪ್ರಕಟಣೆಗಳು ತುಂಬ ಮಹತ್ವದವೇ ಆಗಿವೆ. ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ.ಡಿ.ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ' ಸಂಪುಟಗಳು ಯಾವುದೇ ಭಾಷೆಗೆ ಗೌರವಪ್ರಾಯವಾದ ಕೃತಿಗಳೇ ಆಗುತ್ತವೆ. ಅಂಥ ಸಾಹಸವನ್ನು ಭಾರತೀಯಭಾಷೆಗಳಲ್ಲಿ ಮೊದಲ ಬಾರಿಗೆ ಆಗುಮಾಡುತ್ತಿರುವುದು ವಿಶೇಷವಾಗಿ ಅಭಿನಂದನೀಯವಾದ ಕಾರ್ಯವಾಗಿದೆ. ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ ಮತ್ತು ಅವರ ಇತರ ಸಂಪುಟಗಳ ಹೊಸ ಅನುವಾದದ ಪ್ರಕಟಣೆ ಯೋಜನೆ, ಕನಕದಾಸರ ಕೃತಿಗಳ ಅನುವಾದ ಯೋಜನೆ, ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡದ ಅನುವಾದದ

ಯೋಜನೆ, ಕೃಷ್ಣಾ ಐತೀರ್ಪಿನ ಕನ್ನಡ ಅನುವಾದ ಯೋಜನೆ ಮುಂತಾದವು ಹೊಸ ವಿಕ್ರಮವನ್ನು ಸ್ಥಾಪಿಸಲಿವೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಭಾರತೀಯ ವಿದ್ಯಾಭವನದಂತಹ ಸಂಸ್ಥೆಗಳೊಂದಿಗೆ ಮತ್ತು ಇತರ ವಿಶ್ವವಿದ್ಯಾಲಯಗಳೊಡನೆ ಜಂಟಿ ಪ್ರಕಟಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು, ಇಂಥ ಕಾರ್ಯಕ್ರಮಗಳಲ್ಲಿ ನಾಡಿನ ಖ್ಯಾತ ವಿದ್ವಾಂಸರು ಪಾಲ್ಗೊಳ್ಳುತ್ತಿರುವುದು ಕನ್ನಡಿಗರೆಲ್ಲ ಹೆಮ್ಮೆಪಟ್ಟುಕೊಳ್ಳಬಹುದಾದ ಬೆಳವಣಿಗೆಗಳೇ ಆಗಿವೆ ಎಂದು ನಂಬಿದ್ದೇನೆ. ಮುಂದೆಯೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇಂಥ ವಿಶಿಷ್ಟ ಕಾರ್ಯಕ್ರಮಗಳನ್ನು, ಮಹತ್ವದ ಪ್ರಕಟಣೆಗಳನ್ನು ಹೊರತರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಿ, ಕನ್ನಡ ನಾಡಿನ ಮೆಚ್ಚಿನ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

(ಕೆ. ಆರ್. ರಾಮಕೃಷ್ಣ)



## ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದುವು. ದೇಶ–ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು.

ಶ್ರೀ ಕುವೆಂಪು ಅವರ ಶೈಕ್ಷಣಿಕ–ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ. ದೇ. ಜವರೇಗೌಡ ಅವರು. 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ–ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ–ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ–ಗರಿಮೆಗಳನ್ನು ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ವಿಲ್ ಡ್ಯೂರಾಂಟ್ ಅವರ **'ನಾಗರಿಕತೆಯ ಕಥೆ'** ಹಾಗೂ ಜೆ.ಡಿ. ಬರ್ನಾಲ್ ಅವರ **'ಇತಿಹಾಸದಲ್ಲಿ ವಿಜ್ಞಾನ'**ದಂಥ ಕೃತಿಗಳ ಕನ್ನಡ ಆವೃತ್ತಿಗಳನ್ನು ಹೊರತರುತ್ತಿರುವುದಲ್ಲದೆ,

ಭಾರತೀಯ ವಿದ್ಯಾಭವನ ಮತ್ತು ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯದಂಥ ಸಂಸ್ಥೆಗಳ ಸಹಯೋಗದೊಂದಿಗೆ ಮಹತ್ವದ ಕೃತಿಗಳ ಅನುವಾದದ ಯೋಜನೆಗಳನ್ನೂ ಹಮ್ಮಿಕೊಂಡಿದೆ. ಹೀಗೆ ಸಾಹಿತ್ಯಿಕ, ಸಾಂಸ್ಕೃತಿಕ ವೈಜ್ಞಾನಿಕ ಮತ್ತು ತಾಂತ್ರಿಕ ಕಾರ್ಯ ಚಟುವಟಿಕೆಗಳ ಜೊತೆಗೆ ಅನುವಾದಕ್ಕೆ ಸಂಬಂಧಿಸಿದ ವಿವಿಧ ಶಿಕ್ಷಣ ಕ್ರಮಗಳನ್ನೂ ಏರ್ಪಡಿಸಲಾಗಿದೆ. ಅನುವಾದಿತ ಕೃತಿಗಳಿಗೆ ಮತ್ತು ಅನುವಾದ ಕ್ಷೇತ್ರದಲ್ಲಿ ಮಹತ್ತರ ಸೇವೆಯನ್ನು ಸಲ್ಲಿಸಿರುವ ವ್ಯಕ್ತಿಗಳಿಗೆ ಪುರಸ್ಕಾರ, ಪ್ರಶಸ್ತಿಗಳನ್ನು ನೀಡುವ ಕಾರ್ಯವನ್ನೂ ಮಾಡಲಾಗುತ್ತಿದೆ. ಅನುವಾದ ಕಾರ್ಯಗಳಿಗೆ ಪೂರಕವಾಗುವಂಥ ವಿಚಾರ–ಸಂಕಿರಣಗಳನ್ನೂ, ಕಾರ್ಯಶಿಬಿರಗಳನ್ನೂ ನಡೆಸಿಕೊಂಡು ಬರಲಾಗುತ್ತಿದೆ.

ಕರ್ನಾಟಕ ಸರ್ಕಾರ, ಪ್ರಾಧಿಕಾರಕ್ಕೆ ಹೊಸ ಹೊಸ ಯೋಜನೆಗಳನ್ನೂ ವಹಿಸಿಕೊಡುತ್ತಿದೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಕೃತಿಗಳ ಅನುವಾದದ ಪರಿಷ್ಕರಣೆ (ಸಂಪುಟ ೧ ರಿಂದ ೧೪) ಮತ್ತು ಉಳಿದ ಕೃತಿಗಳ (ಸಂಪುಟ ೧೫ ರಿಂದ ೨೨) ಕನ್ನಡ ಅನುವಾದದ ಪ್ರಕಟಣೆ, ಕನಕದಾಸರ ಕೃತಿಗಳ ಅನುವಾದ, ಕಾವೇರಿ ಮತ್ತು ಕೃಷ್ಣ ಜಲವಿವಾದದ ಐತೀರ್ಪುಗಳ ಕನ್ನಡ ಅನುವಾದ, ಜ್ಞಾನಪೀಠ ಮತ್ತು ಇತರ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತರ ಆಯ್ದ (ಸಂಚಯ) ಕೃತಿಗಳ ಪ್ರಕಟಣೆ ಮತ್ತು ಅನುವಾದ – ಇವುಗಳನ್ನು ಇಲ್ಲಿ ಮುಖ್ಯವಾಗಿ ಹೆಸರಿಸಬಹುದಾಗಿದೆ.

ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರ ಡಾ. ಎ. ವಿ. ನರಸಿಂಹ ಮೂರ್ತಿ ಅವರ ದಕ್ಷ ಮಾರ್ಗದರ್ಶನದಲ್ಲಿ ಮಹತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕನ್ನಡ ನಾಡಿನ ವಿದ್ವತ್ ಸಮುದಾಯದ ಹಾಗೂ ಸಾಹಿತ್ಯ ಸಂಸ್ಕೃತಿ ಇತಿಹಾಸ ಪ್ರಿಯರ ಮೆಚ್ಚುಗೆಯನ್ನು ಸೂರೆಗೊಂಡಿದೆ. ಕನ್ನಡ ಸಾಹಿತ್ಯ ಲೋಕದ ಹಿರಿಯ ಚೇತನಗಳನ್ನು ಪರಿಚಯಿಸಿಕೊಡುವ ಅದರ ಮಾಲಿಕೆ ಪ್ರಾದೇಶಿಕ ಭಾಷಾ ಸಂಸ್ಕೃತಿ–ಸಾಹಿತ್ಯಗಳ ಬಗೆಗಿನ ಅದರ ಬದ್ಧತೆಗೂ ಸಾಕ್ಷಿಯಾಗಿದೆ. 'ಭವನ್ಸ್ ಬುಕ್ ಯೂನಿವರ್ಸಿಟಿ' ಮಾಲೆಯಲ್ಲಿ ಶ್ರೀಸಾಮಾನ್ಯರಿಗೆ ಮಾತ್ರವಲ್ಲದೆ, ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಬಗ್ಗೆ ಆಸಕ್ತರಾಗಿರುವ ಎಲ್ಲರಿಗೂ ಬೋಧಪ್ರದವಾಗಿರುವಂಥ ಕಿರುಹೊತ್ತಿಗೆಗಳನ್ನು ಹೊರತರಲಾಗಿದೆ. ಆಕಾರದಲ್ಲಿ ಕಿರಿದಾದರೂ ಮಹತ್ವದಲ್ಲಿ ಏನೂ ಕಡಿಮೆ ಇಲ್ಲದ ಈ ಪುಸ್ತಕಗಳನ್ನು ಕನ್ನಡದಲ್ಲೂ ಹೊರತರುವ ಯೋಜನೆಯಲ್ಲಿ ಭಾಗಿಯಾಗುವುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ. ಭಾಗೀದಾರಿಕೆಯ ಈ ಸಲಹೆಗೆ ವ್ಯಾವಹಾರಿಕವೂ, ಕಾರ್ಯಾತ್ಮಕವೂ ಆದ ರೂಪವನ್ನು ನೀಡುವಲ್ಲಿ ಪ್ರಧಾನ ಪಾತ್ರ ವಹಿಸಿರುವ ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ ಅಧ್ಯಕ್ಷರಾಗಿರುವ ಡಾ. ಎ. ವಿ. ನರಸಿಂಹಮೂರ್ತಿ ಅವರಿಗೂ, ಕನ್ನಡ ಪ್ರಕಾಶನದ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ ಎನ್. ರಾಮಾನುಜ ಅವರಿಗೂ, ಭಾರತೀಯ ವಿದ್ಯಾ ಭವನದ ಬೆಂಗಳೂರು ಶಾಖೆಯ ನಿರ್ದೇಶಕರಾಗಿರುವ ಶ್ರೀ ಎಚ್.ಎನ್. ಸುರೇಶ್ ಅವರಿಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಈ ಮಾಲೆಯ ಮೊದಲ ೨೫ ಪುಸ್ತಕಗಳನ್ನು ಕಳೆದ ವರ್ಷ ಬಿಡುಗಡೆ ಮಾಡಲಾಯಿತು. ಈ ವರ್ಷ ಇನ್ನೂ ೨೫ ಪುಸ್ತಕಗಳನ್ನು ಹೊರತರಲು



ಸಾಧ್ಯವಾಗಿರುವುದು ಪ್ರಾಧಿಕಾರಕ್ಕೆ ತುಂಬ ಸಂತೋಷವನ್ನು ತಂದಿದೆ. ಕನ್ನಡದ ಸಹೃದಯರಿಗೆ ಇವು ತುಂಬ ಉಪಯುಕ್ತವಾಗುತ್ತದೆಂದು ನಂಬಿದ್ದೇವೆ. ಅನುವಾದ ಕಾರ್ಯದಲ್ಲಿ ನೆರವಾಗಿರುವ ನಾಡಿನ ಹಿರಿ–ಕಿರಿಯ ವಿದ್ವಾಂಸರಿಗೆ, ಸಂಪಾದಕರಾದ ಡಾ. ಎ. ವಿ. ನರಸಿಂಹಮೂರ್ತಿ ಅವರಿಗೆ, ಕರಡು ಪರಿಶೀಲನೆಯಲ್ಲಿ ಸಹಕರಿಸಿರುವ ಮಿತ್ರರಿಗೆ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ. ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ<br>ಬೆಂಗಳೂರು – ೫೬

**ಪ್ರಧಾನ್ ಗುರುದತ್ತ**<br>ಅಧ್ಯಕ್ಷ

# ಅರಿಕೆ

ಭಾರತೀಯ ವಿದ್ಯಾಭವನದ ಸ್ಥಾಪಕರಾದ ಕುಲಪತಿ ಡಾ. ಕೆ. ಎಂ. ಮುನ್ಷಿಯವರು ಜನಸಾಮಾನ್ಯರಲ್ಲಿ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ದೃಷ್ಟಿಯಿಂದ ಭವನ್ಸ್ ಬುಕ್ ಯೂನಿವರ್ಸಿಟಿ ಹಾಗೂ ಅದರಲ್ಲೇ ಸೇರಿಕೊಂಡಿರುವಂತೆ ಒಂದು ರೂಪಾಯಿ ಪುಸ್ತಕ ಮಾಲಿಕೆಯನ್ನು ಆರಂಭಿಸಿದರು. ಇವು ಜನಪ್ರಿಯವಾಗಿ ಅನೇಕ ಶ್ರೇಷ್ಠ ಲೇಖಕರ ಕೃತಿಗಳು ಈ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಅನೇಕ ಈ ಪುಸ್ತಕಗಳು ನಾಲ್ಕಾರು ಮುದ್ರಣಗಳನ್ನು ಕಂಡಿವೆ.

ಇಂತಹ ಶ್ರೇಷ್ಠ ಪುಸ್ತಕಗಳು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲದುದನ್ನು ಗಮನಿಸಿದ ಭಾರತೀಯ ವಿದ್ಯಾಭವನ, ಇದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಈಗ (ದಿವಂಗತ) ಡಾ. ಮತ್ತೂರು ಕೃಷ್ಣಮೂರ್ತಿಗಳ ಪಾತ್ರ ಹಿರಿದಾದುದು; ಅವರು ಅನೇಕ ಸೂಚನೆ, ಸಲಹೆಗಳನ್ನು ನೀಡಿದ್ದಾರೆ. ಇದರಿಂದಾಗಿ ಶ್ರೇಷ್ಠ ಲೇಖಕರ ಚಿಂತನೆಗಳು ಕನ್ನಡ ಜನಗಳಿಗೆ ದೊರಕುವ ಹಾಗೂ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳ ಪರಿಚಯ ಕರ್ನಾಟಕದ ಓದುಗರಿಗೆ ಆಗುವಂತೆಯೂ ಆಯಿತು. ಭಾರತೀಯ ವಿದ್ಯಾಭವನದ ಮುಂಬಯಿ ಪ್ರಧಾನ ಕೇಂದ್ರದ ಎಕ್ಸಿಕ್ಯುಟಿವ್ ಸೆಕ್ರೆಟರಿ ಹಾಗೂ ಡೈರೆಕ್ಟರ್ ಜನರಲ್ ಆಗಿರುವ ಶ್ರೀ ಎಚ್. ಎನ್. ದಸ್ತೂರ್ ಅವರು ಈ ಯೋಜನೆಗೆ ಅನುಮತಿ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಬೆಂಗಳೂರು ಮತ್ತು ಮೈಸೂರಿನ ಭಾರತೀಯ ವಿದ್ಯಾಭವನಗಳ ಎಲ್ಲ ಪದಾಧಿಕಾರಿಗಳೂ ವಿಶೇಷವಾಗಿ ಶ್ರೀ ಎಚ್.ಎನ್. ಸುರೇಶ್ ಅವರು ಈ ಯೋಜನೆಯಲ್ಲಿ ಆಸಕ್ತಿ ವಹಿಸಿದ್ದಾರೆ. ಕರ್ನಾಟಕದ ಖ್ಯಾತ ಲೇಖಕರು ಈ ಕನ್ನಡ ಕೈಂಕರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಭಾಷಾಂತರಗಳನ್ನು ಮಾಡಿ ಕೊಟ್ಟಿದ್ದಾರೆ.

ಖ್ಯಾತ ಕನ್ನಡ ವಿದ್ವಾಂಸರೂ, ಕುವೆಂಪು ಕನ್ನಡ ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಪ್ರಧಾನ್ ಗುರುದತ್ತ ಅವರು ಈ ಪುಸ್ತಕಗಳ ಪ್ರಕಟಣೆಯ ಭಾರವನ್ನು ವಹಿಸಿಕೊಂಡು ನಮಗೆ ಕಳೆದ ವರ್ಷ ೨೫ ಪುಸ್ತಕಗಳನ್ನು ಹೊರತಂದಿದ್ದಲ್ಲದೆ, ಈ ವರ್ಷ ಇನ್ನೂ ೨೫ ಪುಸ್ತಕಗಳನ್ನು ಪ್ರಕಟಿಸಿ ನಮ್ಮನ್ನು ಉಪಕರಿಸಿದ್ದಾರೆ. ಇಷ್ಟು ಶೀಘ್ರದಲ್ಲಿ ಈ ಪುಸ್ತಕಗಳು ಪ್ರಕಟವಾಗುತ್ತಿರುವುದಕ್ಕೆ ಅವರ ಆಸಕ್ತಿ ಮತ್ತು ಕಾರ್ಯಶೀಲತೆಯೇ ಮುಖ್ಯ ಕಾರಣ. ಅವರಿಗೆ ಭಾರತೀಯ ವಿದ್ಯಾಭವನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಇದು ಆರ್.ಆರ್. ದಿವಾಕರ್ ಅವರ *Gandhiji: A Practical Philosopher* ಎಂಬ ಕೃತಿಯ ಕನ್ನಡ ಅನುವಾದ. ಇದನ್ನು 'ಗಾಂಧೀಜಿ: ಒಬ್ಬ ಅನುಷ್ಠಾನ ತತ್ವದರ್ಶಿ' ಎಂಬ ಹೆಸರಿನಲ್ಲಿ ಡಾ. ಸಿ.ಪಿ.ಕೆ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು. ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಾವು ಆಶಿಸುತ್ತೇವೆ.

**ಎನ್. ರಾಮಾನುಜ**
ಅಧ್ಯಕ್ಷರು
ವಿದ್ಯಾಭವನ, ಕರ್ನಾಟಕ

**ಎ. ವಿ. ನರಸಿಂಹಮೂರ್ತಿ**
ಅಧ್ಯಕ್ಷರು, ವಿದ್ಯಾಭವನ, ಮೈಸೂರು
ಪ್ರಧಾನ ಸಂಪಾದಕ



# ಕುಲಪತಿಗಳ ಪ್ರಸ್ತಾವನೆ

ಮುಂಬಯಿಯಲ್ಲಿರುವ ಭಾರತೀಯ ಸಂಸ್ಕೃತಿ ಅಧ್ಯಯನ ಸಂಸ್ಥೆ ಅಂದರೆ, ಭಾರತೀಯ ವಿದ್ಯಾಭವನಕ್ಕೆ ಒಂದು ಬುಕ್ ಯೂನಿವರ್ಸಿಟಿಯ ಅವಶ್ಯಕತೆ ಇತ್ತು. ಇದು ಪ್ರಕಟಿಸಿರುವ ಗ್ರಂಥಗಳನ್ನು ಅಧ್ಯಯನ ಮಾಡಿದರೆ, ಉನ್ನತ ಶಿಕ್ಷಣವನ್ನು ಹೊಂದಿದಂತೆ ಆಗಬೇಕೆನ್ನುವುದೇ ಮುಖ್ಯ ಉದ್ದೇಶ. ಭಾರತೀಯ ಸಂಸ್ಕೃತಿಯ ಆಳವಾದ ಬೇರುಗಳನ್ನು ಜನಗಳಿಗೆ ತಿಳಿಸುವ ಉದ್ದೇಶವೇ ಇದರ ಮುಖ್ಯ ಗುರಿ. ಮೊದಲನೆಯ ಹಂತದಲ್ಲಿ ಒಂದು ನೂರು ಪುಸ್ತಕಗಳನ್ನು ಕೈಗೆತ್ತಿಕೊಂಡು ಅದರಲ್ಲಿಯೂ ೫೦ ಪುಸ್ತಕಗಳನ್ನು ತಕ್ಷಣವೇ ಪ್ರಕಟಿಸುವ ತೀರ್ಮಾನ ತೆಗೆದುಕೊಳ್ಳಲಾಯಿತು. ಪ್ರತಿ ಪುಸ್ತಕವೂ ೨೦೦ರಿಂದ ೨೫೦ ಪುಟಗಳಷ್ಟಿದ್ದು, ಇದರ ಬೆಲೆ ಎರಡು ರೂಪಾಯಿಗಳೆಂದು ನಿರ್ಧರಿಸಲಾಯಿತು.

ಈ ಪುಸ್ತಕಗಳನ್ನು ಇಂಗ್ಲಿಷಿನಲ್ಲಿ ಮಾತ್ರವಲ್ಲದೆ, ಇತರ ಭಾರತೀಯ ಭಾಷೆಗಳಾದ ಹಿಂದಿ, ಬಂಗಾಳಿ, ಗುಜರಾತಿ, ಮರಾಠಿ, ತಮಿಳು, ತೆಲುಗು, ಕನ್ನಡ ಮತ್ತು ಮಲಯಾಳಂಗಳಲ್ಲಿಯೂ ಪ್ರಕಟಿಸುವುದೆಂದು ತೀರ್ಮಾನಿಸಲಾಯಿತು.

ಈ ರೀತಿಯ ೯೦೦ ಪುಸ್ತಕಗಳ ಪ್ರಕಟನೆಗೆ ಸಾಕಷ್ಟು ಧನ ಹಾಗೂ ಅಖಿಲ ಭಾರತ ಸಂಸ್ಥೆಯ ಅವಶ್ಯಕತೆ ಇದೆ. ವಿದ್ಯಾಭವನವು ಇದನ್ನು ಸಫಲಗೊಳಿಸುವಲ್ಲಿ ಸಾಕಷ್ಟು ಶ್ರಮ ವಹಿಸುತ್ತಿದೆ.

ಆಧುನಿಕ ಜ್ಞಾನದಡಿಯಲ್ಲಿ ಹಾಗೂ ನಮ್ಮ ಇಂದಿನ ಅವಶ್ಯಕತೆಗನುಗುಣವಾಗಿ ಭಾರತೀಯ ಸಂಸ್ಕೃತಿಯನ್ನು ಸಮಗ್ರವಾಗಿ ತಿಳಿಸುವುದೇ ಭಾರತೀಯ ವಿದ್ಯಾಭವನದ ಮೂಲ ಗುರಿ. ಇದರಿಂದ ನಮ್ಮ ಸಂಸ್ಕೃತಿಯ ನಿಜವಾದ ಕ್ರಿಯಾಶೀಲ ರೂಪ ಹಾಗೂ ಮೌಲ್ಯಗಳನ್ನು ತಿಳಿಸುವುದು ಸಾಧ್ಯವಾಗುತ್ತದೆ.

ನಮ್ಮ ಗುರಿಯನ್ನು ಇನ್ನೂ ವಿಶದವಾಗಿ ತಿಳಿಸಲು ಯತ್ನಿಸುತ್ತೇನೆ. ಪ್ರತಿಯೊಬ್ಬನಿಗೂ ತನ್ನ ಶಕ್ತಿ ಮತ್ತು ಗುಣಗಳಿಗನುಗುಣವಾಗಿ ತನ್ನ ಘನತೆಗೆ ತಕ್ಕಂತೆ ಸಾಮಾಜಿಕ ಸ್ಥಿತಿಗಳನ್ನು ಕಂಡುಕೊಳ್ಳುವುದನ್ನು ನಾವು ಬಯಸುತ್ತೇವೆ; ವೈಯಕ್ತಿಕ ಪ್ರಯತ್ನ ಹಾಗೂ ಸಾಮಾಜಿಕ ಸಂಬಂಧಗಳನ್ನು ನಮ್ಮ ಮೌಲ್ಯದಡಿಯಲ್ಲಿ ನಿರಂತರವಾಗಿ ಸಾಧಿಸುವುದನ್ನು ನಾವು ಆಶಿಸುತ್ತೇವೆ; ಜೀವನ ಕಲೆಯನ್ನು ನಮ್ಮ ಪರಿಮಿತಿಯನ್ನು ದಾಟಿ ಸಾಧಿಸುವುದರ ಮೂಲಕ ಮಾನವನು ದೈವದ ಸಾಧನವಾಗಿ, ಅವನನ್ನು ಎಲ್ಲರಲ್ಲಿಯೂ ಎಲ್ಲವನ್ನೂ ಅವನಲ್ಲಿಯೂ ಕಾಣುವಂತೆ ಮಾಡುವುದೇ ನಮ್ಮ ಗುರಿ.

ಪ್ರಪಂಚ ನಮ್ಮ ಜೊತೆ ವಿಶೇಷವಾಗಿದೆ. ಪುಸ್ತಕಗಳು ನಮಗೆ ಬೋಧಿಸುವಂತೆ, ಇನ್ನಾವುದೂ ನಮಗೆ ಸುಂದರ ಹಾಗೂ ಆಕಾಂಕ್ಷೆಯ ಜೀವನವನ್ನು ತೋರಲಾರರು.

ಆದುದರಿಂದ, ಈ ಮಾಲಿಕೆಯಲ್ಲಿ, ಪ್ರಾಚೀನ ಹಾಗೂ ಆಧುನಿಕ ಸಾಹಿತ್ಯವನ್ನು ಪ್ರತಿಬಿಂಬಿಸುವ ಕೃತಿಗಳನ್ನು, ಎಲ್ಲರಿಗೂ ಸುಲಭವಾಗಿ ದೊರಕುವಂತೆ ಪ್ರಕಟಿಸಲು ಉದ್ದೇಶಿಸಲಾಗಿದೆ. ಪ್ರಪಂಚದ ಇತರ ಸಾಹಿತ್ಯಗಳಲ್ಲಿ ನಾವು ಗೌರವಿಸುವ ಮೌಲ್ಯಗಳ ಈ ಗುಣಗಳು ಕಂಡುಬಂದರೆ ಅವುಗಳನ್ನೂ ಇದರಲ್ಲಿ ಸೇರಿಸಿಕೊಳ್ಳಲಾಗುವುದು.

ಈ ರೀತಿಯ ಸಾಹಿತ್ಯ ವಾಹಿನಿಯು ಬೇರೆ ಬೇರೆ ಭಾಷೆಗಳ ಮೂಲಕ ಹರಿದು ಬಂದರೂ, ಅವುಗಳಲ್ಲಿ ಒಂದೇ ಗುರಿ ಮತ್ತು ಆಕಾಂಕ್ಷೆ ಕಾಣಬರುತ್ತದೆ. ಆದುದರಿಂದ ಇದು ಪೌರ್ವಾತ್ಯ ಅಥವಾ ಪಾಶ್ಚಿಮಾತ್ಯ ಓದುಗರಿಗೆ ಭಾರತದ ಆಂತರ್ಯವನ್ನು ತಿಳಿಯುವ ಹಾಗೂ ಪ್ರಪಂಚದ ಚಿಂತನೆಯನ್ನು ತಿಳಿಸುವ ಸಾಧನವಾಗುತ್ತದೆ ಎಂದು ಭಾವಿಸಲಾಗಿದೆ.

ಇದಕ್ಕನುಗುಣವಾಗಿ ಬುಕ್ ಯೂನಿವರ್ಸಿಟಿಯ ಮೊದಲನೆಯ ಪುಸ್ತಕ, ಅತ್ಯಂತ ಶ್ರೇಷ್ಠ ವಿದ್ವಾಂಸರಾದ ಶ್ರೀ ರಾಜಗೋಪಾಲಾಚಾರಿಯವರ 'ಮಹಾಭಾರತ' ಪ್ರಕಟವಾಗಿರುವುದು ನಮ್ಮ ಸುಯೋಗ; ಎರಡನೆಯ ಪುಸ್ತಕ ಇದರ ಒಂದು ಭಾಗವಾದ, ಖ್ಯಾತ ನ್ಯಾಯವಾದಿಗಳೂ ತತ್ವಶಾಸ್ತ್ರವಿದರೂ ಆದ ಎಚ್. ವಿ. ದವೆಯವರಿಂದ ರಚಿತವಾದ ಭಗವದ್ಗೀತೆ. ಇಲ್ಲಿ ಇಲ್ಲದ್ದು ಇನ್ನೆಲ್ಲಿಯೂ ಇರದು ಎಂದು ಮಹಾಭಾರತವನ್ನು ಕುರಿತು ಹೇಳಲಾಗಿತ್ತು. ಇಪ್ಪತ್ತೈದು ಶತಮಾನಗಳಾದ ನಂತರವೂ ನಾವು ಇದೇ ಮಾತನ್ನು ಪುನರುಚ್ಚರಿಸಬಹುದು. ಯಾರಿಗೆ ಮಹಾಭಾರತವು ಗೊತ್ತಿಲ್ಲವೋ, ಅವರಿಗೆ ಆತ್ಮದ ಆಳ ಮತ್ತು ಎತ್ತರ ತಿಳಿದಿಲ್ಲ; ಅಂತಹವರು ಜೀವನದ ಕಷ್ಟ-ಸುಖಗಳಿಂದ ಹಾಗೂ ವೈಭವದಿಂದ ವಂಚಿತರಾಗಿರುತ್ತಾರೆ.

ಮಹಾಭಾರತವು ಕೇವಲ ಒಂದು ಮಹಾಕಾವ್ಯವಲ್ಲ; ವೀರ ರಮಣಿಯರ ಹಾಗೂ ಪುರುಷರ, ಅದರಲ್ಲಿಯೂ ದೈವಾಂಶ ಸಂಭೂತರಾದ ಕೆಲವರ ಮಹಾಗಾಥೆ, ಜೀವನದ ಗುರಿಯನ್ನು ತೋರಿಸುವ ಪೂರ್ಣ ಸಾಹಿತ್ಯವದು; ಸಾಮಾಜಿಕ ಹಾಗೂ ಮೌಲಿಕ ಸಂಬಂಧಗಳ ತಾತ್ವಿಕ ಚಿಂತನೆ; ಅದೊಂದು ಸರಿಸಾಟಿಯಿಲ್ಲದ ಮಾನವನ ಸಮಸ್ಯೆಗಳ ಕುರಿತಾದ ಚಿಂತನೆ; ಇವೆಲ್ಲವುಗಳಿಗಿಂತ ಮಿಗಿಲಾಗಿ ಅದರ ಮುಖ್ಯ ತಿರುಳು ಗೀತೆ. ಇದೊಂದು ಅತ್ಯಂತ ಉದಾತ್ತವಾದ ಪವಿತ್ರಗ್ರಂಥ: ಇದರ ಹನ್ನೊಂದನೆಯ ಅಧ್ಯಾಯದಲ್ಲಿ ಅದ್ಭುತವಾಗಿ ಭವಿಷ್ಯದ ದರ್ಶನವೇ ಆಗುತ್ತದೆ ಎಂಬುದನ್ನು ಇತ್ತೀಚೆಗೆ ವಿಶ್ವದ ಜನ ತಿಳಿಯಲು ಆರಂಭಿಸಿದ್ದಾರೆ.

ಇಂತಹ ಉತ್ತಮ ಪುಸ್ತಕಗಳಿಂದ ಮಾತ್ರ ನಮ್ಮ ನಿಜವಾದ ಸಂಸ್ಕೃತಿಯ ನೆಲೆ ತಿಳಿಯಬರುತ್ತದೆ ಮತ್ತು ನಮ್ಮ ಆಧುನಿಕ ಜೀವನದ ಸಂಘರ್ಷಗಳಿಗೆ ಒಂದು ದಿನ ಸಾಮರಸ್ಯವನ್ನು ಒದಗಿಸುತ್ತದೆ.

ಭವನದ ಈ ಕಾರ್ಯವನ್ನು ಸಫಲಗೊಳಿಸುವಲ್ಲಿ ಸಹಾಯ ಹಸ್ತ ನೀಡಿರುವ ಎಲ್ಲರನ್ನೂ ನಾನು ಮನಸಾರೆ ವಂದಿಸುತ್ತೇನೆ.

**ಕೆ. ಎಂ. ಮುನ್ಷಿ**



## ಮುನ್ನುಡಿ

ಈ ಭಾಷಣಗಳನ್ನು ವಿವಿಧ ಸಂಸ್ಥೆಗಳಲ್ಲಿ ಹಾಗೂ ವಿವಿಧ ಸಮಯದಲ್ಲಿ ನೀಡಲಾಗಿತ್ತು. ಗಾಂಧೀಜಿಯ ಚಿಂತನೆ ಮತ್ತು ತತ್ವಗಳ ವಿವಿಧ ಮುಖಗಳನ್ನು ಪರಿಚಯಿಸುವುದೇ ಇವುಗಳ ಮುಖ್ಯ ಉದ್ದೇಶವಾಗಿತ್ತು. ಈ ಎಲ್ಲವುಗಳಲ್ಲಿಯೂ ಗಾಂಧೀಜಿಯವರ ಮೂಲಭೂತ ತತ್ವ ಹಾಗೂ ಅವರ ಜೀವನ ಮತ್ತು ಕಾಯಕದ ತತ್ವಗಳು ಪ್ರಮುಖವಾಗಿ ಕಾಣಬರುತ್ತವೆ.

ಆದುದರಿಂದ ಈ ಉಪನ್ಯಾಸಗಳ ಪುಸ್ತಕಕ್ಕೆ ನೀಡಿರುವ ಸಾಮಾನ್ಯ ಹೆಸರು ಸಮಂಜಸವೆನಿಸುತ್ತದೆ.

ಗಾಂಧೀಜಿಯವರ ಚಿಂತನೆಯನ್ನು ಅಧ್ಯಯನ ಮಾಡುವವರನ್ನು ಈ ಪುಸ್ತಕ ಆಕರ್ಷಿಸಿದರೆ ನನ್ನ ಪ್ರಯತ್ನ ಸಾರ್ಥಕವಾದಂತೆಯೇ ಸರಿ.

ಬೆಂಗಳೂರು **ಆರ್. ಆರ್. ದಿವಾಕರ್**
೩ ಡಿಸೆಂಬರ್, ೧೯೬೪

## ಪ್ರಕಾಶಕರ ನುಡಿ

ಆರ್. ಆರ್. ದಿವಾಕರ್‌ರವರು ಈ ಕೆಳಗೆ ಕಂಡ ವಿಶ್ವವಿದ್ಯಾಲಯಗಳಲ್ಲಿ ನೀಡಿದ ಉಪನ್ಯಾಸಗಳನ್ನು ಸಂಕಲಿಸಲಾಗಿದೆ. ಇವುಗಳನ್ನು ಈ ಪ್ರಕಟನೆಯಲ್ಲಿ ಸೇರಿಸಿಕೊಳ್ಳಲು ಒಪ್ಪಿಗೆ ನೀಡಿದ ಎಲ್ಲರಿಗೂ ನಾವು ಕೃತಜ್ಞರಾಗಿದ್ದೇವೆ.

೧. ಯುಪಿ. ಅಗ್ರಿಕಲ್ಚರಲ್ ವಿಶ್ವವಿದ್ಯಾನಿಲಯ, ಪಂತ್‌ನಗರ್, ನೈನಿತಾನ್ ಜಿಲ್ಲೆ, (ಮಾರ್ಚಿ, ೭, ೧೯೬೪)

೨. ಮರಾಠವಾಡ ವಿಶ್ವವಿದ್ಯಾನಿಲಯ (ಏಪ್ರಿಲ್ ೮, ೧೯೬೪)

೩. ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್, ಪಾಟ್ನ ವಿಶ್ವವಿದ್ಯಾನಿಲಯ, ಪಾಟ್ನ (ಸೆಪ್ಟೆಂಬರ್ ೧೨, ೧೯೬೪).



## ಪರಿವಿಡಿ


| | |
|---|---|
| ಮುನ್ನುಡಿ | v |
| ಸಂದೇಶ | vii |
| ಹಾರೈಕೆ | viii |
| ಪ್ರಾಸ್ತಾವಿಕ ನುಡಿ | ix |
| ಪೀಠಿಕೆ | xi |
| ಅರಿಕೆ | xiv |
| ಕುಲಪತಿಗಳ ಪ್ರಸ್ತಾವನೆ | xv |
| ಮುನ್ನುಡಿ | xvii |
| ಪ್ರಕಾಶಕರ ನುಡಿ | xviii |
| ೧. ಗಾಂಧೀಜಿಯವರ ಜೀವನಮಾರ್ಗ ಮತ್ತು ಬೋಧನೆಗಳು | ೧ |
| ೨. ಗಾಂಧೀಜಿಯವರ ತತ್ತ್ವದರ್ಶನದ ರೂಪರೇಖೆಗಳು | ೧೨ |
| ೩. ಸಾರ್ವಜನಿಕ ಆಡಳಿತ ಗಾಂಧೀಜಿಯವರ ಪರಿಕಲ್ಪನೆ | ೪೬ |

Blank



# ಗಾಂಧೀಜಿ : ಒಬ್ಬ ಅನುಷ್ಠಾನ ತತ್ವದರ್ಶಿ

## ೧. ಗಾಂಧೀಜಿಯವರ ಜೀವನಮಾರ್ಗ ಮತ್ತು ಬೋಧನೆಗಳು

ಗಾಂಧೀಜಿ ದೇವರ ಹೆಸರನ್ನು ಉಚ್ಚರಿಸುತ್ತ, ತಪ್ಪು ಮಾಡಿ ಹಂತಕನ ಬಗೆಗೆ ಹೃದಯದಲ್ಲಿ ಪ್ರೀತಿಯನ್ನೂ, ಕ್ಷಮೆಯನ್ನೂ ಇರಿಸಿಕೊಂಡು, ಹುತಾತ್ಮರಾಗಿ ಮಡಿದು ಹದಿನೈದಕ್ಕೂ ಹೆಚ್ಚು ವರ್ಷಗಳಾದುವು. ಅವರ ಮರಣಧ್ಯೇಯ ಮಾನವಕುಲದ ಧ್ಯೇಯವಾಗಿತ್ತು. ಮನುಷ್ಯಜಾತಿ ಸತ್ಯ, ಅಹಿಂಸೆಗಳ ಮೂಲಕ ಮಾತ್ರ ತನ್ನ ದೊಡ್ಡ ಗುರಿಯತ್ತ ಮುನ್ನಡೆಯುವುದು ಸಾಧ್ಯವೆಂಬುದು ಅವರ ನಂಬಿಕೆಯಾಗಿತ್ತು. ದೈನಂದಿನ ಸತ್ಯದ ಶ್ರದ್ಧಾನ್ವಿತ ಅನ್ವೇಷಣೆ ಮತ್ತು ಪ್ರೇಮ, ಸೇವೆ, ಆತ್ಮವೇದನೆ, ತ್ಯಾಗಗಳ ಮೂಲಕ ಅದನ್ನು ಊರ್ಜಿತಗೊಳಿಸುವುದು ಅವರ ಅತ್ಯಂತ ಅಸಾಧಾರಣ, ಘಟನಾಪೂರ್ಣ ಹಾಗೂ ಕ್ರಿಯಾಶೀಲ ಬದುಕಿನ ಧ್ರುವನಕ್ಷತ್ರವಾಗಿತ್ತು. ಅವರ ಜೀವನಮಾರ್ಗ ಇಡೀ ಮನುಕುಲಕ್ಕೆ ಬಹಳ ಅರ್ಥಪೂರ್ಣವಾಗಿದೆ. ಅವರ ಉಪದೇಶಗಳು ಮಾನವ ಜೀವಿಗೂ, ಜನಾಂಗ, ಲಿಂಗ, ಧರ್ಮ, ರಾಷ್ಟ್ರೀಯತೆ, ಭಾಷೆ ಅಥವಾ ವಯಸ್ಸಿನ ಪರಿಗಣನೆಯಲ್ಲದೆ, ಅತೀವ ಮೌಲ್ಯವುಳ್ಳವಾಗಿವೆ; ಏಕೆಂದರೆ, ಅವು ವಿಶ್ವಸಾರ್ವತ್ರಿಕತೆಯನ್ನು ಮತ್ತು ವೈಜ್ಞಾನಿಕ ಖಚಿತತೆಯನ್ನು ಗಳಿಸಿಕೊಂಡಿವೆ. ಗಾಂಧೀಜಿಯ ವೈಜ್ಞಾನಿಕ ಮನೋಭಾವ ಮತ್ತು ಮಾನವ ಚಟುವಟಿಕೆಯ ಪ್ರತಿಯೊಂದು ಕ್ಷೇತ್ರದಲ್ಲೂ – ಆಧ್ಯಾತ್ಮಿಕ, ಅಂತೆಯೇ ಲೌಕಿಕ – ಅವರು ಸತ್ಯದೊಡನೆ ನಡೆಸಿದ ಪ್ರಯೋಗಗಳು, ಧರ್ಮ, ತತ್ತ್ವಶಾಸ್ತ್ರ ಮತ್ತು ನೀತಿಶಾಸ್ತ್ರಗಳ ಚರಿತ್ರೆಯಲ್ಲಿ ಅವರ ಉಪದೇಶಗಳಿಗೆ ಅನುಪಮ ಪ್ರಾಮುಖ್ಯವನ್ನೊದಗಿಸಿವೆ. ನಮ್ಮ ನಡುವೆ ಅವರ ಸಾನ್ನಿಧ್ಯದ ನಿಕಟಪೂರ್ವತೆ, ಸಾರ್ವಜನಿಕ ವೇದಿಕೆಯ ಮೇಲೆ ಎಂಬಂತೆ ಅವರು ನಡೆಸಿದ ಪಾರದರ್ಶಕ ಬದುಕು ಹಾಗೂ ಅವರ ಆಲೋಚನೆಗಳಿಗೆ ಸಂಬಂಧಿಸಿದಂತೆ ಲಭ್ಯವಾಗಿರುವ ಅಗಾಧ ಸಾಮಗ್ರಿ– ಇವು ಅವರ ಜೀವನ, ಬೋಧನೆಗಳ ವಾಸ್ತವಿಕ ಚಾರಿತ್ರಕತೆಗೆ ಕೊಡುಗೆಯಾಗಿವೆ. ಅವರು ಸಾರತಃ ತೀರಾ ಮಾನವೀಯವಾಗಿದ್ದರು; ಮನುಷ್ಯನ ಬಲ, ದೌರ್ಬಲ್ಯಗಳ ಎತ್ತರ, ಆಳಗಳನ್ನು ಅರಿತು ಅರ್ಥಮಾಡಿಕೊಂಡಿದ್ದರು. ಅವರು ಕಠಿನವಾಗಿ ಹೋರಾಡಿದರು ಮತ್ತು ತಮ್ಮ ವ್ಯಕ್ತಿತ್ವವನ್ನು ಕಟ್ಟಿಕೊಂಡರು; ಅತ್ಯಂತ ದಿಟವಾದ ಅರ್ಥದಲ್ಲಿ ಸ್ವನಿರ್ಮಿತ ವ್ಯಕ್ತಿಯಾಗಿದ್ದರು. ಅವರು

ಕನಸುಗಾರರಾಗಿರಲಿಲ್ಲ; ತಾವೇ ಕರೆದುಕೊಂಡಂತೆ ವ್ಯಾವಹಾರಿಕ ಆದರ್ಶವಾದಿಯಾಗಿದ್ದರು ಮತ್ತು ಎ.ಆರ್. ವಾಡಿಯಾ ಕರೆದಂತೆ ಅನುಷ್ಠಾನ ತತ್ತ್ವದರ್ಶಿಯಾಗಿದ್ದರು. ಹೀಗಾಗಿ, ಮನುಕುಲ ಭವಿಷ್ಯಕ್ಕೆಂತೋ ಅಂತೆಯೇ ಸ್ವಂತ ಭವಿಷ್ಯಕ್ಕೆ ಲಕ್ಷ್ಯಕೊಡುವ ಪ್ರತಿಯೊಬ್ಬರಿಗೂ ಅವರ ಜೀವನಪಥ ಹಾಗೂ ಬೋಧನೆಗಳು ವಸ್ತುಪಾಠಗಳಾಗುತ್ತವೆ.

ಜನತೆಯ ಸ್ವಾತಂತ್ರ್ಯಕ್ಷುಧೆ ಪರಾಕಾಷ್ಠೆಯನ್ನು ಮುಟ್ಟಿದ್ದಾಗ ಗಾಂಧೀಜಿ ಭರತಖಂಡದ ರಂಗದ ಮೇಲೆ ಕಾಣಿಸಿಕೊಂಡರು. ಇಲ್ಲಿ ಬ್ರಿಟಿಷ್ ಚಕ್ರಾಧಿಪತ್ಯದ ಬೇರುಗಳನ್ನು ಅಲುಗಿಸಲು ಹಿಂಸೆ ಮತ್ತು ಕ್ರಾಂತಿಕಾರಕ ಭಯೋತ್ಪಾದನೆಯೂ ಸೇರಿದಂತೆ ವಿವಿಧ ಮಾರ್ಗೋಪಾಯಗಳ ಪ್ರಯೋಗ ಮಾಡಲಾಗಿತ್ತು. ಆದರೆ, ಯಾವುದೂ ಯಶಸ್ವಿಯಾಗಿರಲಿಲ್ಲ. ಎಲ್ಲೆಡೆ ಆಶಾಭಂಗವಿತ್ತು. ಗಾಂಧೀಜಿ ಪ್ರತಿಭಟನೆಯ ಹೊಸ ಹಾದಿಯೊಂದನ್ನು ತೋರಿದರು; ಅದೊಂದು ಅಹಿಂಸಾಕ್ರಾಂತಿಯಾಗಿ ಬೆಳೆದು, ಸನ್ನಿವೇಶಗಳ, ಸುಯೋಗದಿಂದ ೧೯೪೭ರಲ್ಲಿ ಸ್ವಾತಂತ್ರ್ಯವನ್ನು ತಂದುಕೊಟ್ಟಿತ್ತು. ಗಾಂಧಿಯನ್ನು ಭಾರತ ಸ್ವಾತಂತ್ರ್ಯದ ಶಿಲ್ಪಿಯೆಂದು ಕರೆದರು, ಲಾರ್ಡ್ ಮೌಂಟ್ ಬ್ಯಾಟನ್. ಈ ಸಾಧನೆ ಗಾಂಧೀಜಿಗೆ ಭಾರತದ ಇತಿಹಾಸದಲ್ಲಿ ಶಾಶ್ವತ ಸ್ಥಾನವೊಂದನ್ನು ದೊರಕಿಸಿಕೊಟ್ಟಿತು; ಅವರು ಬಳಸಿದ ಅಹಿಂಸಾತ್ಮಕ ತಂತ್ರಗಳಿಂದಾಗಿ ಜಗತ್ತಿನ ಸ್ವಾತಂತ್ರ್ಯ ಹೋರಾಟಗಳ ಚರಿತ್ರೆಯಲ್ಲಿ ಅಷ್ಟೇ ಅರ್ಥಪೂರ್ಣವಾದ ಸ್ಥಾನವನ್ನೂ ಕೂಡ. ಆದ್ದರಿಂದ ಜನತೆಯ ಮನಸ್ಸುಗಳಲ್ಲಿ ಗಾಂಧೀಜಿಯ ಅತ್ಯಂತ ಪ್ರಮುಖ ಪ್ರತಿಮೆಯೆಂದರೆ ಒಬ್ಬ ಯಶಸ್ವಿ ಸ್ವಾತಂತ್ರ್ಯ ಯೋಧನದು ಮತ್ತು ರಾಷ್ಟ್ರೀಯ ವೀರನದು.

ಆದರೂ, ಅವರು ದೇಶಭಕ್ತಿಯುತ ನಾಯಕನಿಗಿಂತ ಬಹಳ ಮಿಗಿಲಾಗಿದ್ದರು ಎಂಬ ವಾಸ್ತವಾಂಶಕ್ಕೆ ನಮ್ಮನ್ನಿದು ಕುರುಡು ಮಾಡಕೂಡದು. ದಿಟವಾಗಿ, ಇತರ ರಂಗಗಳಲ್ಲಿ, ಅದರಲ್ಲೂ ಸಾಮಾಜಿಕ, ನೈತಿಕ ಮತ್ತು ಅಪ್ಪಟ ಆಧ್ಯಾತ್ಮಿಕ ರಂಗಗಳಲ್ಲಿ ಅವರ ಸಾಧನೆಗೆ ಹೋಲಿಸಿದರೆ, ಭಾರತದ ರಾಜಕಾರಣದಲ್ಲಿನ ಅವರ ಪಾತ್ರ ಕನಿಷ್ಠತಮ ಮಹತ್ತ್ವದ್ದೆಂದು ಭವಿಷ್ಯದಲ್ಲಿ ಭಾವಿಸಬಹುದು. ಮಾನವ ವ್ಯವಹಾರಗಳಲ್ಲಿ ಸತ್ಯವನ್ನು ನೆಲೆಗೊಳಿಸಲು ಮತ್ತು ಕೆಡುಕು, ಅನ್ಯಾಯಗಳ ವಿರುದ್ಧ ಹೋರಾಡಲು ಅವರು ಬಳಸಿದ ವೈಜ್ಞಾನಿಕ ಅಹಿಂಸಾ ತಂತ್ರಗಳು– ಬೇರೆ ಮಾತಿನಲ್ಲಿ, ಸತ್ಯಾಗ್ರಹ– ಸಾಮಾಜಿಕ ಕ್ರಿಯಾಶಕ್ತಿಗೆ ಅವರ ಅತ್ಯುನ್ನತವಾದ ಕೊಡುಗೆ. ಇದುವರೆಗೆ ವ್ಯಕ್ತಿಗಳಿಗೆ ಮತ್ತು ಮುಖ್ಯವಾಗಿ ಧಾರ್ಮಿಕ ಕ್ಷೇತ್ರಕ್ಕೆ ಸೀಮಿತವಾಗಿದ್ದ ಸತ್ಯಾಗ್ರಹವನ್ನು ಗಾಂಧಿ ಮಾನವ ಚಟುವಟಿಕೆಯ ಪ್ರತಿಯೊಂದು ಕ್ಷೇತ್ರದಲ್ಲಿ ಯಶಸ್ವಿಯಾಗಿ ಬಳಸಿದರು. ಅವರು ಬದುಕಿನ ಬಗೆಗೆ ಸಮಗ್ರ ದೃಷ್ಟಿಯನ್ನು ತಳೆದರು; ಲೌಕಿಕ–ಆಧ್ಯಾತ್ಮಿಕ, ಧಾರ್ಮಿಕ–ರಾಜಕೀಯ, ಸಾಮಾಜಿಕ–ವೈಯಕ್ತಿಕ ಎಂದು ಅದನ್ನು ಅಂಕಣಗಳನ್ನಾಗಿ



ವಿಭಜಿಸಲು ನಿರಾಕರಿಸಿದರು. ಅವರ ಪಾಲಿಗೆ ಇಡೀ ಮಾನವ ಜೀವನ ಏಕಾಖಂಡವಾಗಿತ್ತು; ಎತ್ತರೆತ್ತರಕ್ಕೆ ಏರುವ ಅಭೀಪ್ಸೆ ಎಲ್ಲ ವಿಕಾಸದ ತಳಹದಿಯಾಗಿತ್ತು; ಸತ್ಯದ, ದೇವರ, ಪರಮಾತ್ಮನ ಸಾನ್ನಿಧ್ಯವನ್ನು ಪ್ರತಿಕ್ಷಣವೂ ಸಾಕ್ಷಾತ್ಕರಿಸಿಕೊಳ್ಳುವುದು ಅತ್ಯುನ್ನತ ಧ್ಯೇಯವಾಗಿತ್ತು; ಕಡೆಯದಾಗಿ, ಪ್ರೀತಿ, ಅಹಿಂಸೆಗಳ ಆಯುಧಗಳಿಂದ ಆರ್ಥಿಕ, ಸಾಮಾಜಿಕ, ರಾಜಕೀಯ ಇತ್ಯಾದಿ ಎಲ್ಲ ಆತಂಕಗಳನ್ನು ಎದುರಿಸಿ ಗೆಲ್ಲುವುದು ಮತ್ತು ತನ್ಮೂಲಕ ದಾರಿ, ಗುರಿಗಳಲ್ಲಿ ಏಕೈಕ ಪ್ರಕ್ರಿಯೆಯಲ್ಲಿ ಕೂಡಿಸುವುದು ಬದುಕಿನ ಅರ್ಥವೇ ಆಗಿತ್ತು.

ಒಂದು ಸಂಯೋಜಿತ ಆಧ್ಯಾತ್ಮಿಕ ದೃಷ್ಟಿ ಮತ್ತು ಪ್ರತಿಯೊಂದು ಮಾನುಷ ಚಟುವಟಿಕೆಯನ್ನೂ ಆಧ್ಯಾತ್ಮಿಕ ಉನ್ನತೀಕರಣದ ಸಾಧನವನ್ನಾಗಿ ಪರಿವರ್ತಿಸುವ ನಿರಂತರ ಪ್ರಯತ್ನ ಗಾಂಧೀಜಿಯ ಜೀವನ, ಉಪದೇಶಗಳ ಕೀಲಿಕೈಯಾಗಿದೆ. ನಾಸ್ತಿಕರು ಮತ್ತು ವಿಜ್ಞಾನಿಗಳು ದೇವರ ಅಸ್ತಿತ್ವವನ್ನು ನಿರಾಕರಿಸಿರಬಹುದು ಮತ್ತು ಈಗಲೂ ನಿರಾಕರಿಸಬಹುದು; ಆದರೆ ಜ್ಞಾನದ ಉಪಕರಣಗಳು ಪರಿಗ್ರಹಿಸಿದಂತೆ, ಪ್ರಯೋಗಗಳು ಪರೀಕ್ಷಿಸಿದಂತೆ ಮತ್ತು ತರ್ಕ ಒಪ್ಪಿಕೊಂಡಂತೆ ಸತ್ಯದ ಅಸ್ತಿತ್ವವನ್ನು ಯಾರೂ ನಿರಾಕರಿಸಲಾರರೆಂದು ಗಾಂಧಿ ಒತ್ತಿ ಹೇಳಿದರು. ಆದ್ದರಿಂದ, ಸತ್ಯವೇ ದೇವರೆಂದು ಅವರು ಘೋಷಿಸಿದರು. ಅವರು ಭಾರತೀಯ ಕೃಷಿಕನ ದಾರಿದ್ರ್ಯ ನಿವಾರಣೆಗಾಗಿ ಚರಕವನ್ನು ತಿರುಗಿಸಲಿ ಅಥವಾ ಅಹಮದಾಬಾದಿನ ಗಿರಣಿ ಕಾರ್ಮಿಕರ ಮುಷ್ಕರಕ್ಕೆ ಮುಂದಾಳಾಗಿರಲಿ ಅಥವಾ ಹರಿಜನೋದ್ಧಾರಕ್ಕಾಗಿ ಉಪವಾಸ ಮಾಡಿರಲಿ, ಅಥವಾ ನೌಖಾಲಿಯ ದುರಂತ ವಾತಾವರಣದಲ್ಲಿ ಸಂಚರಿಸಿರಲಿ ಅಥವಾ ದಂಡಿಯ ಉಪ್ಪಿನ ಸತ್ಯಾಗ್ರಹ ಯಾತ್ರೆಯನ್ನು ಮುನ್ನಡೆಸಿರಲಿ, ಬದುಕಿನ ಸತ್ಯವನ್ನು, ಅನುಭವದ ಸತ್ಯವನ್ನು ಸ್ಥಾಪಿಸುವುದು ಮತ್ತು ಅಹಿಂಸಾ ವಿಧಾನದ ಮೂಲಕ ಆ ಪ್ರಯತ್ನವನ್ನು ಕೈಕೊಳ್ಳಲು ಮಾನವಚೇತನವನ್ನು ಎಚ್ಚರಿಸುವುದು ಅವರ ಗುರಿಯಾಗಿತ್ತು. ಆರ್ಥಿಕ ಮತ್ತು ಸಾಮಾಜಿಕ ಸುಧಾರಣೆ, ಕೋಮು ಸಾಮರಸ್ಯ, ರಾಜಕೀಯ ಸ್ವಾತಂತ್ರ್ಯ, ಧರ್ಮ ಎಲ್ಲವೂ ಅವರಿಗೆ ಸಾರತಃ ಅಖಂಡ ಮತ್ತು ಆಧಾತ್ಮಿಕವಾಗಿದ್ದುವು; ಏಕೆಂದರೆ, ಅವು ತಮ್ಮನ್ನು ತಾವು ಮೀರುವ ಮತ್ತು ಅಶೋಷಣೆ, ಪ್ರೀತಿ, ಸಾಮರಸ್ಯ, ಪರಸ್ಪರ ಸಹಕಾರ ಹಾಗೂ ಎಲ್ಲಕ್ಕಿಂತ ಮಿಗಿಲಾಗಿ ಸ್ನೇಹ ಸಂಬಂಧವನ್ನು ಆಧರಿಸಿದ ಮಾನವ ಅಸ್ತಿತ್ವದ ಉನ್ನತತರ ಪ್ರಕಾರವೊಂದರ ಸತ್ಯವನ್ನು ಸ್ಥಾಪಿಸುವ ಮೂಲಭೂತ ಮಾನವಾಭೀಪ್ಸೆಯ ಸಾಕ್ಷಾತ್ಕಾರಕ್ಕೆ ಅವು ಸಾಧನವಾಗಿದ್ದುವು. ಅವರ ಮನಸ್ಸಿನಲ್ಲಿ ವೈಯಕ್ತಿಕ ಮತ್ತು ಸಾಮಾಜಿಕ ಉದ್ಧಾರದ ನಡುವೆ ವಿಭಜನೆಯಿರಲಿಲ್ಲ. ವಾಸ್ತವವಾಗಿ, ವೈಯಕ್ತಿಕ ಉದ್ಧಾರ ಶುದ್ಧ, ಸಾತ್ತ್ವಿಕ, ಸತ್ಯಪೂರ್ಣ, ಅಹಿಂಸಾತ್ಮಕ ವಿಧಾನಗಳ ಮೂಲಕ ಸಾಮಾಜಿಕ ಉದ್ಧಾರಕ್ಕೆ ಪ್ರಯತ್ನಿಸುವುದರಲ್ಲಿದೆ. ಬಡವರಲ್ಲಿ ಅತಿ ಬಡವರೊಡನೆ ಮತ್ತು ಅತಿ ದೀನರಲ್ಲಿ

ದೀನರೊಡನೆ ಅವರ ಅಭಿನ್ನತೆ, ಎಲ್ಲ ಹಂತಗಳಲ್ಲಿ ಹಾಗೂ ಕ್ಷೇತ್ರಗಳಲ್ಲಿ ಸಾಮಾಜಿಕ ಉದ್ಧಾರಕ್ಕಾಗಿ ಅವರು ಕೈಗೊಂಡ ಶ್ರದ್ಧಾನ್ವಿತ, ತೀವ್ರ ಪ್ರಯತ್ನದ ಉಪಸಿದ್ಧಾಂತವಾಗಿತ್ತು. ಅವರ ಸಾಮಾಜಿಕ ಮತ್ತು ಆರ್ಥಿಕ ಸರ್ವೋದಯ ಧ್ಯೇಯ ಅವರ ಈ ಧೋರಣೆಯ ಫಲವಾಗಿತ್ತು. ಅವರ ನೀತಿಸಂಹಿತೆ, ವಿಶಾಲಾಧಾರವುಳ್ಳ ಧಾರ್ಮಿಕ ಮನೋಭಾವ; ಮಾನವೀಯತೆ, ವಿಕೇಂದ್ರೀಕೃತ ಆರ್ಥಿಕತೆಯ ಮತ್ತು ರಾಜಕೀಯ ಪ್ರಸರಣದ ಬಗೆಗಿನ ಭಾವನೆಗಳು– ಇವೆಲ್ಲ ಹಿಂದೆ ಸೂಚಿಸಿದ ಅವರ ಜೀವನ ದರ್ಶನವನ್ನು ಆಧರಿಸಿವೆ.

ನಾನು ಅವರ ವ್ಯಕ್ತಿತ್ವವನ್ನು ಕುರಿತು ಅಲ್ಪಸ್ವಲ್ಪ ಹೇಳುವ ಮತ್ತು ಜೀವನಕ್ಕೆ ಮತ್ತು ಅದರ ಸಮಸ್ಯೆಗಳಿಗೆ ಸಂಬಂಧಿಸಿದ ಕೆಲವು ಅತ್ಯಂತ ಮುಖ್ಯ ವಿಷಯಗಳ ಬಗೆಗಿನ ಅವರ ದೃಷ್ಟಿಯನ್ನು ಪ್ರಸ್ತಾಪಿಸುವ ಮುನ್ನ, ಅವರು ಬಳಸಿದ ಉಕ್ತಿಗಳಲ್ಲಿ ಕೆಲವನ್ನು ಸಂಕ್ಷಿಪ್ತವಾಗಿ ವಿವರಿಸಿ, ಅವುಗಳ ಅರ್ಥವನ್ನು ಎತ್ತಿ ಹೇಳುತ್ತೇನೆ. ಅವರೊಬ್ಬ ಶ್ರದ್ಧಾನ್ವಿತ ವ್ಯಕ್ತಿಯಾಗಿದ್ದರು; ಆದರೆ ಅಂಧಶ್ರದ್ಧೆ ಅದರ ಅರ್ಥವಾಗಿರಲಿಲ್ಲ. ಅದನ್ನವರು ಯಾವಾಗಲೂ ತರ್ಕದಿಂದ ಪರೀಕ್ಷಿಸುತ್ತಿದ್ದರು ಮತ್ತು ತರ್ಕ ತಲುಪಲಾರದ ಅಥವಾ ವಿವರಿಸಲಾರದ ವಿಷಯಗಳಲ್ಲಿ ಶ್ರದ್ಧೆಯನ್ನು ಅವಲಂಬಿಸುತ್ತಿದ್ದರು. ನಿದರ್ಶನಕ್ಕೆ ಅಸ್ತಿತ್ವದ ಸರ್ವಸ್ವವಾದ ಯಾವುದೋ ಪರಾಶಕ್ತಿಯಲ್ಲಿನ ಅವರ ನಂಬಿಕೆ ಮೂಲಭೂತವಾಗಿತ್ತು. ಈ ವಿಷಯಗಳಲ್ಲಿ ಎಲ್ಲ ಧರ್ಮಗಳ ಮತ್ತು ಎಲ್ಲ ಕಾಲಗಳ ಋಷಿ, ಸಂತರ ಪ್ರಾಮಾಣ್ಯವನ್ನು ಅವರು ಒಪ್ಪುತ್ತಿದ್ದರು. ಅವರ ಪಾಲಿಗೆ ಪ್ರತಿಯೊಂದು ಧರ್ಮಗ್ರಂಥವೂ– ಹಿಂದು, ಕ್ರೈಸ್ತ ಅಥವಾ ಮುಸ್ಲಿಂ ಯಾವುದೇ ಆಗಿರಲಿ– ಶ್ರದ್ಧಾಯೋಗ್ಯವೂ ಪವಿತ್ರವೂ ಆಗಿತ್ತು. ಅವು ಒಂದೇ ಮೂಲಸತ್ಯವನ್ನು ಬೋಧಿಸುತ್ತವೆ. ಮಾನವ ಜ್ಞಾನದ ಏಕೈಕ ಉಪಕರಣವಾದ ತರ್ಕವೇ ಯಾವುದೋ ಶ್ರದ್ಧೆಯನ್ನು ಆಧರಿಸಿದೆ ಎಂದು ಅವರು ಹೇಳುತ್ತಿದ್ದರು. ಸೂರ್ಯ ನಾಳೆ ಹುಟ್ಟುತ್ತಾನೆ ಮತ್ತು ಎಲ್ಲರೂ ಸಾಯುತ್ತಾರೆ ಎನ್ನುವುದು ತರ್ಕಪ್ರಮಾಣ; ಆದರೆ ಸತತಾನುಭವ ನಮ್ಮನ್ನು ವಂಚಿಸುವುದಿಲ್ಲ ಎಂಬ ನಂಬಿಕೆಯನ್ನು ಆ ಪ್ರಾಮಾಣ್ಯತೆ ಆಧರಿಸಿದೆ.

ಸತ್ಯವೇ ದೇವರು, ದೇವರೇ ಸತ್ಯ, ಪ್ರೇಮ, ಬೆಳಕು ಮತ್ತು ಸಚ್ಚಿದಾನಂದ ಎಂಬ ನಿರ್ಧಾರಕ್ಕೆ ಅವರು ಬಂದಿದ್ದರು. ಇದು ಸಾಕಷ್ಟು ಸಮರ್ಪಕವಾದ ಭಗವಂತನ ವರ್ಣನೆ. ಇರತಕ್ಕದ್ದು, ಸ್ವಂತ ಹಕ್ಕಿನ ಪ್ರಕಾರ ಅಸ್ತಿತ್ವದಲ್ಲಿರತಕ್ಕದ್ದು, ಸತ್ಯ. ಆ ಪರಾಶಕ್ತಿಯೆ, ಅಂತಿಮ ವಾಸ್ತವತೆ ಸತ್ಯವಾಗಿತ್ತು; ಆದರೆ ಏಕಕಾಲದಲ್ಲಿ ಅದನ್ನವರು ಜೀವನಸತ್ಯವನ್ನೂ ಅನುಭವ ಸತ್ಯವನ್ನೂ ಅರಿಯುವುದರಿಂದ ಮತ್ತು ಆ ಜೀವನ ಸತ್ಯಕ್ಕೆ ಅನುಗುಣವಾಗಿ ಬದುಕಲು ಪ್ರಯತ್ನಿಸುವುದರಿಂದ ಪ್ರತಿದಿನವೂ ಪ್ರತಿಗಂಟೆಯು ಪ್ರತಿ ಹೆಜ್ಜೆಯಲ್ಲೂ ಸಾಕ್ಷಾತ್ಕರಿಸಿಕೊಳ್ಳಬಯಸಿದರು. ಈ ವಿಷಯದಲ್ಲಿ ಅವರ ಅಂತಃಪ್ರಜ್ಞೆ ಒಳಬೆಳಕು ಅವರಿಗೆ ಮಾರ್ಗದರ್ಶಿಯಾಗಿತ್ತು. ಅಂತಃಪ್ರಜ್ಞೆ ಪ್ರತಿಯೊಂದು



ಮಾನವ ಹೃದಯದಲ್ಲೂ ಶಾಶ್ವತ ಸಾಕ್ಷಿಯ, ಸತ್ಯದ ಮತ್ತು ಸ್ವತಃ ಭಗವಂತನ ಪ್ರತಿನಿಧಿಯಾಗಿತ್ತು. 'ಸಾಕ್ಷಿಯಾಗಿ ದೇವರು' ಅವರ ಪಾಲಿಗೊಂದು ವಾಸ್ತವಿಕತೆ ಯಾಗಿತ್ತು; ಅರ್ಥರಹಿತ ನುಡಿಗಟ್ಟಾಗಿರಲಿಲ್ಲ.

ನಮ್ಮ ಜ್ಞಾನದ ಉಪಕರಣಗಳು ಪರಿಗ್ರಹಿಸಿದಂತೆ ಮತ್ತು ತರ್ಕ, ಅಂತಃಸ್ಸಾಕ್ಷಿಗಳು ಪರೀಕ್ಷಿಸಿದಂತೆ ಸತ್ಯ ಎಲ್ಲ ಜ್ಞಾನ, ಕ್ರಿಯೆಗಳ ತಳಹದಿಯಾದರೂ ಪ್ರೇಮದ ಮೂಲಕವೆ, ಅಹಿಂಸಾ ವಿಧಾನದ ಮೂಲಕವೇ ಅದನ್ನು ಸಾಕ್ಷಾತ್ಕರಿಸಿಕೊಂಡು, ಸ್ಥಾಪಿಸಬೇಕಿತ್ತು. ಅವರ ಪಾಲಿಗೆ ಅಹಿಂಸೆ ಎಂಬುದು ಆಲೋಚನೆ, ಮಾತು, ಕ್ರಿಯೆಗಳಲ್ಲಿ ಅನ್ಯರಿಗೆ ಹಿಂಸಾಸಾಹಿತ್ಯ ಎಂಬ ಅರ್ಥದಲ್ಲಿ ಒಂದು ನಕಾರಾತ್ಮಕ ಶಬ್ದವಷ್ಟೆ ಆಗಿರಲಿಲ್ಲ; ಮಗುವಿನ ವಿಷಯದಲ್ಲಿ ತಾಯಿಗಿರುವಂತೆ ಪ್ರೀತಿ ಮತ್ತು ಹಿತಾಸಕ್ತಿಯ ಭಾವಾತ್ಮಕ ಅಭೇದವಾಗಿತ್ತು. ನಿಸ್ವಾರ್ಥ ಸೇವೆ ಹಾಗೂ ಅತ್ಯುನ್ನತ ಬಗೆಯ ತ್ಯಾಗದಲ್ಲಿ ಶತ್ರು ಅಥವಾ ಎದುರಾಳಿಯನ್ನೂ ಮುಳುಗಿಸಿಬಿಡುವ ಆಕ್ರಮಣಕಾರಿ ಸಾತ್ತ್ವಿಕತೆ ಅಹಿಂಸೆಯ ಅರ್ಥವಾಗಿತ್ತು. ಗಾಂಧಿ ತಮ್ಮ ಅನುಭವದ ಸತ್ಯವನ್ನು ಬಲಾತ್ಕಾರಪೂರ್ವಕವಾಗಿ ಇತರರ ಮೇಲೆ ವಿಧಿಸುತ್ತಿರಲಿಲ್ಲ; ತಮ್ಮ ಸತ್ಯವನ್ನು ಸಾಬೀತುಪಡಿಸಲು ಸಾವಿನವರೆಗೂ ಅತ್ಯುನ್ನತ ಆತ್ಮಹಿಂಸೆಯನ್ನು ತಾಳಿಕೊಳ್ಳುತ್ತಿದ್ದರು. ಅವರು ತಮ್ಮನ್ನು ತಾವು ಕರೆದುಕೊಂಡಂತೆ, ಪ್ರಮಾದಶೀಲ ಮರ್ತ್ಯನಿಗೆ, ಮನಸ್ಸಿಲ್ಲದ ಸಹಜೀವಿಗಳ ಮೇಲೆ ಏನನ್ನೇ ಆಗಲಿ ಬಲವಂತವಾಗಿ ಹೊರಿಸಲು, ಹಿಂಸೆಯನ್ನು ಬಳಸುವ ಹಕ್ಕಿಲ್ಲ. ಅವರಿಗೆ ಮನುಷ್ಯನ ಸಾರರೂಪಿ ಒಳ್ಳೆಯತನದಲ್ಲಿ ನಂಬಿಕೆಯಿದ್ದುದರಿಂದ ಮತ್ತು ಪ್ರತಿಯೊಬ್ಬ ಮಾನವ ಜೀವಿಯೂ ಪರಿಪೂರ್ಣತೆಯ ಪಥದಲ್ಲಿ ತೊಡಗಿದ ಯಾತ್ರಿಕನೆಂದು ಅವರು ನಂಬಿದ್ದುದರಿಂದ, ಒಬ್ಬ ಮನುಷ್ಯನನ್ನು– ಅವನೆಷ್ಟೇ ದುಷ್ಟನಾಗಿದ್ದರೂ, ದ್ವೇಷಿಸುವುದನ್ನು ಎಂದೂ ಕಲ್ಪಿಸಿಕೊಳ್ಳಲಾರದವರಾಗಿದ್ದರು. ವ್ಯಕ್ತಿಯನ್ನು ಅವರು ಪ್ರೀತಿಸುತ್ತಿದ್ದರು ಮತ್ತು ಯಾವಾಗಲೂ ಸತ್ಯಪೂರ್ಣವೂ ಅಹಿಂಸಾತ್ಮಕವೂ ಆದ ವಿಧಾನಗಳಲ್ಲಿ ಅವನನ್ನು ದುರ್ಮಾರ್ಗದಿಂದ, ಕೆಟ್ಟ ಆಲೋಚನೆಗಳಿಂದ ಮತ್ತು ದ್ವೇಷಪೂರ್ಣ ಕ್ರಿಯೆಗಳಿಂದ ತಪ್ಪಿಸಲು ಯತ್ನಿಸುತ್ತಿದ್ದರು. ಇದು, ಅಜ್ಞಾನ, ದುಷ್ಪ್ರವೃತ್ತಿಗಳನ್ನು ಹೋಗಲಾಡಿಸಲು ಸ್ನೇಹಿತ ಮಾಡುವ ಪ್ರಯತ್ನಗಳಿಗೆ ಸ್ಪಂದಿಸುವಂತೆ ಸಂಬಂಧಿಸಿದ ವ್ಯಕ್ತಿಯ ಆತ್ಮವನ್ನು ಆಹ್ವಾನಿಸುತ್ತಿತ್ತು.

ಗಾಂಧೀಜಿ ತಮ್ಮನ್ನು ಧಾರ್ಮಿಕ ವ್ಯಕ್ತಿಯೆಂದು ಕರೆದುಕೊಳ್ಳುತ್ತಿದ್ದರು; ಆದರೆ ತಾವು ಉದ್ದೇಶಿಸಿದ್ದುದು ಸಾಂಪ್ರದಾಯಿಕ ಅಥವಾ ಆಚರಣಾತ್ಮಕ, ಇಲ್ಲವೆ ಸೈದ್ಧಾಂತಿಕ ಧರ್ಮವಲ್ಲ ಎಂದು ಯಾವಾಗಲೂ ಒತ್ತಿ ಹೇಳುತ್ತಿದ್ದರು. 'ಎಲ್ಲ ಧರ್ಮಗಳ ಹಿಂದಿನ ಧರ್ಮ' ಎಂಬುದು ಅವರ ಆಶಯವಾಗಿತ್ತು. ಎಲ್ಲ ವಿದ್ಯಮಾನಗಳ ಹಿಂದೆ, ಅತೀತವಾಗಿರುವ ಏನೋ ಒಂದರಲ್ಲಿ ನಂಬಿಕೆಯ ಸಂಕಲ್ಪ, ಜೀವಾತ್ಮ–

ಪರಮಾತ್ಮರ ನಡುವೆ ಅತ್ಯಂತ ಆಪ್ತ ಸಂಬಂಧವನ್ನು ಸ್ಥಾಪಿಸಲು ಉತ್ಸುಕವಾಗಿರುವ ಸಂಕಲ್ಪ: ಅದು ಮಾನವನಲ್ಲಿ ಬೇರೂರಿರುವ ಧಾರ್ಮಿಕ ಪ್ರವೃತ್ತಿ; ಅವನಲ್ಲಿ ಅಂತರ್ಗತವಾಗಿರುವ ಎಲ್ಲ ಆಧ್ಯಾತ್ಮಿಕ ಅಭೀಪ್ಸೆಯ ಮೂಲ.

ಗಾಂಧೀಜಿ ಆಗಾಗ ಸತ್ಯಾಗ್ರಹ ವಿಜ್ಞಾನಗಳ ಮತ್ತು ಸತ್ಯದೊಡನೆ ತಮ್ಮ ಪ್ರಯೋಗಗಳನ್ನು ಉಲ್ಲೇಖಿಸುತ್ತಾರೆ. ಸತ್ಯಾಗ್ರಹ ಶಬ್ದ ಭಾರತೀಯ ನಿಘಂಟುವಿಗೆ ಒಂದು ಗಮನಾರ್ಹವಾದ ಸೇರ್ಪಡೆ. ಅದು ಒಂದು ಹೊಸ ಶಬ್ದ ಮಾತ್ರವಲ್ಲ; ಮನುಷ್ಯನಲ್ಲಿರುವ ಆತ್ಮಶಕ್ತಿಯನ್ನು ಬಳಸುವ ವಿಶಿಷ್ಟ ತಂತ್ರವೆಂತೋ ಅಂತೆ ಒಂದು ನೂತನ ಜೀವನಮಾರ್ಗ ಕೂಡ. ಅಸತ್ ಶಕ್ತಿಗಳೊಡನೆ ಹೋರಾಟದಲ್ಲಿ ಮತ್ತೆಲ್ಲವೂ, ಪ್ರತಿಯೊಂದು ಶಕ್ತಿ ಮತ್ತು ಬಲ, ಒಬ್ಬ ವ್ಯಕ್ತಿಯಲ್ಲಿ ತಪ್ಪಬಹುದು, ಪ್ರತಿಯೊಂದು ಹಣದ ಮತ್ತು ಆಯುಧ ವಿಫಲವಾಗಬಹುದು; ಆದರೆ ಆತ್ಮಶಕ್ತಿ ಎಂದೂ ಸೋಲಲಾರದು. ಏಕೆಂದರೆ, ಆತ್ಮ ಬದುಕಿರುವವರೆಗೆ ಮತ್ತು ಸಾಯದಿರುವವರೆಗೆ ಪ್ರತಿಯೊಂದು ಆತ್ಮದಲ್ಲೂ ಅದು ಮೂಲಭೂತವೂ ಅಂತರ್ಗತವೂ ಆಗಿರುತ್ತದೆ. ಆದರೂ ಒತ್ತಿ ಹೇಳಲು ಮತ್ತು ಕ್ರಿಯಾಶೀಲವಾಗಲು ಆತ್ಮಶಕ್ತಿಗೆ ಬೇಕಾದುದು ತಪ್ಪು–ಒಪ್ಪುಗಳ ಪ್ರಜ್ಞೆಯ ಜಾಗೃತಿ ಮತ್ತು ಮಾತಾಗಲೂ ಸರಿಯಾದುದನ್ನು ಮಾಡುವ ಹಾಗೂ ತಪ್ಪಾದುದನ್ನು ಅಪವಾದವಿಲ್ಲದೆ ತೊರೆಯುವ ಸಂಕಲ್ಪ. ಈ ಪ್ರಜ್ಞೆ ಗಾಂಧೀಜಿಯಲ್ಲಿ ಪರಾಕಾಷ್ಠದಶೆಗೆ ಬೆಳೆದಿದ್ದುದರಿಂದ ಮತ್ತು ಎಲ್ಲ ವಿಷಯಗಳಲ್ಲಿ ಹಾಗೂ ಎಲ್ಲ ಜೀವನ ರಂಗಗಳಲ್ಲಿ ಪ್ರಾಣಾಪಾಯ ಸಂದರ್ಭದಲ್ಲೂ ಸರಿಯಾದುದಕ್ಕೆ ಪರಮಾವಧಿ ಅಂಟಿಕೊಳ್ಳಲು ಅವರು ಸ್ವಯಂ ತರಬೇತಿ, ಶಿಸ್ತುಗಳಿಗೆ ಒಳಪಟ್ಟುದರಿಂದ, ಅವರ ಜೀವನವಿಧಾನ ಒಬ್ಬ ಸತ್ಯಾಗ್ರಹಿಯ– ಸುಖದುಃಖದಲ್ಲಿ ಮತ್ತು ಅಗ್ನಿಪರೀಕ್ಷೆಗಳಲ್ಲಿ ಸದ್ಯಕ್ಕೆ ಅಂಟಿಕೊಳ್ಳುವವನ– ಜೀವನವಿಧಾನವಾಗಿ ಪರಿಣಮಿಸಿತು. ತಪ್ಪಿನ, ಕೆಡುಕಿನ, ಅನ್ಯಾಯದ ವಿರುದ್ಧ ಈ ಹೋರಾಟ ಅವರ ಆಂತರಿಕ ಜೀವನಕ್ಕೆ ಅಥವಾ ಬಾಹ್ಯ ಜೀವನಕ್ಕೆ, ವೈಯಕ್ತಿಕ ತಪ್ಪುಗಳಿಗೆ ಅಥವಾ ಸಾಮಾಜಿಕ ತಪ್ಪುಗಳಿಗೆ, ಆರ್ಥಿಕ ಕೆಡುಕುಗಳಿಗೆ ಅಥವಾ ರಾಜಕೀಯ ಕೆಡುಕುಗಳಿಗೆ ಸೀಮಿತವಾಗಿರಲಿಲ್ಲ; ಎಲ್ಲ ರಣರಂಗಗಳಲ್ಲಿ ನಿಷ್ಠುರವೂ ಅವಿಶ್ರಾಂತವೂ ಆದ ಕಾಳಗವಾಗಿತ್ತು; ಆದರೆ ಯಾವಾಗಲೂ ಅಹಿಂಸೆಯ ಆಯುಧಗಳ ಸಹಿತ ಎಲ್ಲ ಮಾನವ ವ್ಯವಹಾರಗಳಿಗೆ ಅಹಿಂಸೆಯ ವಿಸ್ತರಣ ಮತ್ತು ಅಹಿಂಸಾ ಶಕ್ತಿಯನ್ನು– ಅದು ನೈತಿಕ ಶಕ್ತಿ ಅಥವಾ ಆತ್ಮಶಕ್ತಿ ಅಥವಾ ಸತ್ಯಶಕ್ತಿ ಅಥವಾ ಪ್ರೇಮಶಕ್ತಿಯಾಗಿರಲಿ, ಅದನ್ನು ಸಾಮೂಹಿಕ ಪರಿಮಾಣದಲ್ಲಿ ವ್ಯವಸ್ಥೆಗೊಳಿಸುವ ತಂತ್ರ, ಸಾಮಾಜಿಕ ಪರಿವರ್ತನೆಯ ತಂತ್ರಜ್ಞಾನಕ್ಕೆ ಗಾಂಧೀಜಿಯ ವಿಶೇಷ ಕೊಡುಗೆ. ಅದು, ಯಾವುದೇ ಬದಲಾವಣೆಯಾಗುವುದಕ್ಕೆ ಮುನ್ನ, ಹಿಂಸೆ ಮತ್ತು ವಿನಾಶವನ್ನೊಳಗೊಳ್ಳುವ ಕ್ರಾಂತಿಕಾರಿ ವಿಧಾನಗಳಿಗೆ ಹೋಲಿಸಿದಾಗ ಸ್ವರೂಪದಲ್ಲಿ ಸಂಪೂರ್ಣ



ವಿಕಾಸಾತ್ಮಕವಾದದ್ದು. ಗಾಂಧೀಜಿಯ ವಿಧಾನ ಪ್ರೇಮ, ಸೇವೆಗಳ ರಚನಾತ್ಮಕ ಶಕ್ತಿಗಳ ಹಾಗೂ ಎಲ್ಲ ಅತೀವ ಮಾನವೀಯ ಗುಣಗಳ ಉದಾತ್ತೀಕರಣದ ಮೂಲಕ ವ್ಯಕ್ತಿ, ಕೃತಿಗಳನ್ನು ಬೆಳೆಸುವ ಉನ್ನತ, ಉದಾತ್ತ ನೈತಿಕ ಶಕ್ತಿಗಳನ್ನು ಕ್ರಿಯಾಶೀಲವಾಗಿಸಿದರೆ, ಕ್ರಾಂತಿಕಾರಿ ವಿಧಾನ ಪಾಶವೀಕರಣ ಶಕ್ತಿಗಳನ್ನು ಅಭಿವ್ಯಕ್ತಿಸುತ್ತದೆ; ಅಷ್ಟರಮಟ್ಟಿಗೆ ಅದು ಸ್ವರೂಪದಲ್ಲಿ ವಿಕಾಸ ವಿರೋಧ ಎನ್ನಬಹುದು. ಆದ್ದರಿಂದ ಸತ್ಯಾಗ್ರಹವೊಂದು ಹೊಸ ಜೀವನವಿಧಾನ; ಕುಂದುಕೊರತೆಯ ಪರಿಹಾರಕ್ಕಾಗಿ ಅಥವಾ ಸಾಮಾಜಿಕ, ಇಲ್ಲವೆ ಆರ್ಥಿಕ ಅನಿಷ್ಟದ ವಿರುದ್ಧ ಹೋರಾಡಿ ಅದನ್ನು ತೊಲಗಿಸುವುದಕ್ಕಾಗಿ ಅಲ್ಲಿ ಇಲ್ಲಿ ಬಳಸುವ ತಂತ್ರ ಮಾತ್ರವಲ್ಲ. ಅದು ಆಗಾಗ ಧರಿಸುವ ವಸ್ತ್ರದಂತಲ್ಲ; ನಮ್ಮ ಮೈ ಚರ್ಮದಂತೆ ಮತ್ತು ನಮ್ಮ ಬದುಕಿನ ಉಸುರಿನಂತೆ. ಅದು ನಮ್ಮ ಬದುಕಿನ ನಿರಂತರ ಶಿಸ್ತು ಅಥವಾ ಸತ್ಯ, ಅಹಿಂಸೆಗಳ ಯೋಗ– ಹಾಗೆ ಕರೆಯಬಹುದಾದರೆ.

'ಗುರಿ ಮತ್ತು ಮಾರ್ಗ' ಎಂಬ ಉಕ್ತಿ ನೀತಿಶಾಸ್ತ್ರ ಮತ್ತು ನೈತಿಕ ನಡೆವಳಿಕೆಯಷ್ಟೇ ಹಳೆಯದು. ಗಾಂಧಿ ಸಾಹಿತ್ಯದಲ್ಲಿ ಮತ್ತು ಭಾವನಾಶಾಸ್ತ್ರದಲ್ಲಿ ಅದಕ್ಕೆ ಸಂಪೂರ್ಣವಾಗಿ ಅದರದೇ ಆದ ಅರ್ಥವಿದೆ. ಏಕೆಂದರೆ, ಎರಡಕ್ಕೂ ಇರುವ ಅವಿಚ್ಛೇದ್ಯ, ಅವಿನಾಭಾವ ಸಂಬಂಧ ಅಖಂಡ ಸ್ವರೂಪವನ್ನು ಗಾಂಧೀಜಿ ತಮ್ಮ ಪ್ರಮಾದರಹಿತ ಸಹಜ ನೈತಿಕ ಪ್ರವೃತ್ತಿಯಿಂದ ಪರಿಗ್ರಹಿಸಿದರು. ಅವರಿಗಿಂತ ಹಿಂದೆ ಅದನ್ನು ಯಾರೂ ಅರಿತು ಸಮರ್ಥಿಸಿರಲಿಲ್ಲ ಎಂದಲ್ಲ. ಆದರೆ ಅಖಂಡ ಸ್ವರೂಪವನ್ನು ಯಾರೂ ಅದನ್ನು ಅಷ್ಟರಮಟ್ಟಿಗೆ ಅಪ್ರತಿಹತವಾಗಿ, ಪಟ್ಟು ಹಿಡಿದು ದೃಢೀಕರಿಸಿದ್ದು ಮತ್ತು ನಿರಂತರವಾಗಿ ತಮ್ಮ ಸ್ವಂತ ನಡೆವಳಿಕೆಯಲ್ಲಿ ಅನುಸರಿಸಿದ್ದು ವಿರಳವೆನ್ನಬಹುದು. "ಗಾಳಿಯನ್ನು ಬಿತ್ತಿ ಬಿರುಗಾಳಿಯನ್ನು ಬೆಳೆ", "ಪಾಪದ ಪ್ರತಿಫಲ ಸಾವು"– ಇವು, ಸಾಧಿಸಬೇಕಾದ ಗುರಿಗಳ ಮತ್ತು ಬಳಸಬೇಕಾದ ವಿಧಾನಗಳ ನಡುವಣ ಜೀವಂತ ಸಂಬಂಧವನ್ನು ಒಳಗೊಂಡಿರುವ ಸಾಮಾನ್ಯ ಗಾದೆಗಳು. ಹಿಂದೂ ತತ್ತ್ವಶಾಸ್ತ್ರದಲ್ಲಿ ವಿವರಣೆಗೊಂಡಂತೆ, ಕಠೋರ ಕರ್ಮನಿಯತಿಯ ಅರ್ಥವೂ ಸುಸ್ಪಷ್ಟ. ಆದರೆ ಮೇಲಿಂದ ಮೇಲೆ ಆನುಕೂಲ್ಯ ಮತ್ತು ತುರ್ತು ಮೇಲುಗೈಯಾಗುತ್ತವೆ; ಮಾನವ ತತ್ತ್ವವನ್ನು ದುರ್ಬಲಗೊಳಿಸಿ, ನೈತಿಕ ಪ್ರಶ್ನೆಯನ್ನು ಗೊಂದಲಕ್ಕೀಡುಮಾಡುತ್ತಾನೆ. ಆದರೂ ನಿರಾಕರಿಸದತನಕ ನೀತಿ (ಪಾಲಿಸಿ) ಕೂಡ ಒಂದು ತಾತ್ಕಾಲಿಕ ತತ್ತ್ವ ಹಾಗೂ ತತ್ತ್ವ ಕೇವಲ ಶಾಶ್ವತ ನೀತಿ ಎಂದು ಘೋಷಿಸಿದರು, ಗಾಂಧೀಜಿ. ಅವರ ದೃಷ್ಟಿಯಲ್ಲಿ ಗುರಿ ಒಳ್ಳೆಯದಾಗಿರಬೇಕು ಮಾತ್ರವಲ್ಲ, ದಾರಿಯೂ ಅಷ್ಟೇ ಒಳ್ಳೆಯದಾಗಿರಬೇಕು. ಒಳ್ಳೆಯ ಗುರಿಗಳನ್ನು ಕೆಟ್ಟ ಮಾರ್ಗಗಳಿಂದ ಸಾಧಿಸುವುದು ಅಶಕ್ಯ; ಕೆಟ್ಟ ಗುರಿಗಳು ಒಳ್ಳೆಯ ಮಾರ್ಗಗಳನ್ನು ಹಿಂಬಾಲಿಸಲಾರವು. ಆದ್ದರಿಂದ, ಮುಖ್ಯವಾದ ಒತ್ತು ಒಳ್ಳೆಯ ಮಾರ್ಗಗಳ ಮೇಲಿರಬೇಕು; ಗುರಿಗಳು ತಮ್ಮನ್ನು

ತಾವು ನೋಡಿಕೊಳ್ಳುತ್ತವೆ. ಹೀಗಾಗಿ, ಮಾರ್ಗಗಳೆ ಗುರಿಗಳು. ಮರ ಬೀಜದಂತೆ ಮಾತ್ರ ಇರುತ್ತದೆ; ಹಣ್ಣು ಮರದಂತಿರುತ್ತದೆ. ಹಣ್ಣಿನಿಂದ ಮರವನ್ನರಿಯಬಹುದು ಎಂಬ ನಿಜದ ಸೂಕ್ತಿ. ಅದು ಬೀಜದ ಬಗೆಗೆ, ಮರದ ಬಗೆಗೆ ಮತ್ತು ಹಣ್ಣಿನ ಬಗೆಗೆ ನಿಜ. ಪ್ರಕೃತಿಯ ಈ ಮನಗಾಣಿಸುವ ತರ್ಕ ಗಾಂಧೀಜಿಯ ಅಹಿಂಸಾವಿಧಾನದ ಒಸಗೆಯನ್ನು ಅಪವಾದ ರಹಿತವಾಗಿ, ಚಿರಕಾಲಿಕವಾಗಿ ಬಲಗೊಳಿಸಿತು ಮತ್ತು ಆ ಬಗೆಗೆ ನಿಶ್ಚಲವಾದ ಶ್ರದ್ಧೆಯನ್ನು ಅವರ ಹೃದಯದಲ್ಲಿ ನಾಟಿಹಾಕಿತು.

'ಎಲ್ಲರ ಲೇಸು ಅಥವಾ ವಿಭೂತಿ' ಎಂಬ ಅರ್ಥದ 'ಸರ್ವೋದಯ' ಪೂರ್ಣವಾಗಿ ಅರ್ಥ ಮಾಡಿಕೊಳ್ಳಬೇಕಾದ ಮತ್ತೊಂದು ಅತಿ ಮುಖ್ಯವಾದ ಶಬ್ದ. ವಾಸ್ತವವಾಗಿ, ಗಾಂಧೀಜಿಯ ಸಾಮಾಜಿಕ ಆದರ್ಶವನ್ನು ಅದು ಕ್ರೋಢೀಕರಿಸುತ್ತದೆ. 'ವರ್ಗರಹಿತ ಮತ್ತು ವರ್ಣರಹಿತ' ಸಮಾಜ ಎಂದು ಕರೆಯುವುದರ ಮೂಲಕ ಅವರು ಅದನ್ನು ನಕಾರಾತ್ಮಕವಾಗಿಯೂ ವರ್ಣಿಸಿದ್ದಾರೆ. ಇಂದು ಭಾರತೀಯ ಸಮಾಜ ಜಾತಿ, ಕೋಮು ಸಂಬಂಧಿ ಅನಿಷ್ಟಗಳ ಕಾಟದಿಂದ ಛಿದ್ರವಾಗಿದೆ. ಅವು ಅಸಮಾನತೆಗೆ ಮತ್ತು ರಕ್ತಸಂಬಂಧ, ಹುಟ್ಟು, ಮತಗಳಲ್ಲಿ ಆಧರಿಸಿದ ಮೇಲು, ಕೀಳು ಎಂಬ ಸಾಮಾಜಿಕ ವಿಭಜನೆಗಳಿಗೆ ಕಾರಣವಾಗಿವೆ. ಗಾಂಧೀಜಿಯ ಅಭಿಪ್ರಾಯದಲ್ಲಿ ಜಾತಿರಹಿತ ಸಮಾಜವೆಂದರೆ, ಇಂತಹ ಎಲ್ಲ ಪರಿಗಣನೆಗಳೂ ತೊಡೆದುಹೋದ ಮತ್ತು ಎಲ್ಲರಲ್ಲಿ– ಅವರು ಯಾವುದೇ ಜನಾಂಗ, ಜಾತಿ, ಕೋಮು ಅಥವಾ ಮತಕ್ಕೆ ಸೇರಿರಲಿ– ಸಮಾನತೆ ದೃಢವಾಗಿ ನೆಲೆಗೊಂಡ ಸಮಾಜ. ಇದು ಸಾಮಾಜಿಕ ಸಮಾನತೆ. ವರ್ಗರಹಿತ ಸಮಾಜವೆಂದರೆ, ಸಂಪತ್ತಿನ ಅಸಮತೆಗಳು ತೊಡೆದುಹೋದ ಸಮಾಜ. ಇದು ಆರ್ಥಿಕ ಸಮಾನತೆಗೆ ಒಯ್ಯುತ್ತದೆ. ಹೀಗಾಗಿ, ವರ್ಗರಹಿತ, ವರ್ಣರಹಿತ ಸಮಾಜದ ಅರ್ಥವೆಂದರೆ, ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯಿರುವಂಥ ಗಂಡುಹೆಣ್ಣುಗಳ ಸೋದರಾವಸ್ಥೆ. ಸಕಾರಾತ್ಮಕ ರೀತಿಯಲ್ಲಿ ಅಭಿವ್ಯಕ್ತಿಸಿದಾಗ ಈ ಭಾವನೆಯ ಅರ್ಥವೆಂದರೆ, ಮೇಲು–ಕೀಳು ಅಥವಾ ಬಡವ–ಬಲ್ಲಿದ ಎಂಬ ಭೇದವಿಲ್ಲದ ಸರ್ವೋದಯ ಅಥವಾ ಎಲ್ಲರ ಸಮೃದ್ಧಿ. ಸಮಾಜದಲ್ಲಿನ ವ್ಯಷ್ಟಿಗೆ ಅನ್ವಯಿಸಿದಾಗ ಅದೇ ಶಬ್ದ ಸ್ತ್ರೀಪುರುಷರ ಎಲ್ಲ ಶಕ್ತಿ ಸಾಮರ್ಥ್ಯಗಳ ಸಂತುಲಿತ ಬೆಳವಣಿಗೆ ಎಂಬ ಅರ್ಥ ಕೊಡುತ್ತದೆ. ಹೀಗಾಗಿ, ಗಾಂಧೀಜಿಯ ಆದರ್ಶ ಸಮಾಜ ಎಂತಹ ಸಮಾಜವೆಂದರೆ, ಅದರಲ್ಲಿ ಸಮಾನತೆಯ ಆಧಾರದ ಮೇಲೆ ಎಲ್ಲರ ಲೇಸನ್ನು ಸಾಧಿಸಬಯಸಲಾಗುತ್ತದೆ; ಜನಾಂಗ, ಜಾತಿ, ಪಂಥ, ಮತಗಳ ಯಾವುದೇ ಭೇದವಿಲ್ಲದೆ ಎಲ್ಲರಿಗೂ ಸಮಾನ ಲಕ್ಷ್ಯ ಕೊಡಲಾಗುತ್ತದೆ ಮತ್ತು ವ್ಯಕ್ತಿಯ ಸಾಮರ್ಥ್ಯಗಳ ಸಂತುಲಿತ ಅಭಿವೃದ್ಧಿಗೆ ಸಮಾನಾವಕಾಶಗಳನ್ನು ಕಲ್ಪಿಸಲಾಗುತ್ತದೆ. ಈ ಬಗೆಯ ಸಮಾಜ ಜನತೆಯ ಆಧ್ಯಾತ್ಮಿಕ ಬೆಳವಣಿಗೆಗೆ ಗಮನ ಕೊಡದ, ಸಂಪೂರ್ಣ ಲೌಕಿಕವೂ ಭೌತಿಕ ಸುಖ ಪ್ರಧಾನವೂ ಆದ



ಸಮಾಜವೆಂದು ಅಪವ್ಯಾಖ್ಯಾನಗೊಳ್ಳುವ ಸಂಭವವಿದೆ. ಮನುಷ್ಯ ಸಂಬಂಧವಾದ ತಮ್ಮ ಮೂಲಭೂತ ಮನೋಭಾವದಲ್ಲಿ ಗಾಂಧೀಜಿ ಆಧ್ಯಾತ್ಮಿಕವಲ್ಲದಿದ್ದರೆ, ಮತ್ತೇನೂ ಅಲ್ಲ. ಎಲ್ಲ ಧರ್ಮಗಳನ್ನು ಕುರಿತ ಸಮಾನ ಗೌರವಾದರಗಳನ್ನು ಅವರು ಪ್ರತಿನಿಧಿಸುತ್ತಾರೆ. ಸಾರತಃ ಎಲ್ಲ ಧರ್ಮಗಳು ಆಯಾಧರ್ಮದ ವ್ಯಕ್ತಿಗಳ ಆಧ್ಯಾತ್ಮಿಕ ಬೆಳವಣಿಗೆಗೆ ಲಕ್ಷ್ಯ ಕೊಡುತ್ತವೆಂದು ಭಾವಿಸಲಾಗಿದೆ. ವಾಸ್ತವವಾಗಿ, ಸರ್ಕಾರ ಎಲ್ಲ ಕ್ರಮಗಳನ್ನೂ ಯಾವುದೇ ಪಕ್ಷಪಾತವಿಲ್ಲದೆ ಪರಿಗಣಿಸಬೇಕು. ಹಾಗೆಯೆ, ವಿವಿಧ ಧರ್ಮಗಳ ವ್ಯಕ್ತಿಗಳು ಮತ್ತು ಗುಂಪುಗಳು ಎಲ್ಲ ಧರ್ಮಗಳನ್ನೂ ಸಮಾನ ಹಾಗೂ ಆಯಾ ಧರ್ಮಗಳ ಅನುಯಾಯಿಗಳಿಗೆ ಶ್ರೇಯಸ್ಕರ ಎಂದು ಪರಿಗಣಿಸಬೇಕು ಎಂಬುದು ಗಾಂಧೀಜಿಯ ನಂಬಿಕೆಯಾಗಿತ್ತು. ಸಾಂಪ್ರದಾಯಿಕ, ಆಚರಣಾತ್ಮಕ ಅಥವಾ ಸಿದ್ಧಾಂತ ಪ್ರಧಾನ ಎಂದು ಕರೆಯಿಸಿಕೊಳ್ಳುವ ಧರ್ಮದಲ್ಲಿ ಗಾಂಧೀಜಿಗೆ ನಂಬಿಕೆಯಿರಲಿಲ್ಲ ಎಂಬುದನ್ನೂ ನೆನೆಯಬೇಕು. ಪ್ರತಿಯೊಂದು ಧರ್ಮದ ಸಾರ ಎಲ್ಲ ಧರ್ಮಗಳ ಹಿಂದಿನ ಆಧ್ಯಾತ್ಮಿಕ ಸತ್ಯದಲ್ಲಿದೆ ಮತ್ತು ಅದರ ಅಭಿವ್ಯಕ್ತಿ ನೈತಿಕ ವರ್ತನೆಯಲ್ಲಿದೆ. ವಸ್ತುತಃ, ತಮ್ಮ ಸ್ವಂತ ಜೀವನವನ್ನು ಒಂದು ಆಧ್ಯಾತ್ಮಿಕ ಸಾಧನವೆಂದು ಗಾಂಧೀಜಿ ಭಾವಿಸಿದರು; ತಮ್ಮ ವಿಭಿನ್ನ ಚಟುವಟಿಕೆಗಳ ಬಗೆಗೆ ಯಾವುದೇ ಅಂಕಣ–ಸೀಮಿತ ಧೋರಣೆಯನ್ನು ಸೈರಿಸುತ್ತಿರಲಿಲ್ಲ. ಆದ್ದರಿಂದ, 'ಅಭ್ಯುದಯ' (ಲೌಕಿಕ ಸಂಪದ), 'ನಿಶ್ರೇಯಸ' (ಆಧ್ಯಾತ್ಮಿಕ ಸಾಕ್ಷಾತ್ಕಾರ) ಎರಡರ ಸಿದ್ಧಿಯನ್ನೂ ಗುರಿಯಾಗಿಸಿಕೊಂಡ ಅವರ ಸಮಗ್ರ ಸಾಮಾಜಿಕ ತತ್ತ್ವ ದರ್ಶನವನ್ನು ನವೋದಯ ಶಬ್ದ ಸಂಗ್ರಹಿಸುತ್ತದೆ.

ಗಾಂಧೀಜಿಯ ಬರಹಗಳಲ್ಲಿ ಬರುವ ಬಹುಪಾಲು ಮುಖ್ಯ ಶಬ್ದಗಳನ್ನೂ ಉಕ್ತಿಗಳನ್ನೂ ವಿವರಿಸಲು ಪ್ರಯತ್ನಿಸುವಲ್ಲಿ ನಾನು ಅವರ ಬೋಧನೆಗಳನ್ನೂ ತತ್ತ್ವದರ್ಶನವನ್ನೂ ಅಕ್ಷರಶಃ ಕ್ರೋಡೀಕರಿಸಿದ್ದೇನೆ. ಬದುಕನ್ನು ಕುರಿತು ಅವರದು ಸಾರತಃ ವೈಜ್ಞಾನಿಕ ಮನೋಧರ್ಮವಾಗಿತ್ತು; ಏಕೆಂದರೆ, ಅವರು ಬದುಕಿನ ಸತ್ವವನ್ನು ಶ್ರದ್ಧಾಪೂರ್ವಕವಾಗಿ, ಸತತವಾಗಿ ಅನ್ವೇಷಿಸಿದರು. ಅವರ ಪಾಲಿಗೆ ಜೀವನವೊಂದು ಅಖಂಡವಾಗಿತ್ತು; ಭೌತಿಕ ಮತ್ತು ಆಧ್ಯಾತ್ಮಿಕ, ಧಾರ್ಮಿಕ ಮತ್ತು ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ, ವೈಯಕ್ತಿಕ ಮತ್ತು ಸಾಮಾಜಿಕ ಎನ್ನುವಂಥ ಅಂಕಣಗಳು ಅಲ್ಲಿರಲಿಲ್ಲ. ಮಾನವಜೀವನ ಎಲ್ಲ ಕ್ಲೇಶಗಳನ್ನು ಮೀರುವ ಪ್ರಕೃತಿಯ ಪ್ರಯತ್ನವಾಗಿತ್ತು; ಎಲ್ಲವೂ ಚೈತನ್ಯ, ಎಲ್ಲ ಜೀವನ ಒಂದು ಎಂಬುದನ್ನು ಆ ಪ್ರಯತ್ನದ ಮೂಲಕ ಅರಿತುಕೊಳ್ಳುವುದಾಗಿತ್ತು. ಅವರ ಪಾಲಿಗೆ ಸರ್ವವೂ ಧರ್ಮವಾಗಿತ್ತು; ಎಂದರೆ, ಆಧ್ಯಾತ್ಮಿಕ ಪ್ರಯತ್ನವಾಗಿತ್ತು. ಧರ್ಮದ ಸಾರವೆಂದರೆ ಸತ್ಯ; ನೈತಿಕತೆ ಸತ್ಯದ ಅಭಿವ್ಯಕ್ತಿ; ನೀತಿಶಾಸ್ತ್ರೀಯ ನಡೆವಳಿಕೆ ನೈತಿಕತೆಯ ಪುರಾವೆ. ನೈತಿಕ ಕ್ರಿಯೆಗೆ ಅವರು ಅತ್ಯಂತ ಪ್ರಾಮುಖ್ಯವನ್ನಿತ್ತರು; ಏಕೆಂದರೆ, ಅದೊಂದೆ ಎಲ್ಲ ಆಂತರಿಕ

ದೃಷ್ಟಿಗಳ ಮತ್ತು ಬೆಳವಣಿಗೆಯ ದೃಶ್ಯ, ಮೂರ್ತ ಸಂಕೇತ. ಈ ಅವಧಾರಣೆಯೆ ಅವರನ್ನೂ ಅತ್ಯುತ್ತಮ ಕರ್ಮ ಯೋಗಿಯನ್ನಾಗಿ ಮಾಡಿದ್ದು.

ಅವರೆಲ್ಲ ಕ್ರಿಯೆಗಳಲ್ಲಿ ಪ್ರತಿಬಿಂಬಿಸಿದ್ದು, ಅವರ ಆಂತರಿಕ ಆಧ್ಯಾತ್ಮಿಕ ಬೆಳವಣಿಗೆ. ಆಧ್ಯಾತ್ಮಿಕತೆಯ ಅರ್ಥವೆಂದರೆ, ಜೀವನದ ಸತ್ಯದ ಮತ್ತು ಅಸ್ತಿತ್ವದ, ಸೃಷ್ಟಿಕರ್ತನ ಮತ್ತು ಅವನ ಸೃಷ್ಟಿಯ ಅಭಿನ್ನತೆಯ ಅನುಭವ. ಅಭಿನ್ನತೆಯೆಂದರೆ ನಿಃಸ್ವಾರ್ಥ ಸೇವೆಯಲ್ಲಿ ಮತ್ತು ಎಲ್ಲರಿಗಾಗಿ ತ್ಯಾಗದಲ್ಲಿ ತನ್ನನ್ನು ತಾನು ಅಭಿವ್ಯಕ್ತಿಗೊಳಿಸಿಕೊಳ್ಳ ಬೇಕಾದ ಪ್ರೀತಿ. ಗಾಂಧೀಜಿಯ ರಾಜಕೀಯ ಪ್ರವೇಶಕ್ಕೆ ಕಾರಣ, ಭಾರತದ ಮತ್ತು ಅದರ ಜನತೆಯ ಮೇಲಿನ ಪ್ರೇಮ; ಅದು ಮುಖ್ಯವಾಗಿ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿತ್ತು. ಆ ದಿಶೆಯಲ್ಲಿ ಅವರು ಹಿಂಸೆಯ ಎಲ್ಲ ಸಾಂಪ್ರದಾಯಿಕ ಆಯುಧಗಳನ್ನು ಮಾತ್ರವಲ್ಲ, ಮಾಮೂಲು ರಾಜಕೀಯ ಚಳುವಳಿಯ, ಎಂದರೆ ಸರಿಯಾಗಿ ಬಳಸಿದ ನೈತಿಕ ಆಯುಧಗಳು. ವಂಚನೆ, ಅಸತ್ಯ, ಸಂದಿಗ್ಧತೆ, ಮುತ್ಸದ್ದಿತನ, ಉತ್ಪ್ರೇಕ್ಷೆಗಳ ಆಯುಧಗಳನ್ನು ಬಿಸುಟರು. ವಾಸ್ತವವಾಗಿ, ಉಳಿದೆಲ್ಲವನ್ನು ಹೇಗೋ ಹಾಗೆ ರಾಜಕೀಯವನ್ನು ಆಧ್ಯಾತ್ಮೀಕರಿಸುವುದು ಅವರ ಗುರಿಯಾಗಿತ್ತು. ಅವರು ರಾಜಕೀಯವನ್ನು ಪ್ರವೇಶಿಸಿದ್ದು ಏತಕ್ಕೆಂದರೆ, ಭಾರತದ ದಾಸ್ಯ ಭಾರತವನ್ನು ಮಾತ್ರವಲ್ಲ, ಆಳರಸರನ್ನು ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಮಾನವತೆಯನ್ನು ಭ್ರಷ್ಟಗೊಳಿಸುತ್ತಿತ್ತು. ಅಲ್ಲದೆ, ಭಾರತ ತನ್ನ ಸ್ವಂತ ಜಾಯಮಾನಕ್ಕೆ ತಕ್ಕಂತೆ ನಿಜವಾದ ಅಭಿವೃದ್ಧಿ ಹೊಂದುವತ್ತ ಭಾರತ ಸ್ವಾತಂತ್ರ್ಯ ಮೊದಲ ಹೆಜ್ಜೆಯಾಗಿತ್ತು. ದಾಸ್ಯ ದಾರಿಗೆ ಅಡ್ಡವಾಗಿತ್ತು. ಅಹಿಂಸಾತ್ಮಕ ಪ್ರತಿಭಟನೆಯ ವಿಶಿಷ್ಟ ವಿಧಾನದಿಂದ ಅವರು ಭಾರತವನ್ನು ಸ್ವತಂತ್ರಗೊಳಿಸುವಲ್ಲಿ ಯಶಸ್ವಿಯಾದರು ಮತ್ತು ತನ್ಮೂಲಕ, ಚರಿತ್ರೆಯಲ್ಲಿ ಎಂದೂ ನಡೆಯದಿದ್ದ ಏನೋ ಒಂದನ್ನು ಸಾಧಿಸಿದರು. ಸರಿಯಾಗಿ ಬಳಸಿದ ನೈತಿಕ ಆಯುಧಗಳು ಆಳಿಸಿಕೊಳ್ಳುವವರ ಮತ್ತು ಆಳುವವರ ನೈತಿಕ ಮಟ್ಟವನ್ನು ಎತ್ತರಿಸುವ, ಹೋರಾಟ ಮುಗಿದಮೇಲೂ ಸ್ನೇಹವನ್ನು ಮುಂದುವರಿಸುವ ಮತ್ತು ಪ್ರಾಣ, ವಸ್ತುಗಳ ಕನಿಷ್ಠತಮ ನಾಶವನ್ನು ಒಳಗೊಳ್ಳುವ ಅಧಿಕ ಪ್ರಯೋಜನಸಹಿತ ರಾಜಕೀಯದಲ್ಲಿ ಕೆಲಸ ಮಾಡಬಲ್ಲುವು ಎಂಬುದನ್ನು ಸಾಬೀತುಪಡಿಸಿದರು.

ಆದರೆ ಕೇವಲ ರಾಜಕೀಯ ಸ್ವಾತಂತ್ರ್ಯದಿಂದ ಸಂತೃಪ್ತವಾಗುವ ಆತ್ಮವಾಗಿರಲಿಲ್ಲ, ಗಾಂಧೀಜಿಯದು. ಭಾರತೀಯ ಸಮಾಜದ ಸಾಮಾಜಿಕ ಹಾಗೂ ಇತರ ಅನಿಷ್ಟಗಳ ವಿರುದ್ಧ ಅವರು ಏಕಕಾಲೀನ ಯುದ್ಧ ಹೂಡಿದರು. ಅಸ್ಪೃಶ್ಯತೆಯನ್ನು ಅವರು ಒಂದು ಶಾಪ ಮತ್ತು ಕಳಂಕ ಎಂದು ಕರೆದರು. ಹಿಂದೂ–ಮುಸ್ಲಿಂ ವೈರ ರಾಷ್ಟ್ರೀಯ ಐಕಮತ್ಯ ಹಾಗೂ ಒಗ್ಗಟ್ಟಿಗೆ ಬಹು ದೊಡ್ಡ ಅಡಚಣೆಯೆಂದು ಅವರು ಹೇಳಿದರು. ಸ್ತ್ರೀಯರ ಕೀಳು ಸ್ಥಾನಮಾನ ಒಟ್ಟಿನ ಪ್ರಗತಿಯ ಹಾದಿಯಲ್ಲಿ ತೊಡಕೆಂದೂ ಅವರು ನುಡಿದರು. ಬಡತನ ಆರ್ಥಿಕ ಅಭಿವೃದ್ಧಿಯಲ್ಲಿ ಮಾತ್ರವಲ್ಲ, ಎಲ್ಲ ಮಾನವ



ಘನತೆಯ ವಿರುದ್ಧ ಅಡಚಣೆಯೆಂಬುದೂ ಅವರ ಹೇಳಿಕೆ. ಆಡಂಬರ, ವೈಭವಗಳನ್ನು ಅವರು ಅಂತೆಯೇ ಖಂಡಿಸಿ, ಅತೀವ ಸರಳತೆಯನ್ನು ಸಂಕೇತಿಸಿದರು.

ಕುಷ್ಠರೋಗ ನಿರ್ಮೂಲನದಿಂದ ಹಿಡಿದು ಹೀನ ಜೀವನಕ್ಕೆ ತಳ್ಳಲ್ಪಟ್ಟ ಪತಿತ ಸೋದರಿಯರ ಉದ್ಧಾರದವರೆಗೆ, ದಾರಿದ್ರ್ಯ ನಿವಾರಣೆಯಿಂದ ಹಿಡಿದು ಮಾನವಚೇತನದ ಸಮೃದ್ಧೀಕರಣದವರೆಗೆ ಭಾರತೀಯ ಜೀವನದ ಪ್ರತಿಯೊಂದು ಮುಖವನ್ನೂ ಗಾಂಧೀಜಿಯ ಇಡೀ ರಚನಾತ್ಮಕ ಕಾರ್ಯಕ್ರಮ ಒಳ್ಳಗೊಳ್ಳುತ್ತದೆ. ಹೊಲದ ಮತ್ತು ಕಾರ್ಖಾನೆಯ ಅಜ್ಞಾತ ಶ್ರಮಿಕನಾಗಲಿ, ದಾರಿಬದಿಯ ಶಾಲಾ ಕೊಠಡಿಯ ವಿದ್ಯಾರ್ಥಿ ಮತ್ತು ಉಪಾಧ್ಯಾಯನಾಗಲಿ, ತಳಮನೆಯ ಕೆಲಸದವಳಾಗಲಿ, ಅಥವಾ ಸಿಂಹಾಸನದ ಮೇಲಿನ ರಾಣಿಯಾಗಲಿ, ಬೀದಿಯ ಭಿಕಾರಿ ಅಥವಾ ಅರಮನೆಯ ದೊರೆಯಾಗಲಿ, ಅವರ ಪರಿಗಣನೆಗೆ ಹೊರತಲ್ಲ. ಶರೀರ–ಆತ್ಮಗಳ, ಗಂಡು–ಹೆಣ್ಣಿನ, ಶ್ರೀಮಂತ–ಬಡವನ, ಪಂಡಿತ–ಪಾಮರನ, ಭಾರತದ ಮತ್ತು ಜಗತ್ತಿನ ಸಮಾನ ಬೆಳವಣಿಗೆ ಗಾಂಧೀಜಿಯ ಆತ್ಮೀಯ ಕಾಳಜಿಯಾಗಿತ್ತು. ಇನ್ನೂ ಉತ್ತಮ ಬದುಕಿನತ್ತ, ಇನ್ನೂ ಉತ್ತಮ ಆದರ್ಶಗಳತ್ತ ಮತ್ತು ಪರಸ್ಪರ ಸೌಮನಸ್ಯ, ಸಹಕಾರಪ್ರಯತ್ನಗಳ ನಿಟ್ಟಿನಲ್ಲಿ ಸಂತಸ, ಸಮನ್ವಯಗಳಿಂದ ಕೂಡಿದ ಶಾಂತಿಯುತ ಜಗತ್ತಿನತ್ತ ಮನುಕುಲದ ಯಾತ್ರೆಯಲ್ಲಿ ವಿಶ್ರಾಂತಿ ಸ್ಥಾನವಿಲ್ಲ; ನಿಲುಗಡೆಯಂತೂ ಇಲ್ಲವೇ ಇಲ್ಲ.

* * * *

# ೨. ಗಾಂಧೀಜಿಯವರ ತತ್ತ್ವದರ್ಶನದ ರೂಪರೇಖೆಗಳು

## ೧. ಹಿನ್ನೆಲೆ

ಕೆಲವೇ ಪುಟಗಳಲ್ಲಿ ಗಾಂಧೀಜಿಯ ಸಮಗ್ರ ತತ್ತ್ವದರ್ಶನವನ್ನು ನಿರೂಪಿಸಲು ಪ್ರಯತ್ನಿಸುವುದು ಅತ್ಯಾಶೆಯೆನ್ನುವುದು ಸ್ಪಷ್ಟ. ಆದ್ದರಿಂದ, ನಾನಿಲ್ಲಿ ಮಾಡಲು ಯತ್ನಿಸುತ್ತಿರುವುದು ಅವರ ಮಹಾತತ್ತ್ವದರ್ಶನದ ರೂಪರೇಖೆಯನ್ನಷ್ಟೇ ಕೊಡುವುದು. ಅದರ ಹಿನ್ನೆಲೆಯಿಂದ ನಾನು ಮೊದಲು ಮಾಡಬಹುದು.

ತತ್ತ್ವದರ್ಶನವೊಂದು ಕ್ಲಿಷ್ಟ ವಿಷಯ: ಅದು, ವಸ್ತು ಮತ್ತು ವ್ಯಕ್ತಿಯ, ಇಡೀ ವಿಶ್ವದ ಮತ್ತು ಎಲ್ಲ ಅಸ್ತಿತ್ವ ವರ್ಗಗಳ ನಡುವಣ ಸಂಬಂಧದ ವಿಚಾರಪೂರ್ಣ, ತರ್ಕಬದ್ಧ ವಿವರಣೆಯ ಒಟ್ಟು ನೋಟದ ನಿರೂಪಣೆಯಲ್ಲಿದೆ. ನಾವು ತತ್ತ್ವದರ್ಶಿಗಳನ್ನು ಮೇಲಿಂದಮೇಲೆ ಸಂಧಿಸುವುದಿಲ್ಲ; ಚಿಂತಿಸಿ, ಸಾಧಾರಣೀಕರಿಸುವ ಸ್ವಭಾವವುಳ್ಳ ಪ್ರತಿಯೊಬ್ಬರಿಗೂ ಯಾವುದಾದರೊಂದು ಬಗೆಯ ಸ್ವಂತ ತತ್ವದರ್ಶನ ಉಂಟೇ ಉಂಟಾದರೂ, ಮೂಲಭೂತ ಭಿನ್ನತೆಯನ್ನುಳ್ಳ ಹಲವರು ತತ್ತ್ವದರ್ಶಿಗಳು ಇಲ್ಲ. ಗಣನೀಯ ಸಂಖ್ಯೆಯ ಜನರಿಗೆ ಮನದಟ್ಟು ಮಾಡಿಕೊಡುವ ತತ್ತ್ವದರ್ಶನವನ್ನು ರೂಪಿಸಿ ಒದಗಿಸುವ ಸಾಮರ್ಥ್ಯ ಅನೇಕರಿಗಿಲ್ಲ.

ತಮ್ಮ ತತ್ತ್ವದರ್ಶನವನ್ನು ನಿರೂಪಿಸುವ ಶಕ್ತಿ ಗಾಂಧೀಜಿಗಿಲ್ಲ ಎಂದು ಹೇಳಲಾಗದು. ಆದರೂ ಮುಖ್ಯವಾಗಿ ಬೌದ್ಧಿಕವಾದ ಆ ಬಗೆಯ ಅನ್ವೇಷಣೆಯಲ್ಲಿ ತೊಡಗುವುದು ಸಮುಚಿತವೆಂದು ಅವರು ಭಾವಿಸಲಿಲ್ಲ. ಈ ಉದ್ದೇಶಕ್ಕಾಗಿ ಕಾಲವನ್ನು ಹೊಂದಿಸಲಾರದಷ್ಟರಮಟ್ಟಿಗೆ ಅವರು ಬದುಕಿನಲ್ಲಿ ಮತ್ತು ಅದರ ಸಮಸ್ಯೆಗಳಲ್ಲಿ ಮಗ್ನರಾಗಿದ್ದರೆಂದು ತೋರುತ್ತದೆ. ವಾಸ್ತವವಾಗಿ, ಅವರ ಸ್ವಂತ ಆತ್ಮಚರಿತ್ರೆ ಕೂಡ ಅಪೂರ್ಣವಾಗಿದ್ದು, ೧೯೨೧ಕ್ಕೆ ನಿಲ್ಲುತ್ತದೆ. ಅವರ ಅನನ್ಯ ಜೀವನದ ಈ ಅಪೂರ್ಣ ಕಥನದಿಂದಾಗಿ ಜಗತ್ತು ನಿಜಕ್ಕೂ ರಿಕ್ತವಾಗಿದೆ. ಗಾತ್ರದಲ್ಲಿ ಬೃಹತ್ತಾದ ಮತ್ತು ಗುಣದಲ್ಲಿ ಅದ್ಭುತವಾದ ಮತ್ತೇನನ್ನೇ ಅವರು ಬರೆದಿರಲಿ, ತಮ್ಮ ಆತ್ಮಕಥನವನ್ನು ಪೂರೈಸುವಲ್ಲಿ ಅವರು ಬರೆಯಬಹುದಾಗಿದ್ದುದಕ್ಕೆ ಅದು ಪ್ರತಿಯಾಗಲಾರದು. ನಮಗೆ ಕೊಡಲು ಅವರಲ್ಲಿ ಸುಸಂಬದ್ಧ ತತ್ತ್ವದರ್ಶನವಿರಲಿಲ್ಲ ಅಥವಾ ಬದುಕು, ಮಾನವತೆ ಇತ್ಯಾದಿಗಳನ್ನೆಲ್ಲ ಕುರಿತ ತಮ್ಮ ಮೂಲಭೂತ ಭಾವನೆಗಳ ರಹಸ್ಯಕ್ಕೆ ನಮ್ಮನ್ನವರು ಒಯ್ಯಬಯಸಲಿಲ್ಲ ಎಂದು ಈ ಲೋಪದಿಂದ ನಾವು ನಂಬುವಂತಾಗ



ಬಾರದು. ಶಕ್ತವೂ ಅನುಷ್ಠಾನಪರವೂ ಆದ ತತ್ತ್ವದರ್ಶನವೊಂದು ಅವರಲ್ಲಿದ್ದೇ ಇತ್ತು; ನಾವದನ್ನು ತಿಳಿಯಬೇಕೆಂದು ಅವರು ಬಯಸಿದರು. ಆದರೆ ತಮ್ಮ ವಾಡಿಕೆಯಂತೆ ಮತ್ತು ಪ್ರಾಯಶಃ ಬುದ್ಧನ ಮನೋಧರ್ಮದಂತೆ ಅವರು ವಿನಯಪೂರ್ವಕವಾಗಿ ಹೇಳುತ್ತಿದ್ದರು: “ಆತ್ಮದೀಪೋಭವ.” ಇಷ್ಟಕ್ಕೂ, ಪ್ರತಿಯೊಬ್ಬರೂ ಸ್ವತಃ ಸತ್ಯವನ್ನು ಕಂಡುಕೊಳ್ಳಬೇಕು. ಇತರರು ನೆರವಾಗಬಲ್ಲರಷ್ಟೆ.

ಗಾಂಧೀಜಿ ಎಂದೂ ತತ್ತ್ವದರ್ಶಿ ಎಂಬ ಹೆಸರು ಗಳಿಸಿಲ್ಲ. ಆ ಶಬ್ದದ ಪ್ರೌಢಾರ್ಥದಲ್ಲಿ ಅಥವಾ ತತ್ತ್ವದರ್ಶನ ಎನ್ನುವಂಥದನ್ನು ಅವರು ಬರೆದೂ ಇಲ್ಲ. ಆದರೂ ಅವರು ನಿಜವಾಗಿ ಒಬ್ಬ ತತ್ತ್ವದರ್ಶಿಯೇ; ಏಕೆಂದರೆ, ಅವರಲ್ಲಿ ಜೀವನ, ಕ್ರಿಯೆಗಳ ಒಂದು ಖಚಿತ ತತ್ತ್ವ ಹಾಗೂ ಸ್ವಂತ ಜೀವನ, ಕ್ರಿಯೆಗಳ ತಳಹದಿಯಾದ ಸಮಗ್ರ ಆಲೋಚನೆಯ ವ್ಯವಸ್ಥೆಯುಂಟು. ವಾಸ್ತವವಾಗಿ, ತಮ್ಮ ಜೀವಮಾನ ಪೂರ್ತಿ ಅವರೊಬ್ಬ ಉತ್ಸಾಹಿ ಸತ್ಯಾನ್ವೇಷಕರಾಗಿದ್ದರು; ತಾವೊಬ್ಬ ಅನ್ವೇಷಕನಷ್ಟೇ, ಮತ್ತೇನೂ ಅಲ್ಲ ಎಂದು ಹೇಳಿಕೊಳ್ಳುವ ನಿಜವಾದ ಸಂತನ ಸಂಪೂರ್ಣ ವಿನಯ ಅವರಲ್ಲಿತ್ತು. ಅವರ ಪಾಲಿಗೆ ಸತ್ಯವೊಂದು ಶಾಶ್ವತ ಅನ್ವೇಷಣವಾಗಿತ್ತು. ಅವರು ಬರೆದರು: “ನನ್ನ ಹಲವಾರು ಸತ್ಯಪ್ರಯೋಗಗಳ ಕಥೆಯನ್ನು ನಾನು ಹೇಳಬಯಸುತ್ತೇನಷ್ಟೇ; ನನ್ನ ಬದುಕು ಆ ಪ್ರಯೋಗಗಳಲ್ಲದೆ ಮತ್ತೇನೂ ಅಲ್ಲವಾದ್ದರಿಂದ, ಆ ಕಥೆಯೊಂದು ಆತ್ಮಚರಿತ್ರೆಯ ರೂಪ ತಳೆಯುವುದು ದಿಟ. ತಮ್ಮ ಕಾರ್ಯ ಕಾಲಕಾಲಕ್ಕೆ ಗ್ರಹಿಸಿದಂತೆ ಸತ್ಯದ ಅನ್ವಯವೇ ಹೊರತು ಶಾಸ್ತ್ರೀಯ ಬರವಣಿಗೆಯಲ್ಲ ಎಂದು ಅವರು ಹೇಳುತ್ತಿದ್ದರು. ಅಹಿಂಸೆಯ ಬಗೆಗೆ ನಿಬಂಧವೊಂದನ್ನು ಬರೆಯಲು ಅವರು ನಿರಾಕರಿಸಿದರು. ತಾವು ಅದರೊಡನೆ ನಿರಂತರವಾಗಿ ಪ್ರಯೋಗ ಮಾಡುತ್ತಿರುವುದು ಅದಕ್ಕೆ ಕಾರಣವೆಂದರು. ತಮ್ಮ ಸಾವಿಗೆ ಸುಮಾರು ಎರಡು ವರ್ಷಗಳ ಹಿಂದೆಯಷ್ಟೆ (೩.೩ ೪೬), ಅಹಿಂಸೆಯ ಮೇಲೆ ನಿಬಂಧವೊಂದನ್ನು ಬರೆಯಬೇಕೆಂಬ ಕೋರಿಕೆಗೆ ಉತ್ತರವಾಗಿ ‘ಹರಿಜನ’ದಲ್ಲಿ ಅವರು ಹೀಗೆ ಬರೆದರು: “ನನ್ನ ಜೀವಿತ ಕಾಲದಲ್ಲಿ ಅಂಥ ಯಾವುದೇ (ನಿಬಂಧ) ಅವಶ್ಯವಾಗಿ ಅಪೂರ್ಣವಾಗುತ್ತದೆ. ಬರೆಯಬಹುದಾದರೆ, ನನ್ನ ಮರಣಾನಂತರವಷ್ಟೆ. ಅಂತಾದರೂ, ಅಹಿಂಸೆಯ ಸಂಪೂರ್ಣ ವ್ಯಾಖ್ಯಾನವನ್ನು ಕೊಡುವಲ್ಲಿ ಅದು ವಿಫಲವಾಗುವುದೆಂಬ ಎಚ್ಚರಿಕೆಯನ್ನು ನಾನು ಕೊಡಬಯಸುತ್ತೇನೆ. ಯಾರೂ ದೇವರನ್ನು ಸಂಪೂರ್ಣವಾಗಿ ವರ್ಣಿಸಲು ಶಕ್ತನಾಗಿಲ್ಲ. ಅಹಿಂಸೆಯ ಬಗೆಗೂ ಅದು ದಿಟ. “ಗಾಂಧೀಜಿಯ ಈ ದೃಷ್ಟಿ, ತತ್ತ್ವದರ್ಶನದ ನಿರೂಪಣೆಗೂ ಸಮಾನವಾಗಿ ಅನ್ವಯಿಸುತ್ತದೆ. ಅವರ ಪಾಲಿಗೆ ದೇವರು–ಸತ್ಯ–ಅಹಿಂಸೆ–ಪ್ರೇಮ–ನಿಯಮ–ಶಕ್ತಿಗಳು ಒಂದೇ ವರ್ಗದಲ್ಲಿದ್ದುವು; ಅವುಗಳ ನಿಜವಾದ ಅರ್ಥದ ಅನ್ವೇಷಣೆ ಮತ್ತು ಮಾನವೀಯ ನಡೆವಳಿಕೆ, ಸಂಬಂಧಗಳಿಗೆ ಹಾಗೂ ಎಲ್ಲ ಮಾನವ

ವ್ಯವಹಾರಗಳಿಗೆ ಅದರ ಅನ್ವಯ ಸತತವೂ ಅನಂತವೂ ಆಗಿತ್ತು. ವಸ್ತು ಸ್ವರೂಪದಲ್ಲೆ, ಮನುಕುಲದ ಉಳಿವಿನೊಡನೆ ಈ ಅನ್ವೇಷಣೆ ಮುಂದುವರಿಯಬೇಕು. ವರ್ತಮಾನದ, ಅಂತೆಯೆ ಭವಿಷ್ಯದ ಪೀಳಿಗೆಗಳು ಈ ಅನ್ವೇಷಣೆಯನ್ನು ಮುಂದುವರಿಸಬೇಕು ಮತ್ತು ಗಾಂಧೀಜಿಯಂಥ ಮಹಾಪುರುಷರು ತಮ್ಮ ಹಿಂದೆ ಬಿಟ್ಟಿರುವ ಅನುಭವ, ಬೋಧನೆಗಳ ಅಧ್ಯಯನದಿಂದ ಲಾಭ ಪಡೆಯಲು ಏಕಕಾಲದಲ್ಲಿ ಪ್ರಯತ್ನಿಸಬೇಕು. ಗಾಂಧೀಜಿ, ಅವರ ಬದುಕು, ಆಲೋಚನೆ, ಕ್ರಿಯೆ, ಬರಹಗಳೆಲ್ಲ ಈಗಾಗಲೇ ವಿಕಾಸಪರ ಹಾಗೂ ಪ್ರಗತಿಪರ ಮನುಕುಲದ ಚರಿತ್ರೆಯ ಒಂದು ಭಾಗವಾಗಿದೆ. ಅವರು ತಮ್ಮ ದೀರ್ಘ, ಘಟನಾಪೂರ್ಣ, ಶ್ರೀಮಂತ ಜೀವನದಲ್ಲಿ ತಮ್ಮ ಸತ್ಯಾನ್ವೇಷಣೆಗೆ ತಳಹದಿ ಮಾಡಿಕೊಂಡ ಸಾಮಾನ್ಯ ತತ್ತ್ವಗಳಲ್ಲಿ ಹಾಗೂ ಮೂಲಭೂತ ಪರಿಕಲ್ಪನೆಗಳಲ್ಲಿ ಅಡಗಿದೆ. ಅವರ ತತ್ತ್ವದರ್ಶನ, ಸತ್ಯದೊಡನೆ ಅವರು ಮಾಡಿದ ವೈವಿಧ್ಯಪೂರ್ಣ ಪ್ರಯೋಗಗಳ ಒಂದು ಇಣುಕುನೋಟ ಕೂಡ ಸಾಕಷ್ಟು ಲಾಭಪ್ರದ ಎಂದಮೇಲೆ, ತಾಂತ್ರಿಕ ಅರ್ಥದಲ್ಲಿ ಅದೆಷ್ಟೆ ಅಸಂಪೂರ್ಣವೆಂದು ನಾವು ಭಾವಿಸಬಹುದಾದರೂ ಅವರ ಸಮಗ್ರ ತತ್ತ್ವದರ್ಶನದ ಅಧ್ಯಯನದ ಬಗೆಗೆ ಹೇಳುವುದೇನು?

ಜನತೆಯ ಮನಸ್ಸುಗಳಲ್ಲಿ ಗಾಂಧೀಜಿ ಉಳಿಸಿಹೋಗಿರುವ ಪ್ರತಿಮೆಯನ್ನು ಯಾರಾದರೂ ಅಭ್ಯಸಿಸಬಹುದಾದರೆ, ಅದು ತತ್ತ್ವದರ್ಶಿಯದಲ್ಲವೇ ಅಲ್ಲ. ಇದು ಅವರ ಸ್ವಭಾವಕ್ಕನುಸಾರವಾಗಿಯೆ ಇದೆ. ಗಾಂಧಿವಾದ ಎಂಬುದೊಂದು ಉಂಟೆಂಬುದನ್ನು ಅವರು ಒತ್ತಾಯಪೂರ್ವಕವಾಗಿ ನಿರಾಕರಿಸಿದರು. ಹೊಸ ಧರ್ಮವೊಂದನ್ನು ತಾವು ಸ್ಥಾಪಿಸಿರುವ ಭಾವನೆಯನ್ನು ಅವರು ಅಲ್ಲಗಳೆದರು. ತಾವು ಅನುಷ್ಠಿಸಲು ಯತ್ನಿಸುತ್ತಿರುವ ಸತ್ಯಗಳು "ಪರ್ವತಗಳಷ್ಟೆ ಪ್ರಾಚೀನ"ವೆಂದೆ ಅವರು ಹೇಳಿದರು. ಇಷ್ಟೆಲ್ಲ ಆಗಿಯೂ, 'ಮಹಾತ್ಮ' ಎಂಬ ಬಿರುದನ್ನು ಅವರಿಗೆ ಅಂಟಿಸಲಾಯಿತು. ಮತ್ತು ಗಾಂಧೀಜಿಯ ಜೀವನ ಚರಿತ್ರಕಾರರಾದ ಶ್ರೀ ಡಿ. ಜಿ. ತೆಂಡೂಲ್ಕರ್ ಮತ್ತು ಶ್ರೀ ವಿಠಲಭಾಯಿ ಝವೇರಿಯವರ ಎಂಟು ಸಂಪುಟಗಳ ಸ್ಮಾರಕ ಸದೃಶ ಜೀವನಚರಿತ್ರೆ ಮಹಾತ್ಮ ಎಂಬ ವಿಶಿಷ್ಟ ಮುದ್ರೆಯನ್ನು ಹೊತ್ತಿದೆ. ಅವರ ಸ್ವತಃ ಜೀವನಕಾಲದಲ್ಲಿ ಬಹಳಷ್ಟು ಜನ ಭಾರತೀಯರು ಅವರನ್ನು ಅವತಾರವೆಂದು ಪರಿಗಣಿಸಿದರು ಮತ್ತು ಈಗಲೂ ಪರಿಗಣಿಸುತ್ತಾರೆ. ಅವರನ್ನು ಕುರಿತ ಈ ಭಾವನೆಗಳ ಹೊರತಾಗಿ, ಕೋಟ್ಯಂತರ ಮಂದಿಯ ಪಾಲಿಗೆ ಅವರು ರಾಷ್ಟ್ರಪಿತ. ಲಾರ್ಡ್ ಮೌಂಟ್ ಬ್ಯಾಟನ್ ಕರೆದಂತೆ ಭಾರತ ಸ್ವಾತಂತ್ರ್ಯದ ಶಿಲ್ಪಿ, ಮಹಾ ಸಮಾಜಸುಧಾರಕ, ಧಾರ್ಮಿಕ ನಾಯಕ, ಶಾಂತಿದೂತ ಇತ್ಯಾದಿ. ಆದರೂ ಅವರನ್ನೊಬ್ಬ ಸ್ವೋಪಜ್ಞ ಚಿಂತಕ ಮತ್ತು ಶಕ ನಿರ್ಮಾಪಕ ಕ್ರಿಯಾಶೀಲ ಎಂದು ಕಾಣುವುದಾದರೆ, 'ಸತ್ಯಾಗ್ರಹಿ' ಎಂಬುದೇ ಅವರಿಗೆ ಸಮರ್ಪಕವಾದ ಅಭಿಧಾನ.



ಅವರೊಬ್ಬ ಅತ್ಯುತ್ತಮ ಸತ್ಯಾಗ್ರಹಿಯಾಗಿದ್ದರು; ಅವರ ಜೀವನದರ್ಶನ ನಿಶ್ಚಿತವಾಗಿ ಸತ್ಯಾಗ್ರಹವಾಗಿತ್ತು. ತಮ್ಮ ಆತ್ಮಕಥೆಯ ಪೀಠಿಕೆಯಲ್ಲಿ ಅವರು ಬರೆದರು: "ನನ್ನ ಉದ್ದೇಶ ಗಣ್ಯಗ್ರಹವಿಜ್ಞಾನದಲ್ಲಿ ನನ್ನ ಪ್ರಯೋಗಗಳನ್ನು ವಿವರಿಸುವುದು; ನಾನೆಷ್ಟು ಒಳ್ಳೆಯವನು ಎಂಬುದನ್ನು ವಿವರಿಸುವುದಲ್ಲವೇ ಅಲ್ಲ." ಅಂತಿಮವಾಗಿ ಗಾಂಧಿತತ್ತ್ವದರ್ಶನ ಎನಿಸಿಕೊಳ್ಳಬಹುದಾದ್ದನ್ನು ನಾವು ತಲುಪಬಹುದಾದ್ದು ಈ ರೀತಿ ವಿಚಾರ ಮಾಡುವುದರಿಂದ ಮಾತ್ರ. ಅವರು ತಾವೊಬ್ಬ ತತ್ತ್ವದರ್ಶಿಯೆಂದು ಎಂದೂ ಹೇಳಿಕೊಳ್ಳದ್ದರಿಂದ ಮತ್ತು ತತ್ತ್ವದರ್ಶನವೊಂದನ್ನು ನಿರೂಪಿಸಲು ಯಾವುದೇ ಪ್ರಯತ್ನ ಮಾಡದುದರಿಂದ, ಅದನ್ನು ಅವರ ಬದುಕು, ಬರಹ, ಕ್ರಿಯೆಗಳಿಂದ ಬಹುಮಟ್ಟಿಗೆ ಅಗೋಚರವಾದ ಸಣ್ಣ ಜೇನುಹನಿಗಳಂತೆ ಸಂಗ್ರಹಿಸಿ ಒಗ್ಗೂಡಿಸಬೇಕು. ಇಷ್ಟೇ ವಿನೀತ ಮತ್ತು ಸಂಕ್ಷಿಪ್ತವಾಗಿರಲಂತೆ, ಈ ಪ್ರಯತ್ನ ಯೋಗ್ಯವಾದದ್ದು. ಅಹಿಂಸೆ ಅಥವಾ ಪ್ರೀತಿಯ ಮೂಲಕ ಸತ್ಯಸಾಕ್ಷಾತ್ಕಾರದ ಅವರ ತತ್ತ್ವದರ್ಶನದ ಸಂಪೂರ್ಣ ನಿರೂಪಣೆಗೆ ಇಂಥ ಹಲವಾರು ಪ್ರಯತ್ನಗಳು ಒಟ್ಟಿನ ಕೊಡುಗೆಯನ್ನೀಯಬಲ್ಲುದು.

ಗಾಂಧಿ ತತ್ತ್ವದರ್ಶನದ ರೂಪರೇಖೆಯೊಂದನ್ನು ಕೊಡಲು ಯತ್ನಿಸುವ ಮುನ್ನ, ಈ ಸಂಬಂಧವಾಗಿ ಕೆಲವು ನಿರ್ದಿಷ್ಟ ಸಾಮಾನ್ಯ ತಪ್ಪುಗಳಿಂದ ನಮ್ಮನ್ನು ನಾವು ಬಿಡಿಸಿಕೊಳ್ಳೋಣ. ಗಾಂಧೀಜಿಯನ್ನು ಅಧ್ಯಯನ ಮಾಡಿದ ಬಳಿಕ, ಗಾಂಧಿ ತತ್ತ್ವದರ್ಶನ ಎನ್ನುವಂಥದಲ್ಲ, ಏಕೆಂದರೆ ಅವರನ್ನು ಕ್ರಮಬದ್ಧವಾಗಿ ಬರೆದಿಟ್ಟಿಲ್ಲ ಎಂದು ಹೇಳುವುದು ಮರಗಳನ್ನು ನೋಡಿ ಕಾಡನ್ನು ಮರೆತಂತೆ. ಅವರು ಜೀವಮಾನದುದ್ದಕ್ಕೂ ಮಾಡಿದ ಆಲೋಚನೆಗಳಲ್ಲಿ ಮತ್ತು ಕಾರ್ಯಗಳಲ್ಲಿ ಅವರ ತತ್ತ್ವದರ್ಶನ ನಿರಂತರ ಗುಪ್ತವಾಹಿನಿಯಾಗಿ ಹರಿಯುತ್ತದೆ. ಗಾಂಧೀಜಿಯನ್ನು ಒಬ್ಬ ನೈತಿಕ ಪ್ರತಿಭೆ ಅಥವಾ ಮಾನವತೆಯ ಅಂತಸ್ಸಾಕ್ಷಿ ಮಾತ್ರ ಎಂದು ಆಗಾಗ ಬಣ್ಣಿಸಲಾಗಿದೆ. ಹಾಗೆ ಮಾಡುವಲ್ಲಿ, ನಾವು ಮುಖ್ಯ ಆಧ್ಯಾತ್ಮಿಕ ಮತ್ತು ತಾತ್ತ್ವಿಕ ಗಾಂಧಿಯನ್ನು ಕಳೆದುಕೊಂಡು, ಅವರ ಸಮಸ್ತ ನೈತಿಕ ಭಾವನೆಗಳ ಸೆಲೆಯಾದ ಆಂತರಿಕ ಆಕರವನ್ನು ಅಲಕ್ಷಿಸುತ್ತೇವೆ. ಅವು ತಮಗೆ ತಾವೇ ಗುರಿಯಾದ ಅಂತಿಮ ಸಂಗತಿಗಳಿಗಿಂತ ಮಿಗಿಲಾಗಿ ಅವರ ತತ್ತ್ವದರ್ಶನದ ಉಪಸಿದ್ಧಾಂತ ಅಥವಾ ನಿವೃತ್ತಿಗಳಾಗಿದ್ದುವು. ಅವರು ಆಗಾಗ ದೇವರ ಮೇಲೆ ಬಹುದೊಡ್ಡ ಒತ್ತು ಹಾಕುತ್ತಿದ್ದರು. ಅವರ ನಿಲುವು ಕೇವಲ ಆಸ್ತಿತ್ವಪರ ಮತ್ತು ಕೆಲವೊಮ್ಮೆ ದೇವತಾ ಶಾಸ್ತ್ರೀಯ ಕೂಡ ಎಂಬ ನಂಬಿಕೆಗೆ ಇದು ಕೆಲವರನ್ನು ಒಯ್ದಿದೆ. ಆದರೆ ಅವರು ದೇವರನ್ನು ಸತ್ಯವೆಂದು ಮೇಲಿಂದ ಮೇಲೆ ಬಣ್ಣಿಸಿದ್ದಾರೆ. ಸತ್ಯವೇ ದೇವರೆಂದು ಘೋಷಿಸುವುದರ ಮೂಲಕ ಅವರು ದೇವರನ್ನು ಕುರಿತ ತಮ್ಮ ಭಾವನೆಗಳ ಸ್ಪಷ್ಟೀಕರಣದಲ್ಲಿ ಮುಂದೆ ಹೋಗಿದ್ದಾರೆ. ದೇವರೆಂಬ ಯಾವುದೋ ವಸ್ತುವಿನಲ್ಲಿ

ಅವರದು ಅಂಧಶ್ರದ್ಧೆಯಲ್ಲ, ಆದರೆ ಸಾರತಃ ತಾರ್ಕಿಕ ಮತ್ತು ತಾತ್ತ್ವಿಕವಾದ ನಿಲುವು ಎಂಬುದನ್ನಿದು ಸ್ಪಷ್ಟವಾಗಿ ತೋರುತ್ತದೆ. ಒಬ್ಬ ಕ್ರಿಯಾಶೀಲ ವ್ಯಕ್ತಿಯಾಗಿ ಬದುಕಿನ ತಾತ್ತ್ವಿಕ ಮುಖಗಳನ್ನೂ, ಸಮಸ್ಯೆಗಳನ್ನೂ ಕುರಿತು ನಿಬಂಧವನ್ನೊದಗಿಸುವುದು ಉಚಿತವೆಂದು ಅವರು ಭಾವಿಸಲಿಲ್ಲ, ನಿಜ. ಆದರೆ ಸಾಂದರ್ಭಿಕ ಅಗತ್ಯ ಬಿದ್ದಾಗ, ತಮ್ಮವನ್ನಾಗಿ ಮಾಡಿಕೊಂಡಿದ್ದ ತಾತ್ತ್ವಿಕ ಪರಿಕಲ್ಪನೆಗಳೊಡನೆ ಅವರು ಹೊರಬಂದರು. ಆದರೂ ಅವರು ಅವುಗಳ ಬಗೆಗೆ ಎಂದೂ ಸಿದ್ಧಾಂತ ಲೋಲುಪರಾಗಿರಲಿಲ್ಲ; ಬದುಕು ಚೈತನ್ಯಶೀಲವಾದುದು, ಅದೇ ಕ್ರಿಯೆ ಎಂದೂ ಸತ್ಯಸಾಕ್ಷಾತ್ಕಾರ ಮತಾಂಧ ಶ್ರದ್ಧೆಯಲ್ಲಿ ಕೊನೆಗೊಂಡರೆ, ಸ್ವದಂಡನೆಗೆ ಪಕ್ಕಾಗುವ ಪ್ರಕ್ರಿಯೆಯಾಗುತ್ತದೆ ಎಂದೂ ಅವರು ನಂಬಿದ್ದರು. ಅವರೊಬ್ಬ ಶ್ರದ್ಧಾಳುವಾಗಿದ್ದರು; ಧಾರ್ಮಿಕ ವ್ಯಕ್ತಿಯೆಂದು ತಮ್ಮನ್ನು ತಾವು ಬಣ್ಣಿಸಿಕೊಳ್ಳುತ್ತಿದ್ದರು. ಆದರೆ ಏಕಕಾಲದಲ್ಲಿ ಅವರು ತೆರೆದ ಮನಸ್ಸುಳ್ಳವರಾಗಿದ್ದರು ಮತ್ತು ತಮ್ಮ ತರ್ಕದ ಹಾಗೂ ನೈತಿಕ ಪ್ರಜ್ಞೆಯ ಬೆಳಕಿನಲ್ಲಿ ಎಲ್ಲವನ್ನೂ ನಿರ್ಭಯವಾಗಿಯೂ ವಿಮರ್ಶಾತ್ಮಕವಾಗಿಯೂ ಪರೀಕ್ಷಿಸುತ್ತಿದ್ದರು. ಅವರು ಅಂಥ ಸಿದ್ಧಾಂತಕ್ಕೆ ಅತೀತರಾಗಬಲ್ಲವರಾಗಿದ್ದರು ಮತ್ತು ಅದೇ ಕಾಲದಲ್ಲಿ ಬೌದ್ಧಿಕ ಅರಾಜಕತೆ, ನೈತಿಕ ದಿವಾಳಿತನಗಳನ್ನು ದೂರೀಕರಿಸಬಲ್ಲವರಾಗಿದ್ದರು.

ಹಿಂದೆಯೆ ಸೂಚಿಸಿದಂತೆ, ಸಾರತಃ ತತ್ತ್ವದರ್ಶನ ಎನ್ನುವುದು ನಿರ್ದಿಷ್ಟ ಮೂಲಭೂತ ಭಾವನೆಗಳ, ನಂಬಿಕೆಯ ಮತ್ತು ಪರಿಕಲ್ಪನೆಗಳ ತಳಹದಿಯ ಮೇಲೆ ವಿಶ್ವದ ಪ್ರತಿಯೊಂದು ಅಸ್ತಿತ್ವ ವರ್ಗವನ್ನೂ ಸಂಬಂಧವನ್ನೂ ವಿವರಿಸಲು ಯತ್ನಿಸುವ ಸಂಪೂರ್ಣ ಸಂಯೋಜಿತ ಮತ್ತು ಸುಸಂಬದ್ಧ ಆಲೋಚನಾವ್ಯವಸ್ಥೆ. ತತ್ತ್ವದರ್ಶಿಗಳ ಮೂಲಭೂತ ಭಾವನೆಗಳು ಮತ್ತು ಪರಿಕಲ್ಪನೆಗಳು ವಿಭಿನ್ನವಾದುದರಿಂದ, ಅವರ ತತ್ತ್ವದರ್ಶನಗಳೂ ವಿಭಿನ್ನವಾಗುತ್ತವೆ. ಆದ್ದರಿಂದ, ನಮ್ಮ ಪಾಲಿಗೆ ಕೆಲವೇ ಕೆಲವು ತತ್ತ್ವದರ್ಶನಗಳು ಮತ್ತು ತತ್ತ್ವದರ್ಶಿಗಳು ಉಂಟು; ಅವರನ್ನು ಕೆಲವು ಗಂಪುಗಳನ್ನಾಗಿ ವರ್ಗೀಕರಿಸಬಹುದು. ಪ್ರತಿಯೊಂದು ತತ್ತ್ವದರ್ಶನವೂ ಸತ್ಯವನ್ನು ಅನ್ವೇಷಿಸಿ ಕಂಡುಹಿಡಿಯುತ್ತದೆಂದು ಮತ್ತು ತನಗೆ ತೃಪ್ತಿಯಾಗುವಂತೆ ಅಂತಿಮವಾಗಿ ಬದುಕಿನ ನಿಗೂಢತೆಯನ್ನು ಬಯಲು ಮಾಡುತ್ತದೆಂದು ಭಾವಿಸಲಾಗಿದೆ. ಈ ಭೂಮಿಯ ಮೇಲೆ ಮಾನವ ಜೀವನ ಮೊದಲಾದಂದಿನಿಂದ, ಮನುಷ್ಯ ತನ್ನ ಬೌದ್ಧಿಕ ಹಸಿವನ್ನು ತಣಿಸಬಲ್ಲ ಆಲೋಚನಾವ್ಯೂಹಗಳನ್ನು ರೂಪಿಸಲು ಪ್ರಯತ್ನಿಸುತ್ತಿದ್ದಾನೆ. ಈ ಪ್ರಕ್ರಿಯೆ ಈಗಲೂ ನಡೆಯುತ್ತಿದೆ; ಅದು ಮುಂದುವರಿಯುವುದು ಅನಿವಾರ್ಯ.

ಅಧ್ಯಾತ್ಮ, ತತ್ತ್ವಜ್ಞಾನಗಳ ನಿಶ್ಚಿತ ಚಿಹ್ನೆಗಳ ಸಹಿತ ಜೀವನ ಹಾಗೂ ವಿಶ್ವವನ್ನು ಕುರಿತು ತಮ್ಮವೇ ಆದ ಚಿಂತನಗಳನ್ನು ಪ್ರಾಚೀನತಮ ಆದಿವಾಸಿಗಳು ಕೂಡ ನಡೆಸಿದ್ದಾರೆ ಎಂಬುದು ಮಾನವಶಾಸ್ತ್ರದ ಅಧ್ಯಯನದಿಂದ ವಿದಿತವಾಗುತ್ತದೆ. ಸೃಷ್ಟಿ,



ಸೃಷ್ಟಿಕರ್ತ, ಆತ್ಮ ಹಾಗೂ ಮರಣೋತ್ತರ ಜೀವನದ ಬಗೆಗೆ ಅವರವೇ ಆದ ಸಿದ್ಧಾಂತಗಳಿವೆ. ಪ್ರಾಚೀನ ಮಹಾನಾಗರಿಕತೆಗಳಿಗೆ ಅವುಗಳ ಕತೆಗಳು ಈಗ ಸಾಮಾನ್ಯ ಜ್ಞಾನವಾಗಿವೆ– ಅವುಗಳವೇ ಆದ ಧರ್ಮ, ನಂಬಿಕೆ, ತತ್ತ್ವಜ್ಞಾನಗಳಿದ್ದುವು, ಅವುಗಳ ಬೆಳಕಿನಲ್ಲಿ ಅವು ತಮ್ಮ ಬದುಕುಗಳನ್ನು ಮುನ್ನಡೆಸಲು ಯತ್ನಿಸಿದುವು ಎಂಬುದೂ ಅಷ್ಟೇ ನಿಜ. ಮಧ್ಯ ಏಷ್ಯ ಅಥವಾ ರಷ್ಯನ್ ಸ್ಟೆಪೆಸ್‌ನವರು, ಬೆಬಿಲೋನಿಯನರು, ಮೆಸಪೋಟೇನಿಯರು, ಈಜಿಪ್ಷಿಯನರು ಮತ್ತು ಫೋನೇಷಿಯನರು ಸಿಂಧೂಕಣಿವೆಯ ಜನರು, ಚೀಣೀಯರು ಗ್ರೀಕರು ಮತ್ತು ರೋಮನರು– ಎಲ್ಲರಿಗೂ ಅವರವೇ ಆದ ತಾತ್ತ್ವಿಕ ಭಾವನೆಗಳಿದ್ದುವು. ಪ್ರಾಚೀನತಮ ಧಾರ್ಮಿಕ ಕಾವ್ಯವೆಂದು ಪರಿಗಣಿತವಾದ ವೇದಗಳಲ್ಲಿ ಅದರಲ್ಲೂ ಋಗ್ವೇದದಲ್ಲಿ ಪ್ರಾಚೀನ ಆರ್ಯರ ತಾತ್ತ್ವಿಕ ಪರಿಕಲ್ಪನೆಗಳ ಇಣುಕುನೋಟಗಳ ನಮಗೀಯುವ ಹಲವು ಸೂಕ್ತಗಳಿವೆ. ವೇದಾಂತವೆಂದು ಸಾಮೂಹಿಕವಾಗಿ ಕರೆಯಲಾಗುವ ಉಪನಿಷತ್ತುಗಳು ಭಾರತೀಯ ತತ್ತ್ವದರ್ಶನಗಳ ಬೀಜಗಳ ನಿಧಿಗಳು. ಸ್ವರೂಪತಃ ಅವು ವೀರ್ಯವತ್ತಾಗಿದ್ದು, ಅನೇಕ ಪ್ರಸ್ಥಾನಗಳಿಗೆ ಜನ್ಮವಿತ್ತಿವೆ. ಹೀಗಾಗಿ, ತತ್ತ್ವದರ್ಶನದ ಚರಿತ್ರೆ ಲಕ್ಷಾಂತರ ವರ್ಷಗಳಷ್ಟು ಹಿಂದಕ್ಕೆ ಹೋಗುತ್ತದೆ; ತತ್ತ್ವೀಕರಿಸುವುದು ಮಾನವರ ಅಂತರ್ಗತ ಪ್ರವೃತ್ತಿಯೆಂದು ಹೇಳಬಹುದು. ಆತ್ಮಶೋಧನೆಗೆ ಸಾಕಷ್ಟು ಸ್ವಪ್ರಜ್ಞೆಯನ್ನು ಬೆಳೆಯಿಸಿಕೊಂಡಿರುವ ಪ್ರತಿಯೊಬ್ಬ ವ್ಯಕ್ತಿಗೂ ತನ್ನ ಸುತ್ತಣ ಜಗತ್ತನ್ನ ಮತ್ತು ಅದರಲ್ಲಿ ತನ್ನ ಸ್ವಂತ ಸ್ಥಾನವನ್ನು ಕಷ್ಟಪಟ್ಟು ಅರಿತುಕೊಳ್ಳುವ ಶಕ್ತಿಯುಂಟೆಂದು ಹೇಳಬಹುದು.

ತತ್ತ್ವೀಕರಿಸುವ ಈ ಪ್ರವೃತ್ತಿ ಎರಡು ಸಂಗತಿಗಳಿಂದ ಹುಟ್ಟುತ್ತದೆ: ವಿಷಯಗಳ ಬಗೆಗೆ ಸತ್ಯವನ್ನರಿಯುವ ಕುತೂಹಲ ಮತ್ತು ಪರಿವೀಕ್ಷಿತ ಸತ್ಯಾಂಶ, ಅನುಭವ, ಪರಿಗ್ರಹಣಗಳ ಹಾಗು ಇಡಿಯಾಗಿ ಬದುಕಿಗೆ ಸಂಬಂಧಿಸಿದ ಪರಿಕಲ್ಪನೆಗಳ ರಾಶಿಯಿಂದ ನಿಯಮಗಳನ್ನು ನಿಷ್ಪತ್ತಿಗೊಳಿಸುವುದಕ್ಕಾಗಿ ಸಾಧಾರಣೀಕರಿಸುವ ಶಕ್ತಿ. ವಿಜ್ಞಾನ ಮಾಮೂಲಾಗಿ ನಿರ್ದಿಷ್ಟ ವಿಷಯಗಳನ್ನು ಮತ್ತು ಪರಿವೀಕ್ಷಿತ ವಿದ್ಯಮಾನಗಳನ್ನು ಕುರಿತ ಸತ್ಯವನ್ನು ಕೂಡ ಹಿಡಿಯುವುದರಲ್ಲಿ ಮಗ್ನವಾಗಿದ್ದರೆ, ತತ್ತ್ವಶಾಸ್ತ್ರ ಇಡೀ ಬದುಕನ್ನು ಅದರ ಸಮಗ್ರತೆಯಲ್ಲಿ, ವ್ಯಕ್ತಿಗೆ ಮತ್ತು ಅವನ ಸ್ವಂತ ಪ್ರಜ್ಞೆಗೆ ಅದು ಸಂಬಂಧಿಸಿದಂತೆ ಸತ್ಯವನ್ನು ಕಂಡುಹಿಡಿಯುವುದರಲ್ಲಿ ಆಸಕ್ತವಾಗಿದೆ. ಅರಿವಿನ ಅಂತರ್ಜನಿತ ಕುತೂಹಲದಿಂದಲೆ ವಿಜ್ಞಾನ, ತತ್ತ್ವಶಾಸ್ತ್ರ, ಎರಡೂ ಕವಲೊಡೆಯುತ್ತವೆ. ವಿಜ್ಞಾನ ವಸ್ತುನಿಷ್ಠ ಮಾರ್ಗವನ್ನು ಹಿಡಿಯುತ್ತದೆ ಮತ್ತು ನಿರ್ದಿಷ್ಟ ವಿಷಯಗಳ ಬಗೆಗೆ ಎಲ್ಲವನ್ನೂ ತಿಳಿಯಬಯಸುತ್ತದೆ; ತತ್ತ್ವಶಾಸ್ತ್ರವಾದರೊ ವ್ಯಕ್ತಿನಿಷ್ಠ ಮಾರ್ಗವನ್ನು ಹಿಡಿದು, ಬಿಡಿಗೆ ಸಂಬಂಧಿಸಿದಂತೆ ಇಡಿಯನ್ನು ತಿಳಿಯಬಯಸುತ್ತದೆ. ಬೇರೆ ರೀತಿಯಲ್ಲಿ ಹೇಳಬೇಕೆಂದರೆ, ವಿಜ್ಞಾನ ಒಂದು ಕಾಲಕ್ಕೆ ಒಂದು ವಿಷಯದ ಬಗೆಗೆ ಸತ್ಯವನ್ನರಿಯಬಯಸುತ್ತದೆ; ತತ್ವಶಾಸ್ತ್ರವಾದರೊ

ಇಡಿಯನ್ನು ಮತ್ತು ಬಿಡಿಯನ್ನು ಕುರಿತ ಸತ್ಯವನ್ನು ಕೂಡ ತಿಳಿಯಬಯಸುತ್ತದೆ. "ನನಗೆ ತಿಳಿದಿದೆ, ಆದ್ದರಿಂದ ನಾನಿದ್ದೇನೆ" ಎಂಬುದು ತತ್ತ್ವಶಾಸ್ತ್ರದ ಆರಂಭ; "ಅದು ಇದೆ, ಆದ್ದರಿಂದ ಅದನ್ನು ತಿಳಿಯಬೇಕು" ಎಂಬುದು ವಿಜ್ಞಾನದ ಆರಂಭ. ಆದರೆ ತಾರ್ಕಿಕ ಅಂತ್ಯಕ್ಕೆ ಹಿಂಬಾಲಿಸಿದಾಗ, ಅರಿಯುವ ಎರಡೂ ಪ್ರೇರಣೆಗಳ ನಡುವೆ ಯಾವುದೇ ಸಂಪೂರ್ಣ ಪ್ರತ್ಯೇಕತೆ ಇರಲಾರದೆಂದೂ ಎರಡರ ಸಮರ್ಪಕವಾದ ಪರಸ್ಪರ ಸಂಬಂಧ ಮತ್ತು ಸಂಯೋಜನೆ ಮಾತ್ರ ಜೀವನದ ಮತ್ತು ವಿಶ್ವದ ಸಮಗ್ರ ಸತ್ಯಕ್ಕೆ ಒಯ್ಯಬಲ್ಲುದೆಂದೂ ಕಂಡುಬರುತ್ತದೆ. ವಿಜ್ಞಾನ, ತತ್ತ್ವಶಾಸ್ತ್ರಗಳ ಈ ದೀರ್ಘ ಚರಿತ್ರೆಯನ್ನು ಅಭ್ಯಸಿಸಿದರೆ, ಅವುಗಳ ಪರಸ್ಪರ ಅಂತರಕ್ರಿಯೆ ಹಾಗೂ ಪ್ರಭಾವ ಆಶ್ಚರ್ಯಕರವಾಗಿ ಗೋಚರಿಸುತ್ತದೆ. ಪ್ರಾಯಶಃ ಈ ಸತ್ಯವೆ ಭಗವದ್ಗೀತೆಯ "ಜ್ಞಾನಂ ವಿಜ್ಞಾನ ಸಹಿತಂ ಯತ್ ಜ್ಞಾತ್ವಾ ಮೋಕ್ಷ್ಯಸೇ ಅಶುಭಾತ್" ಎಂಬ ಪ್ರಸಿದ್ಧ ವಾಕ್ಯದಲ್ಲಿ ವ್ಯಕ್ತವಾಗತಕ್ಕದ್ದು. ಎಲ್ಲ ಅಮಂಗಳದಿಂದ ಮಾನವನನ್ನು ಬಿಡುಗಡೆಗೊಳಿಸುವುದು ವಿಜ್ಞಾನ, ತತ್ತ್ವಜ್ಞಾನಗಳ ಸರಿಯಾದ ತಿಳಿವಳಿಕೆಯೇ.

ವಿಷಯಾಂತರದ ಅಪಾಯವಿದ್ದರೂ, ವಿಜ್ಞಾನ, ತತ್ತ್ವಜ್ಞಾನಗಳನ್ನು ನಾನು ಇನ್ನಷ್ಟು ವಿವೇಚಿಸಬೇಕು. ಎರಡರ ನಡುವೆ ಸಂಬಂಧ, ಸಂಯೋಜನೆಗಳಿರುವಾಗ, ಒಂದು ಮತ್ತೊಂದಕ್ಕೆ ಪೂರಕವಾಗಿದ್ದು, ಒಂದಿಲ್ಲದೆ ಮತ್ತೊಂದು ಅಪೂರ್ಣವಾದುದರಿಂದ, ತಂತ್ರಜ್ಞಾನವಿಲ್ಲದೆ ವಿಜ್ಞಾನ ಅಮೂರ್ತ ಮತ್ತು ಪರಿಣಾಮ ರಹಿತವೆಂದೂ ನೈತಿಕ ಕ್ರಿಯೆಯಿಲ್ಲದೆ, ತತ್ತ್ವಜ್ಞಾನ ನೂಲಿಲ್ಲದೆ ನೆಟ್ಟ ದಾರ ಮಾತ್ರವೆಂದೂ ನಾನಿಲ್ಲಿ ತಿಳಿಸಬೇಕು. ಕಲೆಗಾಗಿ ಕಲೆ ಎನ್ನುವವರಂತೆ, ಕೆಲವರು ವಿಜ್ಞಾನಕ್ಕಾಗಿ ವಿಜ್ಞಾನವೆಂದೂ ತತ್ತ್ವಶಾಸ್ತ್ರಕ್ಕಾಗಿ ತತ್ತ್ವಶಾಸ್ತ್ರವೆಂದೂ ಹೇಳಲು ಯಾವಾಗಲೂ ಅವಕಾಶವಿದೆ, ನಿಜ. ಕಲೆ, ವಿಜ್ಞಾನ, ತತ್ತ್ವಶಾಸ್ತ್ರ ಮತ್ತು ಇಂತಹ ಇತರ ಅಮೂಲ್ಯ ಸಿದ್ಧಿಗಳನ್ನು ಯಾವುದೇ ಆಸಕ್ತಿ ಅಥವಾ ಸ್ವಾರ್ಥ ಪ್ರೇರಣೆಯಿಲ್ಲದೆ ಅರಸಬೇಕೆಂದು ಹೇಳುವುದು ಸರಿ. ಅವುಗಳ ಅನ್ವೇಷಣೆಯೆ ಅದರ ಸ್ವಂತ ಪ್ರತಿಫಲವೆಂಬುದೂ ನಿಜವೇ. ಆದರೆ ಆ ಸಿದ್ಧಿಗಳು ಬದುಕಿಗೆ ಸಂಬಂಧಿಸಿಲ್ಲವೆಂದು ಮತ್ತು ಅವುಗಳ ಔತ್ತಮ್ಯ ಹಾಗೂ ಅವುಗಳಲ್ಲಿ ಪ್ರಗತಿ ಜೀವನದ ಸಮಸ್ಯೆಗಳಿಗೆ ಅಪ್ರಸ್ತುತವೆಂದು ಹೇಳುವುದು, ಕಡೆಯಪಕ್ಷ, ಅವಾಸ್ತವ. ಕ್ರಿಯಾಶೀಲವ್ಯಕ್ತಿ, ಅಂತೆಯೆ ವಿಜ್ಞಾನಿ ಮತ್ತು ತತ್ತ್ವದರ್ಶಿ ಶೂನ್ಯದಲ್ಲಿ ಬದುಕುವುದಿಲ್ಲ. ಅವರು ಉಳಿದವರಂತೆಯೆ ಸಾಮಾಜಿಕ ಜೀವಿಗಳು; ಅವರ ಸಾಧನೆಗಳನ್ನು ವೈಯಕ್ತಿಕವೆಂದು ಕರೆಯುವುದರ ಬದಲು ಒಂದು ರೀತಿಯಲ್ಲಿ ಸಾಮಾಜಿಕವೆಂದು ಕರೆಯಬಹುದು. ಆದರೆ ಅದು ಮುಖ್ಯಾಂಶವಲ್ಲ. ನಾನಿಲ್ಲಿ ಒತ್ತಿ ಹೇಳಬಯಸುವುದೇನೆಂದರೆ, ತಂತ್ರಜ್ಞಾನದ ಬೆಳವಣಿಗೆಯಿಲ್ಲದೆ ವಿಜ್ಞಾನ ಕೇವಲ ಯಾಂತ್ರಿಕ ಗಣಿತವೆನ್ನುವುದು. ಬದುಕಿನ



ಮೇಲೆ ಅದರ ಪ್ರಭಾವವಿಲ್ಲ; ಜೀವನವೊಡ್ಡುವ ಸಮಸ್ಯೆಗಳಿಗೆ ಅದು ಪರಿಹಾರ ತರುವುದಿಲ್ಲ. ಹಾಗೆಯೇ ಮುಚ್ಚಿದ ಸತ್ಯಗಳನ್ನು ಆಧರಿಸಿದ ನಡೆವಳಿಕೆಯ ನೀತಿಸಂಹಿತೆಯಿಲ್ಲದ ತತ್ತ್ವಶಾಸ್ತ್ರ, ಪ್ರಾಯಶಃ ತರ್ಕದ ಸುಖಗಳು ಬೆರೆತ ಬೌದ್ಧಿಕ ಕಸರತ್ತು, ಅಷ್ಟೆ. ಅದು ಬದುಕಿನ ಮೇಲೆ ಪ್ರಭಾವ ಬೀರದ ಮತ್ತು ಬದುಕಿನ ಹಾಗೂ ಮಾನವತೆಯ ಪ್ರಗತಿ, ವಿಕಾಸಗಳಿಗೆ ನೆರವಾಗದ ಕೇವಲ ಬರಡು ಸಿದ್ಧಾಂತ.

ನಾನು ಹಿಂದೆ ಹೇಳಿದ್ದು ಮತ್ತೊಂದು ಮುಖ್ಯ ಸಂದರ್ಭದಲ್ಲಿ ಪ್ರಸ್ತುತ. ತತ್ತ್ವಶಾಸ್ತ್ರಕ್ಕೆ ಎರಡು ಸಂಪ್ರದಾಯಗಳಿದ್ದುವು. ಅವುಗಳಲ್ಲಿ ನಾನು ಪಾಶ್ಚಾತ್ಯ ಮತ್ತು ಪ್ರಾಚ್ಯ ಎಂದು ಕರೆಯುವುದಿಲ್ಲ; ಏಕೆಂದರೆ, ಅವು ಭೌಗೋಳಿಕ ಶಬ್ದಗಳು. ಒಂದು ಪ್ರಧಾನವಾಗಿ ಪ್ರತಿಭೆ ಅಥವಾ ಅನುಭಾವಿಕ ಅಥವಾ ಅನುಮತೀಯ ಅಥವಾ ಧಾರ್ಮಿಕ (ಆಚರಣ ಸಂಬಂಧವಲ್ಲದ ವಿಶಾಲಾರ್ಥದಲ್ಲಿ); ಮತ್ತೊಂದು ಪ್ರಧಾನವಾಗಿ ಬೌದ್ಧಿಕ ಅಥವಾ ಹೈತುಕ ಅಥವಾ ತಾರ್ಕಿಕ ಎನ್ನುತ್ತೇನೆ. ಮೊದಲನೆಯದು ಯಾವಾಗಲೂ ಪ್ರತಿಪಾದಿತ ತತ್ತ್ವಶಾಸ್ತ್ರದ ವಿಧಿಗಳಿಗೆ ಅನುಸಾರವಾಗಿ ಜೀವನಮಾರ್ಗದ ಮೇಲೆ ಒತ್ತುಹಾಕಿದೆ. ವಾಸ್ತವವಾಗಿ, ಆ ಸಂಪ್ರದಾಯದಲ್ಲಿ ತತ್ತ್ವಶಾಸ್ತ್ರ ಮತ್ತು ಅದರಿಂದ ಹೊಮ್ಮುವ ಶಿಸ್ತು ಅವಿಭಾಜ್ಯ. ಸಂಬಂಧಿಸಿದ ತತ್ತ್ವದರ್ಶಿ ತನ್ನ ತಾತ್ತ್ವಿಕ ಭಾವನೆ, ಪರಿಕಲ್ಪನೆ, ಸಿದ್ಧಾಂತಗಳಿಗಿಂತ ಮಿಗಿಲಾಗಿ ತನ್ನ ಶಿಸ್ತು, ನಡೆವಳಿಕೆಗಳಿಂದ ಮೌಲ್ಯನಿರ್ಣಯಗೊಳ್ಳುತ್ತಾನೆ. ಆದ್ದರಿಂದ, ಈ ಸಂಪ್ರದಾಯ ವ್ಯಾವಹಾರಿಕ ಮತ್ತು ಅನುಷ್ಠಾನ ಪ್ರಧಾನ. ಮತ್ತೊಂದು ಸಂಪ್ರದಾಯ ಮುಖ್ಯವಾಗಿ ಪರಿಕಲ್ಪನೆ, ಭಾವನೆ, ತರ್ಕಗಳಿಗೆ ಸಂಬಂಧಿಸಿದೆ; ಆ ಸಂಪ್ರದಾಯದಲ್ಲಿನ ತತ್ತ್ವಶಾಸ್ತ್ರ ಸುಸಂಯೋಜನೆ, ತರ್ಕಶಕ್ತಿ ಇತ್ಯಾದಿಗಳಿಂದ ನಿರ್ಣಯಗೊಳ್ಳುತ್ತದೆ. ಎರಡೂ ಸಂಪ್ರದಾಯಗಳಲ್ಲಿನ ಈ ಮುಖ್ಯವಾದ ಅಂತರ ಅನೇಕ ವಿವಾದಗಳಿಗೆ ಕರೆದೊಯ್ದಿದೆ. ಹೈತುಕ, ತಾರ್ಕಿಕ ಸಂಪ್ರದಾಯಕ್ಕೆ ಸೇರಿದ ಕೆಲವರು ತತ್ತ್ವದರ್ಶಿಗಳು ಮತ್ತು ವಿಮರ್ಶಕರು, ಭಾರತದಲ್ಲಿ ಆ ಹೆಸರಿಗೆ ತಕ್ಕ ತತ್ತ್ವದರ್ಶನತೆ ಇಲ್ಲವೆಂದು ಹೇಳುವಷ್ಟು ದೂರ ಹೋಗಿದ್ದಾರೆ; ಏಕೆಂದರೆ, ಬಹುಮಂದಿ ಭಾರತೀಯ ತತ್ತ್ವದರ್ಶಿಗಳ ಪ್ರಾತಿಭ ಸಂಪ್ರದಾಯಕ್ಕೆ ಸೇರುತ್ತಾರೆ. ಭಾರತೀಯ ತತ್ತ್ವದರ್ಶಗಳು ಪ್ರಶಂಸೆಗೆ ಮರಳಿ, ಮತ್ತೊಂದು ಸಂಪ್ರದಾಯದಲ್ಲಿ ತರ್ಕ–ಕಟುಕರು ಮತ್ತು ಬೌದ್ಧಿಕ ವಸ್ತ್ರದ ನೇಕಾರರು ಮಾತ್ರವಿದ್ದಾರೆಂದು ಹೇಳಬಲ್ಲರು. ಈ ಪ್ರಶ್ನೆಯನ್ನು ಇನ್ನಷ್ಟು ಪರಿಶೀಲಿಸುವುದು ಅಗತ್ಯ; ವಿಶೇಷವಾಗಿ ಏಕೆಂದರೆ, ಗಾಂಧೀಜಿ ಪ್ರಾತಿಭ ಅಥವಾ ಧಾರ್ಮಿಕ ತತ್ತ್ವದರ್ಶಿಗಳ ಸಂಪ್ರದಾಯಕ್ಕೆ ಸೇರಿದವರು.

ಒಂದು ಕಾಲದಲ್ಲಿ ತಾರ್ಕಿಕ ಪ್ರಸ್ಥಾನದ ತತ್ತ್ವಶಾಸ್ತ್ರಜ್ಞರಲ್ಲಿ, ನಿಷಿದ್ಧವಾಗಿದ್ದ ಅನುಭಾವ ಈಗ ಸ್ವಲ್ಪ ಗೌರವವನ್ನು ಗಳಿಸಿಕೊಂಡಿದೆ. ಸತ್ಯಗ್ರಹಿಕೆಯಲ್ಲಿ ಪ್ರತಿಭೆಯ

ಸ್ಥಾನವನ್ನು ಗುರುತಿಸುವತ್ತ ಸ್ಪಷ್ಟವಾದ ಒಲವಿರುವುದನ್ನು ಡಾ. ರಾಧಾಕೃಷ್ಣನ್ ಅವರ 'ಸಮಕಾಲೀನ ತತ್ತ್ವಶಾಸ್ತ್ರದಲ್ಲಿ ಧರ್ಮದ ಆಧಿಪತ್ಯ' ಎಂಬ ಪುಸ್ತಕ ತೋರಿಕೊಡುತ್ತದೆ. ಪ್ರಾಣಿಗಳಲ್ಲಿ ಮತ್ತು ಮಾನವರಲ್ಲಿ ಸಹಜ ಪ್ರವೃತ್ತಿ, ಬುದ್ಧಿ, ಪ್ರತಿಭೆಗಳ ಕ್ರಿಯೆಗಳನ್ನು ಕುರಿತ ಹೆನ್ರಿ ಬರ್ಗ್‌ಸನ್ನನ ವಿಶ್ಲೇಷಣೆ, ಮನುಷ್ಯನ ಬುದ್ಧಿಯ ಸೀಮಿತ ಮತ್ತು ನಿರ್ಬಂಧಿತ ಶಕ್ತಿಗಳ ಮೇಲೆ ಬಹಳ ಬೆಳಕು ಚೆಲ್ಲುತ್ತದೆ. ತರ್ಕ, ಹೈತುಕತೆ, ಬುದ್ಧಿಗಳಿಗೆ ಬಹುಮುಖ್ಯವಾದ ಕಾರ್ಯಗಳಿದ್ದರೂ ಜೀವಶಕ್ತಿಗಳಿಗೆ ಮತ್ತು ವಾಸ್ತವ ಜೀವಿತಕ್ಕೆ ಸಂಬಂಧಿಸಿದ ಮಟ್ಟಿಗೆ ಅವು ಬಹು ದುರ್ಬಲ ಉಪಕರಣಗಳಷ್ಟೆ ಎಂಬುದನ್ನು ಯೂಂಗ್ ಆ್ಯಡ್ಲರ್ ಮುಂತಾದ ಮನೋವಿಶ್ಲೇಷಕರ ಬರಹಗಳು ಮತ್ತು ಮಾನವನ ಉಪಪ್ರಜ್ಞೆ, ಸುಪ್ತಪ್ರಜ್ಞೆಗಳ ಕ್ರಿಯಾಶೀಲತೆಯ ಪಾರ್ಶ್ವಿಕ ಶೋಧನ ಕೂಡ ಮುಂದುವರಿದು ತೋರಿಸಿಕೊಡುತ್ತದೆ. ಸಾರತಃ ಬದುಕೊಂದು ಚಲನೆ; ಸ್ವಾಭಿವ್ಯಕ್ತಿಯಲ್ಲಿ ಮತ್ತು ಭೌತಿಕ ಹಾಗೂ ಮಾನಸಿಕ ಜಗತ್ತನ್ನು ಜಯಿಸಿ, ಅದರ ಮೇಲೆ ಪ್ರಭುತ್ವ ಸಾಧಿಸುವುದರಲ್ಲಿ ಜೀವಶಕ್ತಿ ನಿರಂತರವಾಗಿ ತೊಡಗಿರುತ್ತದೆ. ಬುದ್ಧಿ ಹೆಚ್ಚೆಂದರೆ ವೀಕ್ಷಕ, ಸಲಹೆಗಾರ ಮತ್ತು ದಾಸ; ಅದು ಪ್ರಯೋಜನಕರವಾಗಲಾರದು ಮತ್ತು ಬದುಕಿನ ಉದ್ದೇಶವನ್ನು ಈಡೇರಿಸಲಾರದು. ಆದ್ದರಿಂದ ಸಹಜಪ್ರವೃತ್ತಿ, ಪ್ರತಿಭೆ, ಆನುಭಾವಿಕ ಅನುಭವ, ಅಪರೋಕ್ಷ ಸತ್ಯಗ್ರಹಿಕೆ ಹಾಗೂ ಧಾರ್ಮಿಕ ಭಾವನೆಗಳಲ್ಲಿ ನೆಲೆಗೊಂಡ ತತ್ತ್ವದರ್ಶನ ಬದುಕು, ಕ್ರಿಯೆಗಳ ಕ್ಷೇತ್ರದಲ್ಲಿ ಇನ್ನಷ್ಟು ಶಕ್ತವಾಗುವುದು ಅನಿವಾರ್ಯವೆಂಬುದು ಸ್ಪಷ್ಟ. ಇಂಥ ತತ್ತ್ವದರ್ಶನದಲ್ಲಿ ತರ್ಕವಿರುವುದಿಲ್ಲ ಎಂದಲ್ಲ; ಅದು ಪ್ರಮುಖ ಸಂಗತಿಯಲ್ಲ– ಅಷ್ಟೆ. ಆದರೆ ಗಾಂಧೀಜಿಯ ವಿಷಯದಲ್ಲಾದಂತೆ, ಸರಿಯಾಗಿ ಬಳಕೆಗೊಂಡಾಗ, ಅದು ಉತ್ತಮ ಮಾರ್ಗದರ್ಶಿಯೂ ಸಮತೋಲನಕರ ಸಂಗತಿಯೂ ಆಗಬಲ್ಲುದು. ತಮ್ಮ ನೈತಿಕ ಪ್ರಜ್ಞೆಯಿಂದೆಂತೊ ಅಂತೆ ತಣ್ಣನೆಯ ತರ್ಕದ ಬೆಳಕಿನಲ್ಲಿ ತಮ್ಮ ಧರ್ಮ, ನಂಬಿಕೆ, ಆನುಭಾವಿಕ ಅನುಭವಗಳು ಹಾಗು ಸಹಜ ಪ್ರವೃತ್ತಿಯನ್ನು ಪರೀಕ್ಷಿಸುವುದಕ್ಕಾಗಿ ಹೇಳುವುದನ್ನು ಗಾಂಧೀಜಿ ಎಂದು ನಿಲ್ಲಿಸಲಿಲ್ಲ. ಆದ್ದರಿಂದ, ಅವರು ಎಂದೂ ಅಂಥ ಸಿದ್ಧಾಂತಕ್ಕೆ ಅಥವಾ ಕುರುಡು ನಂಬಿಕೆಗೆ ಅಥವಾ ದುಡುಕು ಕ್ರಿಯೆಯ ಪ್ರೇರಣೆಗೆ ಬಲಿಯಾಗಲಿಲ್ಲ. ಅವರಿಟ್ಟ ಪ್ರತಿಯೊಂದು ಹೆಜ್ಜೆಯೂ ಎಚ್ಚರಿಕೆಯದಾಗಿತ್ತು, ಲೆಕ್ಕಾಚಾರದ್ದಾಗಿತ್ತು; ಅವರು ಸಣ್ಣ ಅಥವಾ ದೊಡ್ಡ ತಪ್ಪು ಮಾಡಿದಾಗೆಲ್ಲ, ಅದನ್ನು ಸಾರ್ವಜನಿಕವಾಗಿ ಒಪ್ಪಿಕೊಳ್ಳುವಷ್ಟು ನ್ಯಾಯಶೀಲರೂ ತಮ್ಮನ್ನು ತಿದ್ದಿಕೊಳ್ಳುವಷ್ಟು ಧೈರ್ಯಶಾಲಿಯೂ ಆಗಿದ್ದರು.

ಹಿಂದಿನ 'ಪ್ಯಾರಾ'ದಿಂದ ಸಿದ್ಧವಾಗುವ ಅನುಮಾನವೇನೆಂದರೆ; ಇಂದ್ರಿಯ ಪರಿಗ್ರಹಣದಿಂದ ಮತ್ತು ಬೌದ್ಧಿಕ ಹಿನ್ನೆಲೆಯಿಂದ ನಿಷ್ಪನ್ನವಾಗುವ ಮತ್ತು ತರ್ಕವನ್ನಷ್ಟೆ ಆಧರಿಸಿದ ತತ್ತ್ವದರ್ಶನ ಜೀವನ, ಕ್ರಿಯೆಗಳ ತೃಪ್ತಿಕರ ತತ್ತ್ವದರ್ಶನವಾಗಲಾರದು



ಅಥವಾ ಮಾನವನನ್ನು ಬದುಕಿನ ಸಮಸ್ಯೆಗಳ ಸಂಕೀರ್ಣದ ಮೂಲಕ ಕರೆದೊಯ್ಯುವ ಪರಿಣಾಮಕಾರಿ ಮತ್ತು ಸಮರ್ಥ ಮಾರ್ಗದರ್ಶಿಯೂ ಆಗಲಾರದು. ಪ್ರತಿಭೆಯಿಂದ, ಆನುಭಾವಿಕ ಅನುಭವದಿಂದ ಮತ್ತು ಮಾನವತೆಯ ಆಂತರಿಕ ಸಮಗ್ರ ವಿಕಾಸಾತ್ಮಕ ಪ್ರೇರಣೆಯಿಂದ ನಿಷ್ಪನ್ನವಾದ, ಆದರೆ ಏಕಕಾಲದಲ್ಲಿ ಬುದ್ಧಿತರ್ಕಗಳನ್ನು ಅಲಕ್ಷಿಸದೆ ಅವುಗಳನ್ನು ಪೂರ್ತಿ ಬಳಸಿಕೊಳ್ಳುವ ಜೀವನದರ್ಶನ ಮಾತ್ರ ಹೆಚ್ಚು ಪೂರ್ಣವೂ ಪರಿಣಾಮಕಾರಿಯೂ ಆಗಬಲ್ಲುದು.

ಹಿಂದೆ ಗಮನಿಸಿದಂತೆ, ಭಾರತೀಯ ತತ್ತ್ವಶಾಸ್ತ್ರ ಪರಂಪರೆ ಕೇವಲ ಬೌದ್ಧಿಕ ಸತ್ಯಾನ್ವೇಷಣೆಯ ಮಾರ್ಗವನ್ನು ಆ ಅನ್ವೇಷಣೆಗಾಗಿಯೇ ಹಿಡಿದಿಲ್ಲ. ಅದರಲ್ಲಿ ಬೌದ್ಧಿಕ ಅಂಶವಿಲ್ಲ ಅಥವಾ ಬುದ್ಧಿ ಅದರಲ್ಲಿ ಮುಖ್ಯ ಪಾತ್ರ ವಹಿಸುವುದಿಲ್ಲ ಎಂಬುದು ಇದರ ಅರ್ಥವಲ್ಲ. ಆದರೆ ಮುಖ್ಯವಾದ ಒತ್ತು ಇರುವುದು ಬದುಕನ್ನ ವ್ಯಾಪಿಸುವ ಮತ್ತು ತನ್ನ ಆವಿಷ್ಕಾರದಲ್ಲಿ ಬದುಕಿಗೇ ಮಾರ್ಗದರ್ಶನವೀಯುವ ಸಮಗ್ರ ದೃಷ್ಟಿಯ ಮೇಲೆ. ಜೀವನಮಾರ್ಗವೊಂದಕ್ಕೆ ಒಯ್ಯದ ತತ್ತ್ವದರ್ಶನ, ಬದುಕಿನ ಚಟುವಟಿಕೆಗಳಿಗೆ ಸ್ಫೂರ್ತಿ ಕೊಡದ ತತ್ತ್ವದರ್ಶನ, ಹೈತುಕ ಮತ್ತು ತಾರ್ಕಿಕ ನಿರ್ಣಯಗಳಿಗೆ ಮಾತ್ರ ಒಯ್ಯುವ, ಆದರೆ ಭಾರತೀಯ ತತ್ತ್ವಶಾಸ್ತ್ರದ ಆಕರಗಳು ಕೇವಲ ನಮ್ಮ ಇಂದ್ರಿಯಗ್ರಹಿಕೆಗಳಾಗಲಿ, ತಾರ್ಕಿಕ ವಿಚಾರ ಸರಣಿಯ ಬೌದ್ಧಿಕ ಪ್ರಕ್ರಿಯೆಗಳಾಗಲಿ ಇವೆಲ್ಲವುಗಳ ಆಧಾರದ ಮೇಲೆ ನಾವು ತಳೆಯಬಹುದಾದ ತಾರ್ಕಿಕ ತೀರ್ಮಾನಗಳಾಗಲಿ ಅಲ್ಲ; ಆದರೆ ಅವು ಮನುಷ್ಯನ ಸಮಗ್ರ ಅಸ್ತಿತ್ವದಲ್ಲಿರುವ ಹೆಚ್ಚು ಆಳವಾದ ಕಾಣ್ಕೆಗಳು ಮತ್ತು ಜೀವಶಕ್ತಿಯಲ್ಲಿ ಅಂತರ್ಗತವಾದ ವಿಕಾಸಪರ ಪ್ರೇರಣೆಗಳು. ಭಾರತೀಯ ತತ್ತ್ವದರ್ಶಿ ಕಂಡುಹಿಡಿಯಬಯಸುವುದು ಅಸ್ತಿತ್ವದ ಮತ್ತು ಪರಿಣಾಮದ ಸ್ವರೂಪ ಹಾಗೂ ನಿಯಮವನ್ನೇ; ವಸ್ತುಗಳ ವಿವರಣೆ ಬೌದ್ಧಿಕ ತಾರ್ಕಿಕತೆಯನ್ನು ಮತ್ತು ಅವುಗಳ ಸಂಬಂಧವನ್ನು ಮಾತ್ರವಲ್ಲ, ನಿಯತಿಯನ್ನು ಕಂಡುಹಿಡಿಯುವುದರ ಉದ್ದೇಶ ತದನುಸಾರವಾಗಿ ಬದುಕುವುದು; ಬೌದ್ಧಿಕ ಕುತೂಹಲದ ತೃಪ್ತಿಯನ್ನು ಪಡೆಯುವುದಷ್ಟೇ ಅಲ್ಲ, ಉಪನಿಷದೃಷಿಗಳ ಪ್ರಕಾರ, ಸತ್ಯ ಬುದ್ಧಿಯಾಚೆಗಿರತಕ್ಕದ್ದು. ಅದು ಕೇವಲಬುದ್ಧಿಯಿಂದ, ಇಲ್ಲವೆ ಇತರರು ಸತ್ಯವೆಂದು ಕರೆಯತಕ್ಕದ್ದನ್ನು ಕೇಳುವುದರಿಂದ ಪ್ರಾಪ್ಯವಲ್ಲ. ಅದು ವ್ಯಕ್ತಿಯ ಅಂತರಾತ್ಮದಲ್ಲಿ ಸಾಕ್ಷಾತ್ಕಾರಗೊಳ್ಳಬೇಕಾದ್ದು ಮತ್ತು ತತ್ಕಾರಣದಿಂದ ಸಮಗ್ರ ವ್ಯಕ್ತಿತ್ವದಿಂದ ಅನುಭೂತವಾಗಬೇಕಾದ್ದು. ಅದು ಕೇವಲ ಇಂದ್ರಿಯ ಗೃಹೀತವಲ್ಲ ಅಥವಾ ಬುದ್ಧಿಯಿಂದ ತರ್ಕಿಸಬೇಕಾದುದಲ್ಲ. ಅಖಂಡ ಸತ್ಯದ ಗ್ರಹಿಕೆಯಲ್ಲಿ ತರ್ಕ ಸ್ವತಃ ಸಹಾಯಕವಲ್ಲ. ('ತರ್ಕೋ ಅಪ್ರತಿಷ್ಠ'). ಆದ್ದರಿಂದ ಭಾರತೀಯ ಋಷಿಗಳ ಮತ್ತು ತತ್ತ್ವವಿದರ ಸತ್ಯಾನ್ವೇಷಣೆಯ ಸ್ವರೂಪ ಆನುಭಾವಿಕ, ಪ್ರಾತಿಭ, ಧಾರ್ಮಿಕ

ಅನ್ವೇಷಣೆಯ ರೀತಿಯದು; ವಸ್ತುಗಳ ಹೇಗೆ ಮತ್ತು ಏಕೆಗಳನ್ನು ಪರಿಶೀಲಿಸುವ ಕುತೂಹಲಬುದ್ಧಿಯ ರೀತಿಯದಲ್ಲ.

ಭಾರತದಲ್ಲಿ ಈ ಬಗೆಯ ಸತ್ಯಾನ್ವೇಷಣೆಯ ಒಂದು ಬಹುಮುಖ್ಯ ಫಲಿತಾಂಶವೆಂದರೆ, ಋಷಿಗಳು ಗ್ರಹಿಸಿದಂತೆ ಸತ್ಯದ ಸಂಪಾದನೆಯ ಮತ್ತು ಸಾಕ್ಷಾತ್ಕಾರದ ತಂತ್ರದ ವ್ಯವಸ್ಥೀಕರಣ. ಇತರ ದೇಶಗಳ ಜನ ಆನುಭಾವಿಕ ಮತ್ತು ಪ್ರಾತಿಭ ಸತ್ಯದ ಸಾಧ್ಯವಾದಷ್ಟು ಪರಿಪೂರ್ಣ ಸಾಕ್ಷಾತ್ಕಾರಕ್ಕಾಗಿ ನಿರ್ದಿಷ್ಟ ತಂತ್ರ ಹಾಗೂ ಶಿಸ್ತುಗಳನ್ನು ಬೆಳೆಸಿಕೊಂಡಿಲ್ಲ ಎಂದಲ್ಲ. ಆದರೆ, ಭಾರತ ಈ ಶೋಧನ, ಸಂಶೋಧನ ಕ್ಷೇತ್ರದಲ್ಲಿ ವೈಜ್ಞಾನಿಕ ಮಾರ್ಗವನ್ನು ಹಿಡಿದು ಮುಂದುವರಿದಿದೆಯೆಂದು ಒಪ್ಪಲೇಬೇಕಾಗುತ್ತದೆ; ಅದರ ಫಲಿತಾಂಶವೆಂದರೆ, ಯೋಗ ಪದ್ಧತಿಗಳ ಬೆಳವಣಿಗೆ, ತನ್ನೆಲ್ಲ ಸಂಬಂಧ, ಅರ್ಥಗಳ ಸಹಿತ.

ಕೆಲವೊಮ್ಮೆ ಯೋಗವನ್ನು ಪರಿಮಿತ ರೀತಿಯಲ್ಲಿ ವ್ಯಾಖ್ಯಾನಿಸುವುದು ದುರದೃಷ್ಟಕರ. ಆದರೆ ಅದು, ಮನೋಗರ್ಭಿತವಾದ ಹಾಗೂ ಮಾನವ ಪ್ರತಿಭೆ, ಆನುಭಾಷಿಕ ಅನ್ವೇಷಣೆ, ಧಾರ್ಮಿಕ ಪ್ರಜ್ಞೆಗಳಿಂದ ಗೃಹೀತವಾದ ಸತ್ಯದ ರೂಪದಲ್ಲಿ, ಮಾನವ ಪ್ರಜ್ಞೆಗೆ ಸಾಧ್ಯವಾದಷ್ಟು ಅತ್ಯುನ್ನತವಾದ ಸಿದ್ಧಿಗೆ ಮನುಷ್ಯನನ್ನು ಕರೆದೊಯ್ಯುವ ತಂತ್ರ, ಶಿಸ್ತುಗಳ ಮೊತ್ತವನ್ನು ಒಳಗೊಳ್ಳುತ್ತದೆ. ವ್ಯಷ್ಟಿ ಪ್ರಣಾಳಿಕೆಯಲ್ಲಿ ಹರಿದ ಭೌತಿಕ, ಜೈವಿಕ, ಮನಶ್ಶಾಸ್ತ್ರೀಯ, ನೈತಿಕ ಮತ್ತು ಆಧ್ಯಾತ್ಮಿಕ ಶಕ್ತಿಗಳ ಒಟ್ಟಂದವಾದ ಮಾನವ ಜೀವಿಯ ಎಲ್ಲ ಶಕ್ತಿಗಳ ಮತ್ತು ಕಾರ್ಯಗಳ ಪೂರ್ಣ, ಸ್ವಸ್ಥ ಹಾಗೂ ಉತ್ಕರ್ಷಕಾರಕ ಬೆಳವಣಿಗೆಯ ಪಥವೇ ಯೋಗ. ಯೋಗದಲ್ಲಿ ಸಾಧಕ ಮುಟ್ಟಬಯಸುವ ಶಿಖರವೆಂದರೆ, ಹೆಚ್ಚು ಹೆಚ್ಚು ಆತ್ಮೀಯವಾಗುತ್ತ ಹೋಗುವ ವ್ಯಷ್ಟಿ–ವಿಶ್ವಚೇತನಗಳ ಸಂಬಂಧ; ಈಗಾಗಲೇ ಅಂತರ್ಗತವಾಗಿ ಇರತಕ್ಕದ್ದು. ಹಠಯೋಗ, ರಾಜಯೋಗ, ಭಕ್ತಿಯೋಗ, ಜ್ಞಾನಯೋಗ ಇತ್ಯಾದಿ ಬೇರೆ ಬೇರೆ ಯೋಗಗಳು ಹೀಗೆ ಹೆಸರುಗೊಂಡಿರುವುದರ ಕಾರಣವಿಷ್ಟೆ: ಈ ಯೋಗಗಳಲ್ಲಿ ಪ್ರತಿಯೊಂದರ ಒತ್ತು ಸಂಬಂಧಿಸಿದ ವ್ಯಕ್ತಿಗಳ ನಿರ್ದಿಷ್ಟ ಸಾಮರ್ಥ್ಯಗಳ ಮೇಲೆ. ಅವು ಸಾರತಃ ಒಂದು ಮಾತ್ರವಲ್ಲ; ಅವುಗಳ ತಂತ್ರವಿನ್ಯಾಸವೂ ಸದೃಶವೇ. ಈ ಶಕ್ತಿಗಳು ಮತ್ತು ಕಾರ್ಯಗಳು ಯಮ, ನಿಯಮಗಳಿಂದ– ಎಂದರೆ ಆಂತರಿಕ ಸಂಯಮ ಮತ್ತು ನೈತಿಕ ನಡತೆಯಿಂದ– ಶುದ್ಧೀಕೃತವಾಗಬೇಕು; ರಕ್ಷಿತವಾಗಿ, ಸಾಧಿಸಬೇಕಾದ ನಿರ್ದಿಷ್ಟ ಆದರ್ಶದ ಮೇಲೆ ಕೇಂದ್ರೀಕೃತವಾಗಬೇಕು; ಅನಂತರ. ಅತ್ಯುನ್ನತವಾದುದನ್ನು ಆರ್ಜಿಸುವುದಕ್ಕಾಗಿ ವ್ಯಷ್ಟಿ ಚೇತನ ವಿಶ್ವಚೇತನಕ್ಕೆ ಶರಣಾಗುತ್ತದೆ. ಯೋಗ ಪದ್ಧತಿಯ ಮೂಲ ಸಿದ್ಧಾಂತಗಳನ್ನು ರೂಪಿಸಲು ಯೋಗಸೂತ್ರಗಳು ಹುಟ್ಟಿಕೊಳ್ಳುವ ಮುನ್ನ ಶತಮಾನಗಳು ಉರುಳಿರಬೇಕು ಮತ್ತು ಸಾವಿರಾರು ಮಂದಿ ಪ್ರಯೋಗ ನಡೆಸಿದ್ದಿರಬೇಕು. ಆದರೆ ವಿಭಿನ್ನ ಯೋಗಗಳ ಮೂಲಭೂತ



ನಿಲುವು ಮತ್ತು ಪ್ರಮುಖ ಲಕ್ಷಣಗಳು ಒಂದೇ ಆದರೂ, ಇದನ್ನು ನೆನಪಿಡಬೇಕು: ಹಠಯೋಗ ದೈಹಿಕ ಮತ್ತು ಪ್ರಾಣಿಕ ಶಕ್ತಿಗಳನ್ನು ಶಕ್ತಿಗೊಳಪಡಿಸಿ ಬೆಳೆಸುವುದನ್ನು ಅವಲಂಬಿಸಿದ್ದರೆ, ಭಕ್ತಿಯೋಗ ಮಾನವನ ಮೂಲಭೂತ, ಭಾವಾತ್ಮಕ ಪ್ರೀತಿ–ಪ್ರೇರಣೆಯನ್ನು ತಿಳಿಸಬಯಸುತ್ತದೆ. ನಿದರ್ಶನಕ್ಕೆ "ಸಾ ಪರಾ ಅನುಶಕ್ತಿಃ ಈಶ್ವರೇ ಭಕ್ತಿಃ" (ಭಗವಂತನ ಬಗೆಗಿನ ಅತ್ಯುನ್ನತ ಅಥವಾ ಶುದ್ಧತಮ ನಿಷ್ಠೆಯೇ ಭಕ್ತಿ) ಎಂಬ ಲಕ್ಷಣೀಕರಣ ಅದಕ್ಕಾಗಿಯೆ. ಅಂತೆಯೆ, ಅನಾಸಕ್ತ, ಸಮರ್ಪಿತ ಚಟುವಟಿಕೆಯ ಮೂಲಕ ಸತ್ ಕ್ರಿಯಾಶಕ್ತಿಯನ್ನು ಬೆಳೆಸತಕ್ಕದ್ದೆಂದು ಕರ್ಮಯೋಗವನ್ನು ಬಣ್ಣಿಸಲಾಗಿದೆ. ಯೋಗದರ್ಶನ ಎಂಬುದು ಇರುವುದು ಸಾಧ್ಯವಾದರೂ ಯೋಗ ತಾನೆ ಒಂದು ತತ್ತ್ವದರ್ಶನವೆಂದು ಹೇಳಬೇಕಿಲ್ಲ. ಆದರೆ ಭಾರತದಲ್ಲಿ ದೈಹಿಕ, ಪ್ರಾಣಿಕ, ಮನಶ್ಶಾಸ್ತ್ರೀಯ, ನೈತಿಕ ಮತ್ತು ಆಧ್ಯಾತ್ಮಿಕ ಅಸಂಭವಾಂಶಗಳನ್ನು ಆಧರಿಸಿದ ಯೋಗದ ಬೆಳವಣಿಗೆ, ವ್ಯವಸ್ಥಿತ, ವೈಜ್ಞಾನಿಕ ವಿಧಾನವನ್ನು ಅನುಸರಿಸಿದ್ದು– ಎರಡು ಸಂಗತಿಗಳನ್ನು ಸುಸ್ಪಷ್ಟವಾಗಿ ಸೂಚಿಸುತ್ತದೆ: ಮೊದಲನೆಯದಾಗಿ, ಬದುಕಿನ ಸತ್ಯಾನ್ವೇಷಣೆ ಕೇವಲ ಒಂದು ಬೌದ್ಧಿಕ ಅನ್ವೇಷಣೆಯಲ್ಲ; ಎರಡನೆಯದಾಗಿ, ಸತ್ಯದ ವ್ಯಾವಹಾರಿಕ ಬಗೆಗಿನ ನಿಲುವು, ಉದ್ದಿಷ್ಟ ಸಿದ್ಧಿಯನ್ನು ತರಬಲ್ಲ ತಂತ್ರಗಳನ್ನೂ ಶಿಸ್ತುಗಳನ್ನೂ ಬೆಳೆಸುವಷ್ಟರಮಟ್ಟಿಗೆ ಆಳವೂ ಸಂಪೂರ್ಣವೂ ಆಗಿತ್ತು.

ಗಾಂಧೀಜಿಯ ಬರಹಗಳುದ್ದಕ್ಕೂ ಚೆಲ್ಲಿಕೊಂಡಿರುವ ಮತ್ತು ಅವರ ವಿಶಿಷ್ಟತಮ ಕ್ರಿಯೆಗಳಲ್ಲಿ ವ್ಯಕ್ತವಾಗಿರುವ ಅವರ ತತ್ತ್ವದರ್ಶನದ ಎಳೆಗಳನ್ನು ನಾವು ಒಗ್ಗೂಡಿಸಲು ಯತ್ನಿಸಬೇಕಾದ್ದು ಈ ಕಣ್ಣೆಲೆಯಲ್ಲಿ.

## ೨. ಗಾಂಧೀಜಿ ತತ್ತ್ವದರ್ಶನದ ಪ್ರಮುಖ ತತ್ತ್ವಗಳು ಮತ್ತು ಲಕ್ಷಣಗಳು

ಸತ್ಯದ, ಜೀವನದ ಮತ್ತು ಅದರ ಸಮಸ್ಯೆಗಳ ಬಗೆಗೆ ಗಾಂಧೀಜಿಯ ನಿಲುವು, ವ್ಯಷ್ಟಿಗಾಗಿ ಎಂತೊ ಅಂತೆ ಇಡೀ ಮಾನವ ಸಮಾಜಕ್ಕಾಗಿ ಸ್ವ–ಸಂಸ್ಕೃತಿ, ಆತ್ಮ–ಸಂಸ್ಕೃತಿ, ಆಧ್ಯಾತ್ಮಿಕ ಸಂಸ್ಕೃತಿಗಳ ನಿರ್ದಿಷ್ಟ ತಂತ್ರಗಳನ್ನು ಅವರು ಬೆಳೆಸಿದ್ದು, ಅವರ ಚೈತನ್ಯಶೀಲ ವ್ಯಕ್ತಿತ್ವದ ಹಿಂದಿರುವ ತತ್ತ್ವದರ್ಶನ ಹಾಗೂ ದೈನಂದಿನ ಬದುಕಿನಲ್ಲಿ ನಡಾವಳಿಗೆ ಆ ತತ್ತ್ವದರ್ಶನದ ಅನ್ವಯ ಭಾರತೀಯ ಸಂಪ್ರದಾಯಗಳಿಗೆ ಬಹಳಷ್ಟು ಹೊಂದಿಕೊಂಡಿವೆ. ಡಾ. ಎಸ್. ರಾಧಾಕೃಷ್ಣನ್ 'ಯುನೆಸ್ಕೊ' ಪ್ರಕಟಣೆಯಾದ 'All Men are Brothers' (ಎಲ್ಲ ಮಾನವರೂ ಸೋದರರು)ದ ಪೀಠಿಕೆಯಲ್ಲಿ ಹೀಗೆಂದಿದ್ದಾರೆ: "ಉತ್ಕಟ ಸತ್ಯಾನ್ವೇಷಣೆಯ ಮೇಲೆ, ಜೀವನವನ್ನು ಕುರಿತ ಗಾಢ ಗೌರವದ ಮೇಲೆ, ಅನಾಸಕ್ತಿಯ ಆದರ್ಶದ ಮೇಲೆ ಮತ್ತು ಎಲ್ಲವನ್ನೂ ಭಾಗವತ ಜ್ಞಾನಕ್ಕಾಗಿ ತ್ಯಜಿಸುವ ಸಿದ್ಧತೆಯ ಮೇಲೆ ಒತ್ತು ಹಾಕುವ ಭಾರತೀಯ ಧಾರ್ಮಿಕ ಪರಂಪರೆಯಲ್ಲಿ ಬೇರು ಬಿಟ್ಟಿತ್ತು, ಗಾಂಧೀಜಿಯ ಬದುಕು. 'ಈ

ಧ್ಯೇಯಾನ್ವೇಷಣೆಯಲ್ಲಿ ನಾನು ಬದುಕುತ್ತೇನೆ, ಚರಿಸುತ್ತೇನೆ ಮತ್ತು ಅಸ್ತಿತ್ವವುಳ್ಳವನಾಗಿದ್ದೇನೆ' ಎಂದು ಹೇಳುತ್ತ ಅವರು ನಿರಂತರ ಸತ್ಯಶೋಧನದಲ್ಲಿ ತಮ್ಮ ಇಡೀ ಬದುಕನ್ನು ಬದುಕಿದರು." ಅವರು ವಿವಿಧ ಸಂಸ್ಕೃತಿಗಳ ಮತ್ತು ವಿಚಾರ ಪದ್ಧತಿಗಳ ಹಾಗೂ ಮೌಲ್ಯ ವ್ಯವಸ್ಥೆಗಳ ಸಂಪರ್ಕಕ್ಕೆ ಬಂದರು ಮತ್ತು ಅವುಗಳಿಂದ ಅಪಾರ ಲಾಭಗೊಂಡರು ಎಂಬ ಸಂಗತಿಗೆ ನಮ್ಮನ್ನಿದು ಕುರುಡು ಮಾಡಬೇಕಿಲ್ಲ; ಏಕೆಂದರೆ ಸ್ವಸ್ಥ ಪ್ರಭಾವಗಳಿಗೆ ಅವರು ಸದಾ ಮನಸ್ಸು ತೆರೆದು ಸ್ವಾಗತವೀಯುತ್ತಿದ್ದರು. ತಮ್ಮ ಆಧ್ಯಾತ್ಮಕ ನಿಲುವಿಗೆ ಮತ್ತು ಮಾನವ ಸಮಸ್ಯೆಗಳನ್ನು ಪರಿಹರಿಸುವ ತಮ್ಮ ನೂತನ ವಿಧಾನಕ್ಕೆ ಅನುಕೂಲವಾಗಿ ಮತ್ತು ಸಹಾಯಕವಾಗಿ ಕಂಡುಬಂದುದನ್ನೆಲ್ಲ ಅವರು ಸ್ವಂತ ವ್ಯಕ್ತಿತ್ವದ ವಸ್ತ್ರಕ್ಕೆ ಮತ್ತು ಜೀವನವಿಧಾನಕ್ಕೆ ನೆಯ್ದರು. ಅವರ ಸತ್ಯಾಗ್ರಹ ತಂತ್ರದ ಬಗೆಗೆ ಡಾ. ಎಸ್. ರಾಧಾಕೃಷ್ಣನ್ ಹೇಳುತ್ತಾರೆ: "ಮಾನವ ಚರಿತ್ರೆಯಲ್ಲಿ ಅಹಿಂಸಾತತ್ತ್ವವನ್ನು ವ್ಯಷ್ಟಿಯಿಂದ ಸಾಮಾಜಿಕ ಹಾಗೂ ರಾಜಕೀಯ ಭೂಮಿಕೆಗೆ ವಿಸ್ತರಿಸಿದ ಮೊದಲಿಗರು, ಗಾಂಧಿ." ಪ್ರೀತಿ ಅಥವಾ ಅಹಿಂಸೆಯ ಮೂಲಕ ಜೀವನಸತ್ಯದ ಅನ್ವೇಷಣೆಯಲ್ಲಿ ಅವರ ಉತ್ಕಟಾಕಾಂಕ್ಷೆ ಸದಾ ಪರಮ ಮಾರ್ಗದರ್ಶಿಯಾಗಿತ್ತು.

ಗಾಂಧೀಜಿಯನ್ನು ನಾವು ತತ್ತ್ವದರ್ಶಿಯೆಂದು ಹೆಸರಿಸದಿರಬಹುದು. ಅಂಥ ವಿಶೇಷಣಕ್ಕೆ ಅವರು ಎಂದೂ ಹಕ್ಕು ಮಂಡಿಸಲಿಲ್ಲ. ವಿಷಯ ತದ್ವಿರುದ್ಧ. ಒಂದೆಡೆ ಅವರು ಹೇಳುತ್ತಾರೆ: "ಒಳ್ಳೆಯದು, ನನ್ನೆಲ್ಲ ತತ್ತ್ವದರ್ಶನ– ಆ ಆಡಂಬರದ ಹೆಸರು ಕೊಡುವುದಾದರೆ– ನಾನು ಹೇಳಿರುವುದರಲ್ಲಿದೆ. ಆದರೆ ನೀನದನ್ನು ಗಾಂಧಿವಾದವೆಂದು ಕರೆಯಲಾಗದು: ಅದರಲ್ಲಿ 'ವಾದ'ವೇನೂ ಇಲ್ಲ." ಮತ್ತೆ ಅವರೆನ್ನುತ್ತಾರೆ: "ಗಾಂಧಿವಾದ ಎನ್ನುವಂಥದಿಲ್ಲ; ನನ್ನ ನಂತರ ನಾನು ಯಾವುದೇ ಪಂಥವನ್ನು ಬಿಟ್ಟುಹೋಗಬಯಸುವುದಿಲ್ಲ." ಅವರ ಮುಖ್ಯವಾದ ಒತ್ತು ಕ್ರಿಯೆ ಮತ್ತು ಅನುಷ್ಠಾನದ ಮೇಲಿತ್ತು. ಪ್ರತಿಯೊಬ್ಬರೂ ದಿನದಿನವೂ ಗ್ರಹಿಸುವ ಸತ್ಯಕ್ಕೆ ಅನುಸಾರವಾಗಿ ಬದುಕುವುದರಲ್ಲಿತ್ತು. ಅವರು ಹೇಳುತ್ತಾರೆ: "ನಾನು ಸನಾತನ ಸತ್ಯಗಳನ್ನು ನಮ್ಮ ದೈನಂದಿನ ಜೀವನ, ಸಮಸ್ಯೆಗಳಿಗೆ ನನ್ನದೇ ಮಾರ್ಗದಲ್ಲಿ ಅನ್ವಯಿಸಲು ಯತ್ನಿಸಿದ್ದೇನಷ್ಟೆ" (ಸತ್ಯ ಮತ್ತು ಅಹಿಂಸೆ ಪರ್ವತಗಳಷ್ಟು ಪ್ರಾಚೀನವೆಂದು ಅವರ ಹೇಳಿಕೆ.) ಅವರು ಮತ್ತೂ ಹೇಳುತ್ತಾರೆ: "ನಾನು ಪ್ರತಿಪಾದಿಸುವ ಸರಳ ಸತ್ಯಗಳಲ್ಲಿ ನಂಬಿಕೆಯುಳ್ಳವರು, ಅವುಗಳಲ್ಲಿ ಬದುಕುವುದರಿಂದ ಮಾತ್ರ ಅವುಗಳನ್ನು ಪ್ರಸಾರ ಮಾಡಬಲ್ಲರು." ಅವರು ಸೇರಿಸುತ್ತಾರೆ: "ನನ್ನ ಇಡೀ ರಚನಾತ್ಮಕ ಕಾರ್ಯಕ್ರಮ ಅಹಿಂಸೆಯಲ್ಲಿ ಬೇರು ಬಿಟ್ಟಿದೆಯೆಂಬುದನ್ನು ಹೇಗೆ ಜಗತ್ತಿಗೆ ಪುಸ್ತಕಗಳಿಂದ ಮನವರಿಕೆ ಮಾಡಿಕೊಡಲಿ? ನನ್ನ ಬದುಕು ಮಾತ್ರವೆ ಅದನ್ನು ತೋರಿಸಬಲ್ಲುದು." ಸಿದ್ಧಾಂತಗಳಿಗೆ ಮತ್ತು ಲಿಖಿತ ತತ್ತ್ವದರ್ಶನಕ್ಕೆ ಅವರು ಹೇಗೆ ಗೌಣಸ್ಥಾನವಿತ್ತರು, 'ಟನ್‌ಗಟ್ಟಲೆ



ಸಿದ್ಧಾಂತ'ಕ್ಕೆ ವಿರುದ್ಧವಾಗಿ 'ಒಂದು ಔನ್ಸ್ ಕ್ರಿಯೆ'ಗೆ ಹೇಗೆ ಮಹತ್ತ್ವ ಕೊಟ್ಟರು ಎಂಬುದನ್ನು ಈ ಎಲ್ಲ ಉದ್ಧೃತಿಗಳು ಸ್ಪಷ್ಟವಾಗಿ ತೋರ್ಪಡಿಸುತ್ತವೆ.

ಆದರೂ ಅವರೊಬ್ಬ ತತ್ತ್ವದರ್ಶಿಯಾಗಿದ್ದರು, ಆ ಶಬ್ದದ ಅಕ್ಷರಾರ್ಥದಲ್ಲಿ ಹಾಗೂ ಅತ್ಯಂತ ದಿಟವಾದ ಅರ್ಥದಲ್ಲಿ. ಅವರು ಸತ್ಯ, ಜ್ಞಾನ, ವಿವೇಕಗಳ ಪ್ರೇಮಿಯಾಗಿದ್ದರು. ಒಂದು ಜೀವನ ಮತ್ತು ಕ್ರಿಯಾ ಸಿದ್ಧಾಂತ, ಒಂದು ಲೋಕದೃಷ್ಟಿ (welt-anschaung) ಮತ್ತು ಏಕೀಕೃತ ಆಲೋಚನಾವ್ಯೂಹ ಅವರಲ್ಲಿತ್ತು; ಅದು ಅವರೆಲ್ಲ ವಿಚಾರ, ಕ್ರಿಯೆಗಳ ತಳಪಾಯವಾಗಿತ್ತು. ಅವರಿಗೊಂದು ಭಾವನಾಸಮುಚ್ಚಯವಿದ್ದು, ಅದನ್ನವರು ಅವಿರತವಾಗಿ, ಅಕುಂಠಿತವಾಗಿ ಹಿಡಿದು ನಡೆದರು. ಅವರ ಭಾವನಾವ್ಯೂಹದಲ್ಲಿ ಸತ್ಯ, ಅಹಿಂಸೆಗಳ ಅವಳಿ ಆದರ್ಶಗಳು ಪ್ರಧಾನವಾಗಿ ಕಾಣಿಸಿಕೊಂಡರೂ ತತ್ತ್ವಜ್ಞಾನಿಯೊಬ್ಬನ ನೈಜ ಪ್ರವೃತ್ತಿಸಹಿತ ಅವರು ಘೋಷಿಸಿದರು: "ಮತ್ತಾವುದಕ್ಕಾಗಿಯಾದರೂ ಸತ್ಯವನ್ನು ಪರಿತ್ಯಜಿಸ ಬೇಕಾಗಿರಬಹುದು ಎಂಬ ನಿಲುವಿಗೆ ನಾನು ಹಿಂದೆಂದಿಗಿಂತ ಹೆಚ್ಚು ಬಿಗಿಯಾಗಿ ಅಂಟಿಕೊಂಡಿದ್ದೇನೆ." ಅವರು ನುಡಿಯುತ್ತಾರೆ: "ಸಹಜ ಪ್ರವೃತ್ತಿಯಿಂದ ನಾನು ಸತ್ಯವಾದಿಯಾಗಿದ್ದೇನೆ, ಆದರೆ ಅಹಿಂಸಾವಾದಿಯಾಗಿಲ್ಲ. ಜೈನ ಮುನಿಯೊಬ್ಬರು ಒಮ್ಮೆ ಸರಿಯಾಗಿ ಹೇಳಿದ ಹಾಗೆ, ನಾನು ಸತ್ಯದ ಅನುಯಾಯಿಯಾದಷ್ಟು ಅಹಿಂಸೆಯ ಅನುಯಾಯಿಯಾಗಿಲ್ಲ. ಸತ್ಯವನ್ನು ಮೊದಲ ಸ್ಥಾನದಲ್ಲೂ ಅಹಿಂಸೆಯನ್ನು ಎರಡನೆಯ ಸ್ಥಾನದಲ್ಲೂ ಇರಿಸಿದ್ದೇನೆ. ಏಕೆಂದರೆ ಅವರು (ಮುನಿ) ಹೇಳಿದಂತೆ, ಸತ್ಯಕ್ಕಾಗಿ ಅಹಿಂಸೆಯನ್ನು ನಾನು ತ್ಯಜಿಸಬಲ್ಲವನಾಗಿದ್ದೆ. ವಾಸ್ತವವಾಗಿ, ನಾನು ಅಹಿಂಸೆಯನ್ನು ಕಂಡುಹಿಡಿದದ್ದು ನನ್ನ ಸತ್ಯಶೋಧನೆಯ ಹಾದಿಯಲ್ಲಿ. ಸತ್ಯಕ್ಕಿಂತ ದೊಡ್ಡ ಧರ್ಮವಿಲ್ಲ ಎಂದು ನಮ್ಮ ಪವಿತ್ರ ಗ್ರಂಥಗಳು ಘೋಷಿಸಿವೆ. ಆದರೆ ಅಹಿಂಸೆ ಅತ್ಯುನ್ನತ ಕರ್ತವ್ಯವೆಂದು ಅವು ಹೇಳಿವೆ." ಈ ಎಲ್ಲ ದೃಷ್ಟಿಯಿಂದ, ತತ್ತ್ವದರ್ಶಿಗಳ ಹೂರಣ ಅವರಲ್ಲಿರಲಿಲ್ಲವೆಂದು ಹೇಳುವ ಧೈರ್ಯ ಯಾರಿಗಿದೆ?

ತತ್ತ್ವದರ್ಶಿಗಳ ಯಾವ ನಿರ್ದಿಷ್ಟ ವರ್ಗಕ್ಕೆ ಗಾಂಧೀಜಿ ಸೇರಿದವರೆಂಬುದನ್ನು ನಾವು ಅರಿಯಲಾಗುವಂತೆ, ಅವರ ತತ್ತ್ವದರ್ಶನವನ್ನೂ ಹೆಸರಿಸಬಲ್ಲೆವೇ? ಅನೇಕ ಸಲ ತಮ್ಮನ್ನವರು 'ಅನುಷ್ಠಾನ ಆದರ್ಶವಾದಿ'ಯೆಂದು ಕರೆದುಕೊಂಡರು; ತಾವೊಬ್ಬ ಕೇವಲ ಕನಸುಗಾರ ಅಥವಾ ದ್ರಷ್ಟಾರ ಆಗಿರಲಿಲ್ಲವೆಂಬುದು ಅದರ ಅರ್ಥ. ವ್ಯಷ್ಟಿಗಾಗಿ ಮತ್ತು ಮನುಕುಲಕ್ಕಾಗಿ ಅವರಲ್ಲಿ ಉನ್ನತ ಭಾವನೆಗಳೂ ಅತ್ಯುನ್ನತ ಸಂಭವನೀಯ ಆದರ್ಶಗಳೂ ಇದ್ದುವು; ಜಗತ್ತಿನ ಮತ್ತು ಅದರ ಸಮಸ್ಯೆಗಳ ಬಗೆಗೆ ಅವರಲ್ಲಿ ನಿಲುವು ಆದರ್ಶಾತ್ಮಕವಾಗಿತ್ತು; ಆದರೆ ಒಬ್ಬ ಕ್ರಿಯಾವಾದಿಯಾಗಿ, ಅವರು ಆ ಆದರ್ಶಗಳನ್ನು ಕೇವಲ ವಿವರಿಸುವುದಕ್ಕಿಂತ ಮಿಗಿಲಾಗಿ ಅನುಷ್ಠಾನಗೊಳಿಸಲು ಹೆಚ್ಚು ಕಾತರರಾಗಿದ್ದರು. ಗಾಂಧೀಜಿಯ ತತ್ತ್ವದರ್ಶನವನ್ನು

ಕುರಿತು ಬರೆಯುವಾಗ, ಅದನ್ನು ವ್ಯಾವಹಾರಿಕ ಆದರ್ಶವಾದವೆಂದು ಕರೆದಿದ್ದಾರೆ, ಪ್ರೊ. ಎ.ಆರ್. ವಾಡಿಯಾ. ಈ ಹೆಸರು ಮತ್ತಾವುದೇ ಹೆಸರಿಗಿಂತ ಸತ್ಯಕ್ಕೆ ಹತ್ತಿರವಾಗಿದೆಯೆಂದು ಸುಲಭವಾಗಿ ಒಪ್ಪಬಹುದು. ಅದು, ಗಾಂಧಿಜಿಯ ಸಮನ್ವಯ ದೃಷ್ಟಿಯನ್ನು ಅಭಿವ್ಯಕ್ತಿಸುತ್ತದೆ. ನಿರಂತರ ವಿಕಾಸಶೀಲ ಮಾನವತೆಯ ಆದರ್ಶ ಪರಿಕಲ್ಪನೆ ಮತ್ತು ವಾಸ್ತವಿಕ ಸಂದರ್ಭದಲ್ಲಿ ಪ್ರತಿಯೊಬ್ಬ ವ್ಯಕ್ತಿ ಅದಕ್ಕೆ ದಿನದಿನವೂ ಕೊಡಬೇಕಾದ ಮೂರ್ತವಾದ ಆಕಾರ– ಇವುಗಳ ನಡುವೆ ಉದ್ದಿಷ್ಟವಾದ ಸಮನ್ವಯವದು.

ತತ್ತ್ವದರ್ಶನದ ವಸ್ತುವಿನ ಪರಿಗಣನೆ, ಸತ್ಯದ ಬಗೆಗಿನ ನಿಲುವನ್ನೂ ಆ ನಿಲುವಿನ ವಿವಿಧಾಂಶಗಳನ್ನೂ ವಿಧಾನಗಳನ್ನೂ ಒಳಗೊಳ್ಳುತ್ತದೆ. ಕೆಲವೊಮ್ಮೆ ಅಧ್ಯಾತ್ಮ ಶಾಸ್ತ್ರ, ಮನಶ್ಶಾಸ್ತ್ರ, ನೀತಿಶಾಸ್ತ್ರ ಇತ್ಯಾದಿಗಳೂ ಅದರಲ್ಲಿ ಸೇರುತ್ತವೆ. ನಾವಿಲ್ಲಿ ಗಾಂಧೀಜಿಯ ಲೋಕದೃಷ್ಟಿಯನ್ನು ಅವರು ಅಧ್ಯಾತ್ಮ ಶಾಸ್ತ್ರೀಯ ಮತ್ತು ಇತರ ದೃಷ್ಟಿಕೋನಗಳಿಂದ ಭಿನ್ನವಾದಂತೆ, ಅವರ ದರ್ಶನ ತತ್ತ್ವಗಳಿಗೆ ವಿಶೇಷವಾಗಿ ಸಂಬಂಧಿಸಿದಂತೆ ಪರಿಗಣಿಸಲಿದ್ದೇವೆ.

ತಾತ್ತ್ವಿಕ ವಿವೇಚನೆ ಮುಖ್ಯವಾಗಿ ಅಸ್ತಿತ್ವ ಮತ್ತು ಪರಿಣಮನದ ಸ್ವರೂಪವನ್ನು ಕುರಿತ ಸತ್ಯಾನ್ವೇಷಣೆಯಲ್ಲಿದೆ; ಅದನ್ನು ತಥ್ಯಶೋಧನವೆಂದೂ ಕರೆಯಬಹುದು. ಇದು ಮೂಲತತ್ತ್ವ ವಿಚಾರ. ಬ್ರಹ್ಮಸೂತ್ರಗಳಲ್ಲಿನ “ಅಥಾತೋ ಬ್ರಹ್ಮಜಿಜ್ಞಾಸಾ” (ಈಗ ಬ್ರಹ್ಮ ಅಥವಾ ಪರಮಸತ್ಯದ ಚಿಂತನ) ಎಂಬ ಪ್ರಥಮ ಸೂತ್ರ, ಮೂಲತತ್ತ್ವ ವಿಚಾರಾತ್ಮಕ ನಿಲುವನ್ನು ದ್ಯೋತಿಸುತ್ತದೆ. ಆದರೆ ನಮ್ಮ ಸತ್ಯಜ್ಞಾನವೆ ನಮ್ಮ ಜ್ಞಾನದ ತಳಹದಿ ಹಾಗೂ ಸ್ವರೂಪವನ್ನು, ನಾವದನ್ನು ಹೇಗೆ ಪಡೆಯುತ್ತೇವೆಂಬುದನ್ನು, ನಮ್ಮ ಇಂದ್ರಿಯ ಗ್ರಹಿಕೆಗಳಂಥ ಉಪಕರಣಗಳನ್ನು ನಮ್ಮ ಪ್ರಜ್ಞೆಯ ಚಟುವಟಿಕೆಗಳು ಇತ್ಯಾದಿಗಳನ್ನು ಮತ್ತು ಅಂತಿಮವಾಗಿ ಆ ಜ್ಞಾನದ ವಿಶ್ವಸನೀಯತೆಯನ್ನು ಅವಲಂಬಿಸಿರುತ್ತದೆ. ಇದು ಪ್ರಮಾಣ ಪ್ರಮೇಯ ವಿಚಾರದ ಕ್ಷೇತ್ರ. ಭಾರತೀಯ ತತ್ತ್ವಜ್ಞಾನದಲ್ಲಿ ನಾವದನ್ನು ಪ್ರಮಾಣವೆಂದು ಕರೆಯುತ್ತೇವೆ. ತಥ್ಯದ ಬಗೆಗಿನ ಸಾಕ್ಷ್ಯದ ವಿಶ್ವಸನೀಯತೆಯೆ ಪ್ರಾಮಾಣ್ಯ. ಆಮೇಲೆ ಎಲ್ಲ ಅಸ್ತಿತ್ವ, ಪರಿಣಮನ, ಜ್ಞಾನ ಇತ್ಯಾದಿಗಳ ಉದ್ದೇಶದ ಅನ್ವೇಷಣವಿದೆ. ಅಸ್ತಿತ್ವದಲ್ಲಿ ಏನಾದರೂ ಅರ್ಥ ಅಥವಾ ಉದ್ದೇಶವುಂಟೊ, ಇಲ್ಲವೆ ಇದೆಲ್ಲ ಭ್ರಮೆ ಅಥವಾ ಕವಿಯೊಬ್ಬ ಹೇಳಿದಂತೆ, ‘ಏನೇನೂ ಅರ್ಥವಿಲ್ಲದ’ ಪ್ರದರ್ಶನವೊ? ಇದು ಮೂಲ ಸಂಕಲ್ಪಾತ್ಮಕ ಪರಿಗಣನೆ, ಅಸ್ತಿತ್ವದ ಉದ್ದೇಶ ಅಥವಾ ಅರ್ಥದ ಅನ್ವೇಷಣ. ಈ ಎಲ್ಲ ಅಸ್ತಿತ್ವದ ಉದ್ದೇಶ ಅಥವಾ ಪ್ರಯೋಜನವೇನು? ಎಂದಮೇಲೆ ಮನುಷ್ಯ ವಸ್ತು, ಭಾವನೆಗಳಿಗೆ ಮತ್ತು ಸ್ವಂತ ಅನುಭವಗಳಿಗೆ ಆರೋಪಿಸುವ ಸಿದ್ಧಾಂತ ಮತ್ತು ಮೌಲ್ಯಸ್ವರೂಪವಿದೆ.



ಇದು ಸ್ವತಃ ಪ್ರಮಾಣವಾದವನ್ನೊಳಗೊಂಡು, ಕ್ರಿಯಾಕ್ಷೇತ್ರಕ್ಕೆ ಮತ್ತು ಮಾನವ ಕೆಲವು ಮೌಲ್ಯಗಳಿಗೆ ಕೊಡುವ ಆದ್ಯತೆಗಳಿಗೆ ಮುಖ್ಯವಾಗಿ ಸಂಬಂಧಿಸಿದೆ. ವ್ಯಕ್ತಿಗೆ ಪ್ರಿಯವಾದ ಸಿದ್ಧಾಂತವನ್ನು ಮತ್ತು ಮೌಲ್ಯಶ್ರೇಣಿಯನ್ನು ಧಾರ್ಮಿಕ ಮತ್ತು ನೈತಿಕ ಪರಿಗಣನೆಗಳು ಮುಖ್ಯವಾಗಿ ಅವಲಂಬಿಸುತ್ತವೆ.

ಗಾಂಧೀಜಿಯ ತತ್ತ್ವದರ್ಶನ, ಹೆಚ್ಚಾಗಿ ಭಾರತೀಯ ಪರಂಪರೆಯ ಜಾಡಿನಲ್ಲಿದೆ ಎಂಬುದನ್ನು ನಾವಾಗಲೆ ಹಿಂದೆಯೆ ನೋಡಿದ್ದೇವೆ. ಅದರ ಬೇರುಗಳನ್ನು ಧಾರ್ಮಿಕ ಮತ್ತು ಪ್ರಾತಿಭ ನಿಲುವಿನಲ್ಲಿ, ಆಂತರಿಕ ಆಧ್ಯಾತ್ಮಿಕ ಅನುಭವಗಳಲ್ಲಿ ಕಾಣಬೇಕು; ಆದರೆ ಅವು ನೈತಿಕ ಪ್ರಜ್ಞೆಯಿಂದ, ತರ್ಕದಿಂದ ಮತ್ತು ಅವರ ಸ್ವಂತ ಆಂತರಿಕ ಬೆಳಕಿನಿಂದ ಅಥವಾ ಮನಸ್ಸಾಕ್ಷಿಯಿಂದ– ಅದನ್ನು ಯಾವ ಹೆಸರಿನಿಂದಾದರೂ ಕರೆಯಿರಿ– ಪರೀಕ್ಷಿತವಾಗಬೇಕು. ಸಾರತಃ ಅದು ವ್ಯಕ್ತಿನಿಷ್ಠ. ಕಡೆಗೂ, ಎಲ್ಲವನ್ನೂ, ದೇವರನ್ನು ಮತ್ತು ಸತ್ಯವನ್ನು ಕೂಡ, ಪರೀಕ್ಷಿಸಿ ಬೆಲೆಗಟ್ಟಲು ದೇವರು ಮನುಷ್ಯನಿಗಿತ್ತಿರುವ ಏಕೈಕ ಅಂತಿಮ ಉಪಕರಣ ತರ್ಕವೆಂದು ಅವರು ಹೇಳಿದ್ದಾರೆ. ಅಷ್ಟರಮಟ್ಟಿಗೆ ಅವರು ಸಂಪೂರ್ಣವಾಗಿ ಒಬ್ಬ ವಿಚಾರವಾದಿ. ತರ್ಕ ಅದರಲ್ಲಿ ಮುಖ್ಯತಮ ಅಂಶವೆಂಬ ತೀರ್ಪನ್ನು ಆತ್ಮಸಾಕ್ಷಿಯ ಪರಿಕಲ್ಪನೆ– ವಿಶ್ಲೇಷಣೆಗೊಂಡಾಗ ನೀಡುತ್ತದೆ. ಮನುಷ್ಯ ಪ್ರಜ್ಞಾಪೂರ್ವಕವಾಗಿ ಎಸಗತಕ್ಕದ್ದೆಲ್ಲದರ ನ್ಯಾಯಾಧೀಶ, ಆತ್ಮಸಾಕ್ಷಿ, ಅದು ಮನಸ್ಸಿನಲ್ಲಿರುವ ಅತ್ಯಹಂ. ಅದರ ಪೂರ್ಣ ವರ್ಣನೆ ಗೀತೆಯಲ್ಲಿರುವಂತೆ ತೋರುತ್ತದೆ: “ಉಪದ್ರಷ್ಟಾ ಅನುಮಂತಾ ಭರ್ತಾ ಭೋಕ್ತಾ ಮಹೇಶ್ವರಃ; ಪರಮಾತ್ಮೇತಿ ಚಾಪ್ಯುಕ್ತೋ ದೇಹೇಸ್ಮಿನ್ ಪುರುಷಃ ಪರಃ” (ಅವನು ಈ ಮಾನುಷ ಶರೀರದಲ್ಲಿರುವ ಅತ್ಯುನ್ನತ ವ್ಯಕ್ತಿ; ಅವನನ್ನು ಪರಮಾತ್ಮನೆಂದೂ ಕರೆಯಲಾಗುತ್ತದೆ. ಅವನು ಸಾಕ್ಷಿ; ಅವನು ಒಪ್ಪುವವನು ಅಥವಾ ಒಪ್ಪದವನು; ಅವನು ಮಹಾಪ್ರಭು; ಎಲ್ಲವನ್ನೂ ಒದಗಿಸುವವನು ಮತ್ತು ಅನುಭವಿಸುವವನು.) ಇಲ್ಲಿ ಮಾನವ ಮನಸ್ಸಾಕ್ಷಿಯ ವ್ಯಕ್ತೀಕರಣವಿದೆ; ಪರಮಾತ್ಮನೊಡನೆ ಅದರ ಅಭಿನ್ನತೆ ಕೂಡ: ಮನಸ್ಸಾಕ್ಷಿ ಭಗವಂತನದೇ ‘ಅಂಶ’, ಅವಿಭಾಜ್ಯಾಂಗ ಎಂಬುದು ಇದರ ಅರ್ಥ. (“ಮಮೈವಾಂಶೋ ಜೀವಲೋಕೇ ಜೀವಭೂತಃ ಸನಾತನಃ”)

ಗಾಂಧೀಜಿಯಲ್ಲಿ ಮೂಲ ಸಂಕಲ್ಪ ವಾದ ಮತ್ತು ಸ್ವತಃ ಪ್ರಮಾಣ ವಾದ ಮುಖ್ಯವೆಂಬುದೂ ಧಾರ್ಮಿಕ ಅಥವಾ ಆಧ್ಯಾತ್ಮಿಕ ಮತ್ತು ನೈತಿಕ ಮೌಲ್ಯಗಳು ಮೇಲುಗೈಯೆಂಬುದೂ ಸತ್ಯದ ಬಗೆಗಿನ ಅವರ ನಿಲುವಿನಿಂದ ಸ್ಪಷ್ಟ. ಅಸ್ತಿತ್ವದ ಸ್ವರೂಪ, ಜ್ಞಾನಸಿದ್ಧಾಂತ ಅವರ ಆಲೋಚನೆಗೆ ಹೊರಗಲ್ಲ; ಆದರೆ ಈ ವಿಷಯಗಳನ್ನು ಅವರು ಬಹಳ ಲಂಬಿಸುವುದಿಲ್ಲ. ಅಧ್ಯಾತ್ಮ ಶಾಸ್ತ್ರೀಯ ಸಮಸ್ಯೆಗಳನ್ನು ಕುರಿತ ಅವರ ದೃಷ್ಟಿ ಬುದ್ಧನ ದೃಷ್ಟಿಗೆ ತಕ್ಕಮಟ್ಟಿಗೆ ಸದೃಶವಾಗಿತ್ತೆಂದೂ ಹೇಳಬಹುದು. ಈ ಚಿಂತನಗಳು ಸದ್ಯಃ ಪ್ರಾಮುಖ್ಯವುಳ್ಳವಲ್ಲ ಅಥವಾ ಬಹಳ ಉಪಯುಕ್ತವಾದುವಲ್ಲ,

ಏಕೆಂದರೆ, ನಿಭಾಯಿಸಬೇಕಾದ ಅನುಭವದ ನಗ್ನ ಸತ್ಯ 'ದುಃಖ'ದ್ದು ಎಂದು ಬುದ್ಧ ಹೇಳಿದ. ವಾಸ್ತವವಾಗಿ ಇಲ್ಲಿ, ಈಗ ಅನುಭೂತವಾಗತಕ್ಕದ್ದು ದುಃಖ; ಕೂಡಲೆ ತೊಲಗಿಸಬೇಕಾದ್ದು ಅದನ್ನೆ. ಉದಾಹರಣೆಗೆ, ವೈದ್ಯ ರೋಗಗಳ ಮತ್ತು ಅವುಗಳ ಚಿಕಿತ್ಸೆಯ ಬಗೆಗೆ ಸಾಧಾರಣೀಕರಿಸಿ ಚಿಂತಿಸುವುದರ ಬದಲು ರೋಗಿಯ ತಲೆನೋವನ್ನು ಗುಣಪಡಿಸಲು ಯತ್ನಿಸಬೇಕು. ಅಮೂರ್ತ, ಅಂತಿಮ ತಥ್ಯವನ್ನು ಕುರಿತು ಚಿಂತಿಸುವುದರ ಬದಲು ನಾವು ಬಲ್ಲ, ಅನುಭವಿಸುವ ಮತ್ತು ಸಾಕ್ಷಾತ್ಕರಿಸಿಕೊಳ್ಳುವ ಸತ್ಯದೊಡನೆ ತುರ್ತಾಗಿ ಇಲ್ಲೆ, ಈಗಲೇ ವ್ಯವಹರಿಸಬೇಕೆಂದು ಇದೇ ಧಾಟಿಯಲ್ಲಿ ಗಾಂಧೀಜಿ ಹೇಳಬಲ್ಲವರಾಗಿದ್ದರು. ಅವರು ತಮ್ಮ ಸ್ವಂತ ಚಿಂತನಗಳಿಗಿಂತ ಮಿಗಿಲಾಗಿ ಉಪನಿಷತ್ತುಗಳನ್ನು ಋಷಿ, ಸಂತರನ್ನೂ ತಮ್ಮ ಅಧ್ಯಾತ್ಮಶಾಸ್ತ್ರಕ್ಕಾಗಿ ಆಧರಿಸಿದರು. ಅಲ್ಲದೆ, ಅಂತಿಮ ತಥ್ಯದ ಸ್ವರೂಪ ಕೂಡ ಬೌದ್ಧಿಕ ತರ್ಕೀಕರಣಕ್ಕಿಂತ ಮಿಗಿಲಾಗಿ ಅನುಭವದ ವಸ್ತುವಾಗಿತ್ತು. ಜ್ಞಾನವನ್ನು ಅನುಭವದಿಂದ ಮತ್ತು ತರ್ಕದಿಂದ ಪರೀಕ್ಷಿಸಬೇಕಿತ್ತು; ಜ್ಞಾನದ ಕೇವಲ ಸಿದ್ಧಾಂತದಿಂದ ಬಹಳ ಪ್ರಯೋಜನವಿರಲಿಲ್ಲ. ಅವರ ನಿಲುವು ಯಾವಾಗಲೂ ವೈಜ್ಞಾನಿಕ ಮತ್ತು ವ್ಯಾವಹಾರಿಕವಾಗಿತ್ತು, ಕರ್ಮಯೋಗಿಯದಾಗಿತ್ತು ಎಂಬುದು ಸ್ಪಷ್ಟ.

ಮುಖ್ಯವಾಗಿ ಪಾಶ್ಚಾತ್ಯ ಸಂಪ್ರದಾಯಗಳ ಪ್ರಕಾರ, ಗಾಂಧೀಜಿಯ ಸತ್ಯ ಸಂಬಂಧಿ ನಿಲುವಿನ ಮೂಲಾಂಶಗಳನ್ನು ಹಿಂದೆ ಸೂಚಿಸಿದ್ದೇನೆ. ಭಾರತದಲ್ಲಿ, ತತ್ತ್ವಶಾಸ್ತ್ರವೆಂಬುದು ದರ್ಶನ, ಸತ್ಯದ ಸ್ಪಷ್ಟದರ್ಶನ ಮತ್ತು ಅಸ್ತಿತ್ವದ ಸಂಯೋಜಿತ ಹೈತುಕ ವಿವರಣೆ. ಅಸ್ತಿತ್ವದಲ್ಲಿ ಮೂರು ಮುಖ್ಯ ವರ್ಗಗಳಿರುತ್ತವೆ: ಜೀವ, ಜಗತ್ತು ಮತ್ತು ಈಶ್ವರ. ಅಸ್ತಿತ್ವದ ಈ ಮೂರು ಮೂಲಾಂಶಗಳ ಸ್ವರೂಪವನ್ನು ಲಕ್ಷಣೀಕರಿಸುವ ಮತ್ತು ಅವುಗಳ ಪರಸ್ಪರ ಸಂಬಂಧವನ್ನು ಸಮರ್ಥವಾಗಿ ವಿವರಿಸುವ ವಿಚಾರವ್ಯವಸ್ಥೆಯೆ ದರ್ಶನ. ಭಾರತದ ಆರು ದರ್ಶನಗಳು ತತ್ತ್ವಶಾಸ್ತ್ರದ ವಿದ್ಯಾರ್ಥಿಗೆಲ್ಲ ಸುಪರಿಚಿತ.

ನಾವು ಗಾಂಧಿಜಿಯ ತಾತ್ತ್ವಿಕ ಪರಿಕಲ್ಪನೆಗಳನ್ನು ಪಾಶ್ಚಾತ್ಯ ಸಂಪ್ರದಾಯಗಳ ದೃಷ್ಟಿಕೋನದಿಂದ ಸಮೀಪಿಸಲಿ ಅಥವಾ ಭಾರತೀಯ ಸಂಪ್ರದಾಯಗಳ ದೃಷ್ಟಿಕೋನದಿಂದ ಸಮೀಪಿಸಲಿ, ಅವರ ಕೃತಿಗಳಲ್ಲಿ ಯಾವುದೇ ಪೂರ್ವಸಿದ್ಧ ವಿಚಾರವ್ಯವಸ್ಥೆಯನ್ನು ನಾವು ಕಾಣುವುದಿಲ್ಲ. ಅವರ ಬರಹಗಳಿಂದ, ಹೇಳಿಕೆಗಳಿಂದ ಮತ್ತು ಪತ್ರಗಳಿಂದ ಅವರ ತತ್ತ್ವದರ್ಶನದ ಮೂಲಾಂಶಗಳನ್ನು ನಾವು ಸಂಗ್ರಹಿಸಬೇಕು ಮತ್ತು ಅವರ ಕ್ರಿಯೆಗಳ ದೃಷ್ಟಿಯಿಂದ ವ್ಯಾಖ್ಯಾನಿಸಬೇಕು. ಅವರದು ಸಾಂಪ್ರದಾಯಿಕ ಅಥವಾ ಶೈಕ್ಷಣಿಕ ಅರ್ಥದ ತತ್ತ್ವದರ್ಶನಕ್ಕಿಂತ ಮಿಗಿಲಾಗಿ ಬದುಕು ಮತ್ತು ಕಾರ್ಯದ ತತ್ತ್ವದರ್ಶನ. ಅವರು ಮಾನವ ಪ್ರಗತಿಯಲ್ಲಿ ಮತ್ತು ವಿಕಾಸದಲ್ಲಿ ನಂಬಿಕೆಯಿರಿಸಿದ್ದರು; ಆ ವಿಕಾಸ, ಮೃಗೀಯ ಅಸ್ತಿತ್ವದ ಕೆಳಹಂತಗಳಿಂದ ಪ್ರೀತಿ, ಶಾಂತಿ, ಸಾಮರಸ್ಯ,



ಸ್ನೇಹ ಮತ್ತು ಸತ್ಯಾನ್ವೇಷಣೆಯಲ್ಲಿ ಹಾಗೂ ಐಕ್ಯಕಾರಕ ಆಧ್ಯಾತ್ಮಿಕ ಬದುಕಿನ ಅನ್ವೇಷಣೆಯಲ್ಲಿ ಪರಸ್ಪರ ಸಹಕಾರ– ಈ ಉದಾತ್ತ ಪ್ರವೃತ್ತಿಗಳು ನಿರ್ವಹಿಸುವ ಮೇಲು ಹಂತಗಳಿಗೆ ಆಗುವಂಥದು. ತಮ್ಮ ಬದುಕಿನ ಉದ್ದೇಶ ಹಾಗೂ ಮಾನವ ಅಸ್ತಿತ್ವದ ಬಗೆಗೆ ಅವರಲ್ಲಿ ಬಹಳ ಸ್ಪಷ್ಟತೆಯಿತ್ತು. ಸೌಂದರ್ಯ ಮತ್ತು ಶಿವದ, ಹಾಗೂ ಬದುಕಿನಲ್ಲಿ ಅವುಗಳ ಸ್ಥಾನದ ಸಂಪೂರ್ಣ ಅರಿವು ಅವರಿಗಿತ್ತು. ಆದರೆ ಅವರು ಹೇಳಿದರು: "ಮೊದಲು ಅನ್ವೇಷಿಸಬೇಕಾದ್ದು ಸತ್ಯವನ್ನು; ಅನಂತರ, ಅದಕ್ಕೆ ಸೌಂದರ್ಯ, ಶಿವಗಳನ್ನೂ ಸೇರಿಸಲಾಗುವುದು." ಅವರ ಜೀವನದ ಬಹುಭಾಗ ಮತ್ತು ಅತ್ಯುತ್ತಮ ಶಕ್ತಿಗಳು ಸ್ವಾತಂತ್ರ್ಯ ಹೋರಾಟದಲ್ಲಿ ಮತ್ತು ಸಾಮಾಜಿಕ–ಆರ್ಥಿಕ ಸುಧಾರಣೆಯ ಕ್ಷೇತ್ರದಲ್ಲಿ ವ್ಯಯಗೊಂಡುವಾದರೂ ಅವರ ಆಂತರಿಕ ಬದುಕು ಪರಿವರ್ತನೀಯ ಶಬ್ದಗಳಾದ ಸತ್ಯ–ದೇವರುಗಳ ನಿರಂತರ ಹುಡುಕಾಟವಾಗಿತ್ತು. ಅವರು ಬರೆದರು: "ನನ್ನ ಪಾಲಿಗೆ ದೇವರು ಮತ್ತು ಸತ್ಯ ಪರಿವರ್ತನೀಯ ಶಬ್ದಗಳು; ದೇವರು ಅಸತ್ಯ, ಚಿತ್ರಹಿಂಸೆಗಳ ದೇವರೆಂದು ಯಾರಾದರೂ ನನಗೆ ಹೇಳಿದರೆ, ಅವನ ಪೂಜೆಯನ್ನು ನಾನು ನಿರಾಕರಿಸುತ್ತೇನೆ. ಆದ್ದರಿಂದ, ರಾಜಕೀಯದಲ್ಲೂ ನಾವು 'ಸ್ವರ್ಗ ಸಾಮ್ರಾಜ್ಯ'ವನ್ನು ಸ್ಥಾಪಿಸಬೇಕಿದೆ."

ತಮ್ಮ ಆತ್ಮಕಥೆಯಲ್ಲಿ ಅವರು ಹೇಳುತ್ತಾರೆ: "ನನಗೆ ಮಾತ್ರ ಗೊತ್ತಿರುವ ಮತ್ತು ರಾಜಕೀಯ ಕ್ಷೇತ್ರದಲ್ಲಿ ಕೆಲಸ ಮಾಡಲು ನನಗಿರುವಂಥ ಶಕ್ತಿಗೆ ಆಕರವಾದ ಆಧ್ಯಾತ್ಮಿಕ ಕ್ಷೇತ್ರದ ನನ್ನ ಪ್ರಯೋಗಗಳನ್ನು ನಾನು ನಿರೂಪಿಸಲು ಖಂಡಿತ ಇಷ್ಟಪಡಬೇಕು." ತಮ್ಮ ಜೀವನೋದ್ದೇಶದ ಬಗೆಗೆ ಅವರು ಹೇಳುತ್ತಾರೆ: "ನನ್ನ ಸಾಧನೆಯ ಬಯಕೆ, ಈ ಮೂವತ್ತು ವರ್ಷ ನಾನು ಶ್ರಮಿಸಿ ಹಂಬಲಿಸಿರುವುದು ಆತ್ಮಸಾಕ್ಷಾತ್ಕಾರಕ್ಕಾಗಿ, ಭಗವಂತನನ್ನು ಮುಖಾಮುಖಿ ಕಾಣುವುದಕ್ಕಾಗಿ, ಮೋಕ್ಷ ಸಂಪಾದನೆಗಾಗಿ... ಮಾತು, ಬರವಣಿಗೆಯ ಮೂಲಕ ನಾನು ಮಾಡುವುದೆಲ್ಲ, ರಾಜಕೀಯ ರಂಗದಲ್ಲಿ ನನ್ನ ಪ್ರಯತ್ನಗಳೆಲ್ಲ ಇದೇ ಗುರಿಯತ್ತ ನಿರ್ದೇಶಿತವಾಗಿದೆ." ಅವರು ತಮ್ಮ ಬದುಕಿನಲ್ಲಿ ಮತ್ತು ಧಾರ್ಮಿಕ, ಸಾಮಾಜಿಕ, ಆರ್ಥಿಕ ಅಥವಾ ರಾಜಕೀಯದಂತಹ ಚಟುವಟಿಕೆಗಳಲ್ಲಿ ಪ್ರಪ್ರತ್ಯೇಕ ಕೊಠಡಿಗಳಿವೆಯೆಂದು ನಂಬುತ್ತಿರಲಿಲ್ಲ. "ನನ್ನ ಬದುಕೊಂದು ಅವಿಭಾಜ್ಯ ಅಖಂಡವಾಗಿದೆ; ನನ್ನೆಲ್ಲ ಚಟುವಟಿಕೆಗಳು ಒಂದರೊಡನೊಂದು ಬೆರೆಯುತ್ತವೆ ಮತ್ತು ಮನುಕುಲವನ್ನು ಕುರಿತ ನನ್ನ ತಣಿಸಲಾಗದ ಪ್ರೇಮದಿಂದ ಅವೆಲ್ಲ ಉಗಮಗೊಳ್ಳುತ್ತವೆ" ಎಂದು ಅವರು ನುಡಿಯುತ್ತಾರೆ. ಅವರಿಗೆ ತಮ್ಮ ಬದುಕಿನಲ್ಲಿ ಏಕೈಕ ಧ್ಯೇಯವಿತ್ತು; ಅದೆಂದರೆ, ಸತ್ಯವನ್ನು, ದೇವರನ್ನು–ಅಸ್ತಿತ್ವದ ಸರ್ವಸ್ವವಾದ ಅತೀತ ಮತ್ತು ಅಂತಸ್ಥ ಶಕ್ತಿಯನ್ನು– ಸಾಕ್ಷಾತ್ಕರಿಸಿಕೊಳ್ಳುವ ಅಭೀಪ್ಸೆಯ ತೃಪ್ತಿ. ಅವರು ಘೋಷಿಸಿದರು: "ಸತ್ಯಕ್ಕಷ್ಟೆ ನನ್ನ ಸಮರ್ಪಣ; ಸತ್ಯಕ್ಕೆ ಮಾತ್ರ ನನ್ನ ಶಿಸ್ತು." ಸಾಮಾನ್ಯವಾಗಿ ಧಾರ್ಮಿಕವೆನಿಸಿಕೊಳ್ಳುವ

ಅಭೀಪ್ಸೆಯ ಮತ್ತು ಸಮರ್ಪಣದ ಈ ಬಗೆ ಯಾವುದೇ ನಿರ್ದಿಷ್ಟ ಧರ್ಮದ ಅಥವಾ ಧರ್ಮಗಳ ಅನುಯಾಯಿಗಳಿಗೆ ಸೀಮಿತವಲ್ಲ. ಧರ್ಮಶಬ್ದವನ್ನು ಗಾಂಧೀಜಿ ಒಂದು ವಿಶೇಷಾರ್ಥದಲ್ಲಿ ಬಳಸಿದರು. "ಧರ್ಮವೆಂದರೆ, ನನ್ನ ಪ್ರಕಾರ, ಸಂಪ್ರದಾಯಬದ್ಧ ಅಥವಾ ರೂಢಿಗತ ಧರ್ಮವಲ್ಲ; ಎಲ್ಲ ಧರ್ಮಗಳ ಹಿಂದಿರುವ, ನಮ್ಮನ್ನು ಸೃಷ್ಟಿಕರ್ತನಿಗೆ ಮುಖಾಮುಖಿಯಾಗಿಸುವ ಧರ್ಮ" ಎಂದರವರು. ವಾಸ್ತವವಾಗಿ, ಈ ಅಭೀಪ್ಸೆ ಧರ್ಮ ಶಬ್ದಕ್ಕೆ ಯೋಗ್ಯವಾದ ಎಲ್ಲ ಧರ್ಮಗಳಿಗೂ ಸಮಾನವಾದದ್ದು, ದಿಟವಾಗಿ ಸಾರತಃ ಆಧ್ಯಾತ್ಮಿಕವಾದುದು ಮತ್ತು ಮಾನವ ಹೃದಯದಲ್ಲಿ ಬೇರು ಬಿಟ್ಟದ್ದು. "ಅಸತೋ ಮಾ ಸದ್ಗಮಯ, ತಮಸೋ ಮಾ ಜ್ಯೋತಿರ್ಗಮಯ, ಮೃತ್ಯೋರ್ಮಾ ಅಮೃತಂಗಮಯ" ಎಂಬುದು ಉಪನಿಷತ್ತಿನ ಋಷಿಯ ಶ್ರದ್ಧಾನ್ವಿತ ಪ್ರಾರ್ಥನೆ. "ಅಸತ್ಯದಿಂದ ಸತ್ಯಕ್ಕೆ, ಕತ್ತಲೆಯಿಂದ ಬೆಳಕಿಗೆ, ಮೃತ್ಯುವಿನಿಂದ ಅಮೃತತ್ವಕ್ಕೆ ನನ್ನನ್ನು ಕರೆದೊಯ್" ಎಂಬುದು ಪ್ರತಿಯೊಂದು ಜಾಗೃತ ಚೇತನದ ಹಾಡಿನ ಪಲ್ಲವಿ. ಗಾಂಧೀಜಿ ಹೇಳುತ್ತಾರೆ: "ಪೂರ್ಣಾಭಿವ್ಯಕ್ತಿಯನ್ನು ಕಂಡುಕೊಳ್ಳುವುದಕ್ಕಾಗಿ ತೆರುವ ಯಾವ ಬೆಲೆಯೂ ದೊಡ್ಡದಲ್ಲವೆಂದು ಭಾವಿಸತಕ್ಕದ್ದು ಮತ್ತು ತನ್ನನ್ನೂ ತನ್ನ ಕರ್ತನನ್ನೂ ಅರಿತು, ಅವನ ಮತ್ತು ತನ್ನ ನಡುವಣ ನಿಜವಾದ ಸಂವಾದವನ್ನು ಅರ್ಥಮಾಡಿಕೊಳ್ಳುವತನಕ ಆತ್ಮವನ್ನು ಸಂಪೂರ್ಣ ಅವಿಶ್ರಾಂತವಾಗಿಯೆ ಉಳಿಸತಕ್ಕದ್ದು ಮಾನವ ಸ್ವಭಾವದಲ್ಲಿನ ನಿತ್ಯಾಂಶ."

ಗಾಂಧೀಜಿಯ ಬದುಕಿನ ಮುಖ್ಯ ಮತ್ತು ಏಕೈಕ ಧ್ಯೇಯ ಅತ್ಯುನ್ನತ ಹಂತದ ಆಧ್ಯಾತ್ಮಿಕ ಸಾಕ್ಷಾತ್ಕಾರವಾಗಿತ್ತು ಮತ್ತು ಅದು ಮಾನವ ಸ್ವಭಾವದಲ್ಲೆ ಆಳವಾಗಿ ಬೇರು ಬಿಟ್ಟಿರುವ ಸಹಜ ಧ್ಯೇಯ ಕೂಡ ಎನ್ನುವುದು ಇದುವರೆಗೆ ನಾನು ಹೇಳಿರುವುದರಿಂದ ಸ್ಪಷ್ಟ. ಆದ್ದರಿಂದ ಅದು ಪ್ರಜ್ಞಾಪೂರ್ವಕ ಅಥವಾ ಅಪ್ರಜ್ಞಾಪೂರ್ವಕವಾಗಿ ಇಡೀ ಮನುಕುಲದ ಧ್ಯೇಯ. ಮಾನವ ಜೀವನ ಆ ಧ್ಯೇಯಸಾಧನೆಗಾಗಿ ಒಂದು ನಿರಂತರ ಮತ್ತು ಶ್ರದ್ಧಾನ್ವಿತ ಆಧ್ಯಾತ್ಮಿಕ ಶಿಸ್ತಾಗಬೇಕು. ಇದು ಅವರ ಜೀವಿತೋದ್ದೇಶದ ಕೀಲಿಕೈಯನ್ನು ನಮಗೆ ಕೊಡುತ್ತದೆ ಮತ್ತು ಅವರಿಗೆ ಪವಿತ್ರವಾಗಿದ್ದ ಮೌಲ್ಯಶ್ರೇಣಿಯನ್ನು ಒಳಗೊಳ್ಳುತ್ತದೆ. ಬದುಕಿನ ಪ್ರಗತಿಯನ್ನು ಅಧ್ಯಾತ್ಮದ ಉನ್ನತ ಹಂತಗಳ ಸಿದ್ಧಿಯ ಪ್ರಗತಿಯಿಂದ ಸಹಜವಾಗಿ ಅಳೆಯಬೇಕು. ಈ ಎರಡು ಸಂಗತಿಗಳು– ಆಧ್ಯಾತ್ಮಿಕ ಉದ್ದೇಶ ಮತ್ತು ಅಧ್ಯಾತ್ಮಿಕ ಮೌಲ್ಯ ಶ್ರೇಣಿ– ಗಾಂಧೀಜಿಯ ತಾತ್ತ್ವಿಕ ಭಾವನೆಗಳುದ್ದಕ್ಕೂ ಚುಕ್ಕಾಣಿ ಹಿಡಿದುವು.

ಈಗ ಗಾಂಧೀಜಿಯ ತಾತ್ತ್ವಿಕ ಭಾವನೆಗಳು.

ತಮ್ಮ ಅತ್ಯಂತ ಮೂಲಭೂತ ನಂಬಿಕೆಗಳಲ್ಲಿ ಒಂದನ್ನು ಘೋಷಿಸುವ ಸಂದರ್ಭದಲ್ಲಿ ಅವರು ಹೇಳುತ್ತಾರೆ: "ಎಲ್ಲವನ್ನೂ ವ್ಯಾಪಿಸಿರುವ, ಲಕ್ಷಣೀಕರಿಸಲಾಗದ ನಿಗೂಢ ಶಕ್ತಿಯೊಂದುಂಟು. ನಾನದನ್ನು ಕಾಣದಿದ್ದರೂ ಅನುಭವಿಸುತ್ತೇನೆ. ಈ



ಅದೃಶ್ಯ ಶಕ್ತಿ ತನ್ನನ್ನು ಅನುಭವಕ್ಕೆ ತಂದುಕೊಡುತ್ತದೆ; ಆದರೂ ಎಲ್ಲ ಸಾಕ್ಷ್ಯವನ್ನು ನಿರಾಕರಿಸುತ್ತದೆ: ಏಕೆಂದರೆ, ನಾನು ನನ್ನ ಇಂದ್ರಿಯಗಳ ಮೂಲಕ ಗ್ರಹಿಸತಕ್ಕದ್ದಕ್ಕೆಲ್ಲ ಅದು ವಿಸದೃಶವಾಗಿದೆ ('ನೇತಿ, ನೇತಿ', ಇದಲ್ಲ, ಇದಲ್ಲ), ಅದು ಇಂದ್ರಿಯಾತೀತ. ಆದರೆ ಭಗವಂತನ ಅಸ್ತಿತ್ವದಲ್ಲಿ ತಕ್ಕಮಟ್ಟಿಗೆ ತರ್ಕಸಿದ್ಧಗೊಳಿಸುವುದು ಸಾಧ್ಯ." ಇಲ್ಲಿ ಗಾಂಧೀಜಿ ಅತೀತ ಮತ್ತು ಅಂತಸ್ಥ ತಥ್ಯವನ್ನು ಸ್ಥಾಪಿಸುತ್ತಾರೆ ಮತ್ತು ಅಂತೆಯೆ, ಅದು ಕೇವಲ ವಾದಸಾಧ್ಯವಾದ ತಥ್ಯವಲ್ಲವೆಂಬುದನ್ನು ಒಪ್ಪುತ್ತಾರೆ. ಏಕೆಂದರೆ, ಅನ್ವೇಷಕ ಅಥವಾ ಜಿಜ್ಞಾಸುವನ್ನು ತರ್ಕವಷ್ಟೆ ತೃಪ್ತಿಗೊಳಿಸಲಾರದು. ಅನುಭಾವಿಯ ವಿಷಯದಲ್ಲಿ ಹೇಗೊ ಹಾಗೆ ಅಪರೋಕ್ಷಾನುಭೂತಿಯ ಅಂಶ ಇಲ್ಲಿ ಗಾಂಧೀಜಿಯ ತತ್ತ್ವದರ್ಶನಕ್ಕೆ ಪ್ರವೇಶಿಸುತ್ತದೆ. ಇಂಥ ಉಪಸ್ಥಿತಿಯ ಬಗೆಗೆ ಅವರು ಎಷ್ಟು ಸಕಾರಾತ್ಮಕವೆಂದರೆ, ಮತ್ತೊಂದೆಡೆ ಹೇಳುತ್ತಾರೆ: "ನೀವು ಮತ್ತು ನಾನು ಈ ಕೊಠಡಿಯಲ್ಲಿ ಕುಳಿತಿರುವುದಕ್ಕಿಂತ ಮಿಗಿಲಾಗಿ ಅವನ ಅಸ್ತಿತ್ವದ ಬಗ್ಗೆ ನನಗೆ ಭರವಸೆಯಿದೆ... ದೇವರಲ್ಲಿ ನನ್ನ ನಂಬಿಕೆಯನ್ನು ಅಳಿಸಿಹಾಕಿ; ನಾನು ಸಾಯುತ್ತೇನೆ."

ದೇವರನ್ನು ಅಥವಾ ಸತ್ಯವನ್ನು ಲಕ್ಷಣಿಸುವುದಾಗಲಿ ವರ್ಣಿಸುವುದಾಗಲಿ ಸಾಧ್ಯವಿಲ್ಲ; ಅವನು ಅನಂತ ಮತ್ತು ಶಾಶ್ವತ. ಅವನನ್ನು ಶಬ್ದಗಳಲ್ಲಿ ವರ್ಣಿಸುವುದಾಗದು; ಏಕೆಂದರೆ, ನಾವು ನಮ್ಮ ಇಂದ್ರಿಯಗಳಿಂದ ಅರಿಯುವ ಮತ್ತು ನಮ್ಮ ಭಾಷೆಯಿಂದ ವರ್ಣಿಸುವ ಎಲ್ಲಕ್ಕಿಂತ ಅವನು ಭಿನ್ನ. ಆದರೂ ಅವನ ಸಾನ್ನಿಧ್ಯ ಅನುಭೂತವಾಗುತ್ತದೆ ಮತ್ತು ಅವನು ಒಂದು ಇಂದ್ರಿಯದ ಅಥವಾ ಎಲ್ಲ ಇಂದ್ರಿಯಗಳ ಮಾತ್ರವಲ್ಲ, ಮಾನವನ ಸಮಗ್ರ ಚೇತನದ ಒಟ್ಟು ಅನುಭವದ ವಸ್ತುವಾಗಿದ್ದಾನೆ. ಈ ಪರಾಶಕ್ತಿಯ ಸ್ವರೂಪ, ಐಕ್ಯಗಳ ಬಗೆಗೆ ಮಾತನಾಡುವಾಗ ಗಾಂಧೀಜಿ ಹೇಳುತ್ತಾರೆ: "ನನ್ನ ಸುತ್ತಣ ಎಲ್ಲವೂ ಸದಾ ಪರಿವರ್ತನೆಗೊಳ್ಳುತ್ತಿರುವಾಗ ಮತ್ತು ಸದಾ ಸಾಯುತ್ತಿರುವಾಗ, ಪರಿವರ್ತನಶೀಲವಾದುದರ ಹಿಂದೆ ಪರಿವರ್ತನರಹಿತವಾದ, ಎಲ್ಲವನ್ನೂ ಹಿಡಿದಿಟ್ಟಿರುವ, ಸೃಷ್ಟಿಸುವ, ಲಯಗೊಳಿಸುವ ಮತ್ತು ಪುನರ್ ಸೃಷ್ಟಿಸುವ ಜೀವಂತ ಶಕ್ತಿಯೊಂದಿದೆ ಎಂಬುದನ್ನು ನಾನು ನಿತ್ಯವೂ ಗ್ರಹಿಸುತ್ತೇನೆ. ಆ ಉದ್ಬೋಧಕ ಶಕ್ತಿ ಅಥವಾ ಚೈತನ್ಯವೆ ದೇವರು. ಕೇವಲ ಇಂದ್ರಿಯಗಳ ಮೂಲಕ ನಾನು ಕಾಣುವುದು ಮತ್ತಾವುದೂ ಇಲ್ಲದಿರುವುದರಿಂದ, ಆತನೊಬ್ಬನೆ ಇದ್ದಾನೆ."

ಹೀಗಾಗಿ, ದೇವರು ಅಥವಾ ಸತ್ಯ ಅಥವಾ ಪರಾಶಕ್ತಿ ಈ ಎಲ್ಲ ಪರಿವರ್ತನಶೀಲ ಅಸ್ತಿತ್ವದ ಏಕೈಕ ಮೂಲ ಕಾರಣ; ಅದು ಕೂಡ ವಸ್ತುತಃ ಶಾಶ್ವತ ಮತ್ತು ಅನಂತ; ಅದರ ಆದಿಯನ್ನು ಯಾರೂ ಅರಿಯರು. ಆದರೆ ಭಗವಂತನ ಸ್ವರೂಪದ ಬಗ್ಗೆ ಪ್ರಶ್ನೆ ಉದ್ಭವಿಸುತ್ತದೆ. ಅವರು ದಯಾಪರನೊ ಅಥವಾ

ನಿರ್ದಯನೊ? ಕೆಡುಕು, ದುಃಖ ಮತ್ತು ಅಸೀಮದ ಪರಿಮಿತಿ– ಇವಕ್ಕೆ ವಿವರಣೆ ಕೊಡಬೇಕು. ಗಾಂಧೀಜಿ ಹೇಳುತ್ತಾರೆ: "ಈ ಶಕ್ತಿ ಹಿತಕರವೊ, ಹಾನಿಕರವೊ? ನನಗದು ಶುದ್ಧ ಹಿತಕರವಾಗಿ ಕಾಣಿಸುತ್ತದೆ. ಏಕೆಂದರೆ, ಸಾವಿನ ನಡುವೆ ಜೀವ ಉಳಿಯುತ್ತದೆ, ಕತ್ತಲ ನಡುವೆ ಬೆಳಕು ಉಳಿಯುತ್ತದೆ ಎಂಬುದನ್ನು ನಾನು ಕಾಣುತ್ತೇನೆ. ಆದ್ದರಿಂದ ದೇವರಿಗೆ ಜೀವನ, ಸತ್ಯವೆ ಬೆಳಕು. ಅವನೇ ಪ್ರೀತಿ. ಅವನೇ ಪರಮ ಪ್ರಭು." ಗಾಂಧೀಜಿಯ ಪಾಲಿಗೆ ಕೆಡುಕು ಕೆಡುಕಾಗಿ ಇತ್ಯಾತ್ಮಕ ಅಸ್ತಿತ್ವ ಪಡೆದಿಲ್ಲ; ಆದ್ದರಿಂದ, ಅದೊಂದು ತಾತ್ಕಾಲಿಕ ಅವಸ್ಥೆ ಮತ್ತು ಬೆಳಕಿನ ಅಸ್ತಿತ್ವದಲ್ಲಿ ಕೇವಲ ತೋರುವ ಅಥವಾ ಸೂಚಿಸುವ ನಶ್ವರ ಛಾಯೆ. ಅವರ ಪಾಲಿಗೆ ಅದು, ಉಪಯುಕ್ತ ಉದ್ದೇಶವೊಂದರ ದಾರಿಯಲ್ಲಿ ತಾತ್ಕಾಲಿಕ ವಿಘ್ನ. ಅವರು ಹೇಳುತ್ತಾರೆ: ಕೇವಲ "ಪ್ರಾಣದ ಬೆಲೆಯನ್ನಾದರೂ ತೆತ್ತು ಕೆಡುಕಿನ ವಿರುದ್ಧ ಹೋರಾಡದಿದ್ದರೆ, ನಾನೆಂದೂ ದೇವರನ್ನು ಅರಿಯುವುದಿಲ್ಲ ಎಂಬುದನ್ನು ನಾನು ಬಲ್ಲೆ. ನನ್ನ ಸ್ವಂತ ವಿನಮ್ರ, ಪರಿಮಿತ ಅನುಭವ ನನ್ನ ನಂಬಿಕೆಯನ್ನು ಗಟ್ಟಿಗೊಳಿಸುತ್ತದೆ." ಹೀಗಾಗಿ, ಕೆಡುಕು ಮಾನವನ ಪರಿಮಿತಿಯ ಪ್ರತಿಬಿಂಬ ಮತ್ತು ದೇವರ ಅನಂತತೆಯ ಸಾಕ್ಷ್ಯ. ಪರಿಮಿತಿಯಿಂದ ಅನಂತತೆಗೆ, ಅಪರಿಪೂರ್ಣತೆಯಿಂದ ಪೂರ್ಣತೆಗೆ ನರನ ಯಾತ್ರೆ. ಹಾಗಿದ್ದೂ, ಪರಿಪೂರ್ಣತೆಯೊಂದು ಆದರ್ಶ, ಅದನ್ನು ದೇಹಸ್ಥ ಮಾನವಾತ್ಮಗಳು ಮುಟ್ಟಲಾರವು. ಏಕೆಂದರೆ, ಆತ್ಮದ ದೇಹಧಾರಣೆಯೊಂದು ಪರಿಮಿತಿ. ಗಾಂಧೀಜಿ ಕೇಳುತ್ತಾರೆ: "ತನ್ನ ಅಸ್ತಿತ್ವದ ಪರಿಮಿತಿಗಳನ್ನು ಯಾರು ತಾನೆ ಮೀರಬಲ್ಲರು? ಈ ದೇಹಸ್ಥ ಜೀವದಲ್ಲಿ ಸಂಪೂರ್ಣ ಸಾಕ್ಷಾತ್ಕಾರ ಅಸಾಧ್ಯವೆಂದು ನನ್ನ ಗ್ರಹಿಕೆ. "ಆದರೆ ಅವರು ಮನುಷ್ಯನಿಗೊಂದು ಆಶಾಹಸ್ತವನ್ನು ಚಾಚಿ, ಹೇಳುತ್ತಾರೆ: "(ಸಂಪೂರ್ಣ ಸಾಕ್ಷಾತ್ಕಾರ) ಅಗತ್ಯವೂ ಅಲ್ಲ. ಮಾನವಜೀವಿಗಳಿಗೆ ಸಾಧ್ಯವಾದ ಸಂಪೂರ್ಣ ಆಧ್ಯಾತ್ಮಿಕ ಉನ್ನತಿಯನ್ನು ತಲುಪುವುದಕ್ಕೆ ಬೇಕಾದುದೆಲ್ಲ ಜೀವಂತ ಅಚಲ ಶ್ರದ್ಧೆ. ದೇವರು ನಮ್ಮ ಐಹಿಕ ಕೋಶದ ಹೊರಗಿಲ್ಲ... ನಿರಂತರ ಸಂಗೀತ ನಮ್ಮೊಳಗೇ ಸಾಗುತ್ತಿರುತ್ತದೆ; ಆದರೆ ನಮ್ಮ ಇಂದ್ರಿಯಗಳಿಂದ ಗ್ರಹಿಸಬಹುದಾದ ಅಥವಾ ಆಲಿಸಬಹುದಾದ ಯಾವುದಕ್ಕಿಂತಲೂ ವಿಸದೃಶವಾದ ಮತ್ತು ಅನಂತವಾಗಿ ಉನ್ನತವಾದ ಸೂಕ್ಷ್ಮ ಸಂಗೀತವನ್ನು ಇಂದ್ರಿಯಗಳ ಅಬ್ಬರ ಮುಳುಗಿಸಿಬಿಡುತ್ತದೆ." ಇಂದ್ರಿಯಜೀವನವನ್ನು ಮತ್ತು ನಾವು ಆತ್ಮವೆಂದು ಕರೆಯತಕ್ಕದ್ದನ್ನು ಒಳಗೊಂಡಿರುವ ಭೌತಿಕ ಶರೀರವನ್ನು ಮೀರಿ ಮೇಲೇರುವುದು ಎಷ್ಟು ಕಷ್ಟವೆಂದು ಬಲ್ಲ ವಾಸ್ತವವಾದಿಯಾಗಿ ಗಾಂಧಿ ಇಲ್ಲಿ ಮಾತನಾಡುತ್ತಿದಾರೆ. ನಮ್ಮ ಪ್ರಜ್ಞೆ ಮತ್ತು ವೈಯಕ್ತಿಕ ಅಸ್ತಿತ್ವದ ನಿರಂತರ ಭಾವನೆಯೊಂದು ಭ್ರಮೆ. ಆದರೂ ಒಬ್ಬ ವ್ಯಕ್ತಿ ಸಾಧ್ಯವಾದಮಟ್ಟಿಗೆ ಭಗವತ್ ಸಾಕ್ಷಾತ್ಕಾರ ಮಾಡಿಕೊಂಡಾಗ, ಅವನ ಇಡೀ ವ್ಯಕ್ತಿತ್ವ ಬದಲಾಗುತ್ತದೆ ಮತ್ತು ಆ



ಬದಲಾವಣೆ ಅವನ ಸ್ವಭಾವ, ವರ್ತನೆಗಳಲ್ಲಿ ಪ್ರತಿಫಲಿತವಾಗುತ್ತದೆ ಎಂದು ಅವರು ಹೇಳುತ್ತಾರೆ. "ತಮ್ಮೊಳಗೆ ದೇವರ ಸಾನ್ನಿಧ್ಯವನ್ನು ಅನುಭವಿಸುವವರು ಪರಿವರ್ತನೆಗೊಳ್ಳುತ್ತಾರೆ. ಇಂಥ ಪ್ರಾಮಾಣ್ಯ ಎಲ್ಲ ಕಾಲ, ದೇಶಗಳ ಋಷಿ, ಪ್ರವಾದಿಗಳ ಅವಿಚ್ಛಿನ್ನ ಪಂಕ್ತಿಯಲ್ಲಿ ಕಂಡುಬರುತ್ತದೆ. ಈ ಸಾಕ್ಷ್ಯವನ್ನು ನಿರಾಕರಿಸುವುದೆಂದರೆ, ತನ್ನನ್ನೆ ನಿರಾಕರಿಸಿದಂತೆ" ಎನ್ನುತ್ತಾರೆ, ಅವರು.

ಸತ್ಯದ ವಿಷಯದಲ್ಲಿ ಹೇಗೊ ಹಾಗೆ, ಭಗವಂತನ ಅತೀತ ಮುಖಕ್ಕಿಂತ ಮಿಗಿಲಾಗಿ ಅಂತಸ್ಥ ಮುಖದ ಮೇಲೆ ಒತ್ತುಹಾಕಿದರು, ಗಾಂಧೀಜಿ. ಸ್ವತಂತ್ರ ಸತ್ಯ ಅಲ್ಲಿತ್ತು, ಅಮೂರ್ತ ತಥ್ಯದಷ್ಟೇ; ಎರಡರ ಅರ್ಥವೂ ಒಂದೇ; ಆದರೆ ಸ್ವತಂತ್ರ ಸತ್ಯದ ದಾರಿ ಕೂಡ ಅನುಭವಸತ್ಯದ, ದೈನಂದಿನ ಕ್ಷಣಕ್ಷಣದ, ಸತ್ಯದ ಮೂಲಕವೆ. ಅಂತೆಯೆ, ಲಕ್ಷಣಿಸಲಾಗದ, ಶಾಶ್ವತ ಅನಂತ ಅತೀತ ಶಕ್ತಿಯಾದ ಭಗವಂತನನ್ನು ಕೂಡ ನಮ್ಮ ಅನುಭವದ ಭಗವಂತನ– ಅಂತಸ್ಥ ಭಗವಂತನ– ಮೂಲಕ ಮಾತ್ರ ಮುಟ್ಟುವುದು ಸಾಧ್ಯ. ಅವರು ಹೇಳುತ್ತಾರೆ: "ನನ್ನ ಪಾಲಿಗೆ ದೇವರೆಂದರೆ ಸತ್ಯ ಮತ್ತು ಪ್ರೀತಿ; ದೇವರೆಂದರೆ ನೀತಿಶಾಸ್ತ್ರ ಮತ್ತು ನೈತಿಕತೆ; ದೇವರೆಂದರೆ ನಿರ್ಭಯ. ದೇವರು ಬೆಳಕಿನ ಮತ್ತು ಬದುಕಿನ ಆಕರ; ಆದರೂ ಅವನು ಇವೆಲ್ಲವನ್ನು ಮೀರಿದವನು. ದೇವರು ಅಂತಸ್ಸಾಕ್ಷಿ; ನಾಸ್ತಿಕನ ನಾಸ್ತಿಕತೆ ಕೂಡ... ಆತನ ವೈಯಕ್ತಿಕ ಉಪಸ್ಥಿತಿಯನ್ನು ಬಯಸುವವರಿಗೆ ಅವನು ವೈಯಕ್ತಿಕ ಭಗವಂತ. ತನ್ನ ಸ್ಪರ್ಶ ಬೇಕಾದವರಿಗೆ ಅವನು ಶರೀರಸ್ಥ. ಅವನು ಶುದ್ಧತಮ ಸಾರ. ಶ್ರದ್ಧೆಯುಳ್ಳವರ ಪಾಲಿಗೆ ಅವನು ಇದ್ದಾನೆ, ಅಷ್ಟೇ. ಅವನು ಎಲ್ಲರಿಗೆ ಎಲ್ಲವೂ... ಅವನು ಸಹನಾಯುತ ಮತ್ತು ಭಯಂಕರ ಕೂಡ. ಅವನು ಜಗತ್ತು ಬಲ್ಲ ಅತ್ಯುನ್ನತ ಪ್ರಜಾಪ್ರಭುತ್ವವಾದಿ; ಏಕೆಂದರೆ, ಒಳಿತು, ಕೆಡುಕುಗಳ ನಡುವೆ ನಮ್ಮ ಸ್ವಂತ ಆಯ್ಕೆಗೆ ನಮ್ಮನ್ನವನು 'ಶೃಂಖಲಾರಹಿತ'ರನ್ನಾಗಿ ಉಳಿಸುತ್ತಾನೆ. ಅವನು ಮಹಾ ನಿರಂಕುಶಾಧಿಕಾರಿ; ಏಕೆಂದರೆ, ನಮ್ಮ ತುಟಿಗಳಿಂದ ಬಟ್ಟಲನ್ನು ಅವನು ಕಿತ್ತುಕೊಳ್ಳುತ್ತಾನೆ ಮತ್ತು ಸ್ವತಂತ್ರ ಸಂಕಲ್ಪದ ಮುಸುಕಿನಲ್ಲಿ, ತನಗೇ ವಿನೋದವೊದಗಿಸುವುದಕ್ಕಾಗಿ ಎಷ್ಟು ಬೇಕೋ ಅಷ್ಟು ಮಾತ್ರ ಅಂಚನ್ನು ನಮಗೆ ಉಳಿಸುತ್ತಾನೆ... ಆದ್ದರಿಂದ ಹಿಂದೂ ಧರ್ಮ ಅದನ್ನೆಲ್ಲ ಅವನ ಲೀಲೆಯೆಂದು ಕರೆಯುತ್ತದೆ."

ದೇವರನ್ನು ಅಥವಾ ಸತ್ಯವನ್ನು ಅರಿತು ಸಾಕ್ಷಾತ್ಕರಿಸಿಕೊಳ್ಳಲು ಶ್ರದ್ಧಾಂಶ ಅಗತ್ಯವೆಂದು ಭಾವಿಸುತ್ತಾರೆ, ಗಾಂಧೀಜಿ. ಅವರು ಬರೆಯುತ್ತಾರೆ: "ಆದರೆ ಕೇವಲ ಬುದ್ಧಿಯನ್ನು ತಣಿಸುವ ದೇವರು ದೇವರಲ್ಲ, ಅವನು ಎಂದಾದರೂ ಹಾಗೆ ಮಾಡುವುದಾದರೆ, ದೇವರು ದೇವರಾಗಿರಬೇಕಾದರೆ, ಅವನ ಹೃದಯವನ್ನು ಆಳಿ ಪರಿವರ್ತಿಸಬೇಕು. ಅವನು ತನ್ನ ಭಕ್ತನ ಪ್ರತಿಯೊಂದು ಅತ್ಯಲ್ಪ ಕಾರ್ಯದಲ್ಲೂ ತನ್ನನ್ನು ಅಭಿವ್ಯಕ್ತಿಸಿಕೊಳ್ಳಬೇಕು." ಇದು ಬೌದ್ಧಿಕವಾಗಿ ಭಗವಂತನನ್ನು 'ತಿಳಿಯುವುದರಿಂದ'

ಮಾತ್ರ ಆಗಲಾರದು. ಅದು ಕೇವಲ 'ಮಾಹಿತಿ'ಯಾಗುತ್ತದೆ, 'ಸಾಕ್ಷಾತ್ಕಾರ'ವಲ್ಲ. ಗಾಂಧೀಜಿ ಘೋಷಿಸುತ್ತಾರೆ: ದೇವರಲ್ಲಿ "ನಂಬಿಕೆ ಬುದ್ಧಿ, ತರ್ಕಗಳನ್ನು ಮೀರಿದ ಶ್ರದ್ಧೆಯನ್ನು ಆಧರಿಸಿರಬೇಕು." ಅವರು ಮುಂದುವರಿದು ಹೇಳುತ್ತಾರೆ: "ಸಾಕ್ಷಾತ್ಕಾರ ಎಂಬುದು ಕೂಡ ಆಳದಲ್ಲಿ ಶ್ರದ್ಧಾಂಶವುಳ್ಳದ್ದಾಗಿರಬೇಕು; ಅದಿಲ್ಲದೆ ಇದಕ್ಕೆ ಪೋಷಣೆಯಿಲ್ಲ." ಗಾಂಧೀಜಿಯ ಪಾಲಿಗೆ ದೇವರು ಅಥವಾ ಸತ್ಯವೊಂದು ಸರ್ವವ್ಯಾಪಕ ಸಾನ್ನಿಧ್ಯ ಅಥವಾ ಅಸ್ತಿತ್ವ, ಅದರ ನಡುವೆಯೆ ಮನುಷ್ಯನ ಬದುಕು ಮತ್ತು ಸಮಸ್ತ ಚಟುವಟಿಕೆ ಎಂಬುದು ಇದೆಲ್ಲದರ ಅರ್ಥ. ಆದ್ದರಿಂದ, ರೈತ ಸಾಕ್ಷಾತ್ಕಾರವೆಂದರೆ, ಒಂದು ಕ್ಷಣದ ಲೋಪವೂ ಇಲ್ಲದಂತೆ ಮನುಷ್ಯನ ಸಮಗ್ರ ವ್ಯಕ್ತಿತ್ವ ಆ ಸಾನ್ನಿಧ್ಯದ ಅಖಂಡ, ಅಕುಂಠಿತ ಪ್ರಜ್ಞೆಯನ್ನು ತಳೆಯುವುದು. ಇದೊಂದು ಬಹು ಕಠಿಣವಾದ, ಅಷ್ಟೇಕೆ, ಬಹುತೇಕ ಅಸಾಧ್ಯವಾದ ಕಾರ್ಯ. ಆದರೆ ಆಧ್ಯಾತ್ಮಿಕ ಮತ್ತು ನೈತಿಕ ಉನ್ನತಿಯ ಅಭೀಪ್ಸೆಯುಳ್ಳವನು ಮುಟ್ಟಬೇಕಾದ ಒಂದೇ ಒಂದು ತಕ್ಕ ಗುರಿಯದು. ಅವನು ಸತತ ಜಾಗೃತನಾಗಿದ್ದು, ಏಕಕಾಲದಲ್ಲಿ ಕನಿಷ್ಠತಮ ಅಭಿವ್ಯಕ್ತಿಯ ಮತ್ತು ಅಭಿವ್ಯಕ್ತ ಶಕ್ತಿಯ, ಕ್ಷಣದ ಮತ್ತು ಅಂತೆಯೆ ಕ್ಷಣಗಳಾಗಿ ತನ್ನನ್ನು ವಿಭಜಿಸಿಕೊಂಡಿರುವ ಅನಂತತೆಯ, ಇಂದ್ರಿಯ ಜ್ಞಾನವುಳ್ಳ ವ್ಯಷ್ಟಿಜೀವಿಯ ಮತ್ತು ಇಡೀ ಸೃಷ್ಟಿಯನ್ನು ವ್ಯಾಪಿಸಿರುವ ವಿಶ್ವಾತ್ಮಕ ಅರಿವುಳ್ಳವನಾಗಿರಬೇಕು. ಈ ಅರ್ಥದಲ್ಲೇ ಗಾಂಧೀಜಿ ಹೇಳುವುದು: "ವಿಶ್ವವ್ಯಾಪಕ ನಿತ್ಯ ಚೈತನ್ಯವನ್ನು ಮುಖಾಮುಖಿಯಾಗಿ ಕಾಣಬೇಕಾದರೆ, ತನ್ನನ್ನೆಂತೊ ಅಂತೆ ಕನಿಷ್ಠತಮ ಸೃಷ್ಟಿಯನ್ನು ಪ್ರೀತಿಸಬಲ್ಲವನಾಗಬೇಕು. ಅಂಥ ಅಭೀಪ್ಸೆಯುಳ್ಳವನು (ರಾಜಕೀಯವೂ ಸೇರಿದಂತೆ) ಯಾವುದೇ ಜೀವನಕ್ಷೇತ್ರಕ್ಕೆ ಹೊರಗಾಗಲಾರ."

ಸತ್ಯವೇ ದೇವರೆಂಬ ನಂಬಿಕೆಯನ್ನು ಗಾಂಧೀಜಿ ತಳೆದುದು ಹೇಗೆಂಬುದನ್ನು ಗಮನಿಸುವುದು ಸ್ವಾರಸ್ಯಕರ. ಅವರೆನ್ನುತ್ತಾರೆ: "ಐವತ್ತು ವರ್ಷಗಳ ಹಿಂದೆ ಮೊದಲಾದ ಅವ್ಯಾಹತ ಅವಿಶ್ರಾಂತ ಹುಡುಕಾಟದ ಬಳಿಕ ನಾನು ಆ ತೀರ್ಮಾನಕ್ಕೆ ಬಂದೆ." ಪ್ರೀತಿ, ನಿಯಮ, ಶಕ್ತಿ, ಚೈತನ್ಯ ನಿಸ್ಸಂದೇಹವಾಗಿ ವಿವಿಧ ರೂಪಗಳಲ್ಲಿ ದೇವರೇ. ಆದರೆ ಈ ಶಬ್ದಗಳು ಆಗಾಗ ಬೇರೆಬೇರೆಯವರಿಗೆ ಬೇರೆ ಬೇರೆ ಅರ್ಥಗಳನ್ನು ಕೊಡುವುದು ಗಾಂಧೀಜಿಗೆ ಕಂಡುಬಂತು. ಅವರು ಹೇಳುತ್ತಾರೆ: "ಆದರೆ ಪ್ರೀತಿ (Love) ಶಬ್ದಕ್ಕೆ ಇಂಗ್ಲಿಷಿನಲ್ಲಿ ಅನೇಕಾರ್ಥಗಳಿರುವುದನ್ನೂ ನಾನು ಕಂಡೆ; ಕಾಮದ ಅರ್ಥದಲ್ಲಿ ಮಾನವ ಪ್ರೇಮ ಭ್ರಷ್ಟಗೊಳಿಸಬಲ್ಲುದು... ಆದರೆ ಸತ್ಯಕ್ಕೆ ಸಂಬಂಧಿಸಿದಂತೆ ದ್ವಂದ್ವಾರ್ಥ ನನಗೆಂದೂ ಕಾಣಲಿಲ್ಲ; ನಾಸ್ತಿಕರು ಕೂಡ ಸತ್ಯ ಶಕ್ತಿಯ ಅಗತ್ಯಕ್ಕೆ ಆಕ್ಷೇಪಣೆಯೆತ್ತಿಲ್ಲ... ಇರುವುದು ದೇವರೊಬ್ಬನೇ; (ದೇವರಲ್ಲಿ ವಿನಾ) ಮತ್ತಾವುದೂ ಅಸ್ತಿತ್ವದಲ್ಲಿಲ್ಲ. ವಾಸ್ತವವಾಗಿ, ಸತ್ಯಕ್ಕಿರುವ ಸಂಸ್ಕೃತ ಶಬ್ದ ಅಕ್ಷರಶಃ ಅಸ್ತಿತ್ವದಲ್ಲಿರತಕ್ಕುದು, ಸತ್ ಎಂಬ ಅರ್ಥ ಕೊಡುತ್ತದೆ. ಈ ಮಾತು, ಇತರ ಕಾರಣಗಳಿಗಾಗಿ, "ಸತ್ಯವೇ



ದೇವರು" ಎಂಬ ಲಕ್ಷಣೀಕರಣ ನನಗೆ ಅತ್ಯಂತ ತೃಪ್ತಿಕರ ಎಂಬ ನಿರ್ಧಾರಕ್ಕೆ ಬಂದಿದ್ದೇನೆ. ನೀವು ಸತ್ಯವನ್ನು ದೇವರಾಗಿ ಕಾಣಬಯಸಿದಾಗ, ಪ್ರೀತಿ ಅರ್ಥಾತ್ ಅಹಿಂಸೆಯೊಂದೆ ಅನಿವಾರ್ಯ ಸಾಧನ; ಅಂತಿಮವಾಗಿ ಸಾಧನ ಮತ್ತು ಧ್ಯೇಯ ವಿನಿಮಯ ಸಾಧ್ಯ ಶಬ್ದಗಳಾದುದರಿಂದ, ದೇವರೇ ಪ್ರೀತಿಯೆಂದು ಹೇಳಲು ನಾನು ಹಿಂಜರಿಯಕೂಡದು."

ಆದ್ದರಿಂದ ಪರಮ ಸನ್ನಿಧಿಯೊಂದೆ ಇರತಕ್ಕದ್ದು, ಉಳಿದುದೆಲ್ಲ ಆ ಸನ್ನಿಧಿಯಲ್ಲಿ ಅಸ್ತಿತ್ವದಲ್ಲಿರುವ ಅಭಿವ್ಯಕ್ತಿ ಮಾತ್ರ– ಇದು ಗಾಂಧೀಜಿಯ ತತ್ತ್ವದ ದರ್ಶನದ ಮೂಲಭೂತ ಸೂತ್ರವಾಗಿ ತೋರುತ್ತದೆ. ಉಪನಿಷತ್ತಿನ "ಈಶಾವಾಸ್ಯಂ ಇದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್" (ಅಸ್ತಿತ್ವದಲ್ಲಿರುವುದೆಲ್ಲ ಪ್ರಭುವಿನ ಆವಾಸ) ಎಂಬ ವಾಕ್ಯದೊಡನೆ ಇದು ಹೊಂದಿಕೊಳ್ಳುತ್ತದೆ. ಇದನ್ನು ಎರಡೂ ರೀತಿಗಳಲ್ಲಿ ಅಭಿವ್ಯಕ್ತಿಸಬಹುದು: ದೇವರು ಎಲ್ಲದರಲ್ಲೂ ಇದ್ದಾನೆ ಅಥವಾ ಎಲ್ಲವೂ ದೇವರಲ್ಲಿದೆ. ಗಾಂಧೀಜಿ ದೇವರನ್ನು ಒಂದು ಸನ್ನಿಧಿಯೆಂದು ಕರೆಯುತ್ತಾರೆ; ಏಕೆಂದರೆ, ದೇವರು ಶುದ್ಧ ಪ್ರಜ್ಞೆಯೆಂದು ಅವರು ಹೇಳುತ್ತಾರೆ. ಅದು ಕೇವಲ ದೈಹಿಕ ಅಥವಾ ಭೌತಿಕ ಅಸ್ತಿತ್ವವಲ್ಲ. ಅದರ ಸ್ವರೂಪ ಪ್ರಜ್ಞೆಯದು; ಬುದ್ಧಿಯದು. ಒಂದೆಡೆ ಗಾಂಧಿ ಹೇಳುತ್ತಾರೆ, ಸತ್–ಚಿತ್–ಆನಂದ ಎಂಬುದು ಪರಮಾತ್ಮನ ಸಾಕಷ್ಟು ಒಳ್ಳೆಯ ವರ್ಣನೆಯೆಂದು. ಜಗತ್ತು ಮತ್ತು ಜೀವ ಒಬ್ಬನೇ ಪರಮಾತ್ಮನ ಅಭಿವ್ಯಕ್ತಿ ಎಂಬುದು ಇದರಿಂದ ಹೊರಡುತ್ತದೆ. ಹೀಗಾಗಿ ಭಾರತದಲ್ಲಿ ದರ್ಶನವೆಂದು ಕರೆಯುತಕ್ಕದರ ಪರಿಭಾಷೆಯಲ್ಲಿರುವ ಗಾಂಧೀಜಿಯ ತತ್ತ್ವಜ್ಞಾನ. ಒಂದು ಬಗೆಯ ಏಕತತ್ತ್ವವಾದ: ಈಶ್ವರ ಸರ್ವಸ್ವ; ಅವನು ಪರಿಪೂರ್ಣ; ಸ್ವಯಮಸ್ತಿತ್ವವುಳ್ಳವನು; ಅತೀತ ಮತ್ತು ಅಂತಸ್ಥ. ಜಗತ್ತೆಲ್ಲ ಅವನ ಅಭಿವ್ಯಕ್ತಿ. ಜೀವ ಈಶ್ವರ ಪ್ರಜ್ಞೆಯ ಶಕ್ತಿಯ ವ್ಯಷ್ಟೀಕರಣ. ಗಾಂಧೀಜಿಯ ಪ್ರಯತ್ನ ಅವರ ಬದುಕಿನುದ್ದಕ್ಕೂ ಅಸ್ತಿತ್ವದ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳುವುದಾಗಿತ್ತು.

ಈ ಸತ್ಯವನ್ನು ಕುರಿತ ಅವರ ನಿಲುವು ಅವರ ಸಮಸ್ತ ವ್ಯಕ್ತಿತ್ವದ್ದಾಗಿತ್ತು; ಅದರಲ್ಲಿ ಹೃದಯಕ್ಕೆ ಪ್ರಾಧಾನ್ಯ. ಆದ್ದರಿಂದ ಅವರು ಮೂಲತಃ ಸತ್ಯಕ್ಕೆ, ದೇವರಿಗೆ ಸಂಪೂರ್ಣ ಸಮರ್ಪಣ ಅಥವಾ ಆತ್ಮನಿವೇದನದಲ್ಲಿ ನಂಬಿಕೆಯಿರಿಸಿದ್ದ ಭಕ್ತನಾಗಿದ್ದರು. ತಮ್ಮನ್ನು ಸೊನ್ನೆಗಿಳಿಸಿಕೊಳ್ಳುವುದರ ಬಗೆಗೆ ಅವರು ಆಗಾಗ ಮಾತನಾಡುತ್ತಿದ್ದುದು ಈ ಕಾರಣದಿಂದಲೆ. ಹೀಗಾಗಿ, ಭಗವಂತನ ಕೈಯಲ್ಲಿ ನಿಮಿತ್ತವಾಗಲು ಅವರು ಪ್ರಯತ್ನಿಸಿದರು. ಅವರ ಕರ್ಮಯೋಗ ಭಕ್ತಿಯಲ್ಲಿ ನೆಲೆಗೊಂಡಿತ್ತು; ಏಕೆಂದರೆ, ಬದುಕು ಬರಿಯ ಜ್ಞಾನವಲ್ಲ, ಧ್ಯಾನವಲ್ಲ, ಭಕ್ತಿಯಲ್ಲ, ಅಥವಾ ಯಾಂತ್ರಿಕ ಕ್ರಿಯೆಯೂ ಅಲ್ಲ ಎಂದು ಅವರು ನಂಬಿದ್ದರು. ಬದುಕು ಮುಖ್ಯವಾಗಿ ಸಂಕಲ್ಪ, ಭಾವ, ಆಲೋಚನೆ ಮತ್ತು ಕ್ರಿಯೆಯ ಮೂಲಕ ಪರಾಪ್ರಜ್ಞೆಯತ್ತ

ವಿಕಸಿಸುತ್ತಿರುವ ಪ್ರಜ್ಞೆ ಅಥವಾ ಆತ್ಮ. ಮನುಷ್ಯ ಪರಿಪೂರ್ಣತೆಯತ್ತ ಸಂಯೋಜಿತ ಮತ್ತು ಸಮಗ್ರ ರೀತಿಯಲ್ಲಿ ಕೆಲಸ ಮಾಡುತ್ತಿರುವ ಈ ಎಲ್ಲ ಶಕ್ತಿಗಳನ್ನುಳ್ಳ ಚೇತನ. ಆದ್ದರಿಂದ ಗಾಂಧೀಜಿಯವರು ಬದುಕಿನ ಬಗೆಗೆ ಸಮನ್ವಯ ದೃಷ್ಟಿಯಾಗಿತ್ತು; ಪ್ರತಿಯೊಂದು ಅಂಶದಲ್ಲೂ ಪರಿಪೂರ್ಣತೆ ಸಾಧಿಸುವುದು ಅವರ ಪರಮೋದ್ದೇಶವಾಗಿತ್ತು. ಆದರೂ ಅವರ ಒತ್ತು ವಿಶೇಷವಾಗಿ ಕರ್ಮದ ಮೇಲೆ ಎಂಬುದು ಸ್ಪಷ್ಟ. ಅವರ ತತ್ತ್ವದರ್ಶನವನ್ನು ವ್ಯಾವಹಾರಿಕ ಆದರ್ಶವಾದವೆಂದು ಪ್ರಸ್ತುತವಾಗಿ ಕರೆಯುವುದು ಈ ಕಾರಣದಿಂದಲೆ. ತಮ್ಮ ಸ್ವಂತ ತತ್ತ್ವದರ್ಶನಕ್ಕೆ ಅನುಸಾರವಾಗಿ ಗೀತೆಯನ್ನು ವ್ಯಾಖ್ಯಾನಿಸುವ ಅವರ ಪ್ರಯತ್ನ, ಅತ್ಯುನ್ನತ ಸ್ತರದ ತಾತ್ತ್ವಿಕ ಸಮಸ್ಯೆಗಳಿಗೆ ಅವರನ್ನು ಮುಖಾಮುಖಿಯಾಗಿಸಿತು. ಗೀತೆಯನ್ನು ಕುರಿತ ಅವರ ಪುಸ್ತಕವನ್ನು 'ಅನಾಸಕ್ತಿ ಯೋಗ'ವೆಂದು ಕರೆಯಲಾಗಿದೆ. ಭಕ್ತಿ ದೃಷ್ಟಿಯಿಂದ ಅದನ್ನು 'ಸಮರ್ಪಿತ ಕರ್ಮಯೋಗ'ವೆಂದೂ ಕರೆಯಬಹುದು. ಆದರೂ ಅಹಿಂಸೆಗೆ ಅವರು ಬಲವಾಗಿ ಅಂಟಿಕೊಂಡಿದ್ದರು; ಹಿಂಸೆಯ ಅನುಮತಿ ಪರಿಪೂರ್ಣ ಜೀವಿಗೆ ಮಾತ್ರ, ಭಗವಂತನೊಬ್ಬನೆ ಪರಿಪೂರ್ಣ ಎಂದು ಅವರು ಹೇಳಿದರು. ಗಾಂಧೀಜಿಯ ದೃಷ್ಟಿಯಲ್ಲಿ, ಪ್ರೀತಿ ಅಥವಾ ಅಹಿಂಸೆಯ ಮೂಲಕ ದೈನಂದಿನ ಜೀವನದಲ್ಲಿ ಸತ್ಯದ ಅಥವಾ ದೇವರ ಸಾಕ್ಷಾತ್ಕಾರ ಎಲ್ಲ ಆಧ್ಯಾತ್ಮ ಪ್ರಯತ್ನದ ಸಾರ ಮತ್ತು ಅರ್ಥವಾಗಿತ್ತು. ವಿಕಾಸಪರ ವಿಶ್ವಯೋಜನೆಯ ಅನುಷ್ಠಾನ, ಆ ಯೋಜನೆಯ ಹಾಗೂ ಯೋಜಕನ–ಪರಮಾತ್ಮನ– ಕೇವಲ ಬೌದ್ಧಿಕ ಜ್ಞಾನಕ್ಕಿಂತ ಬಹಳ ಮುಖ್ಯವಾಗಿತ್ತು. ಆದ್ದರಿಂದ ಅವರು ವಿನೀತರಾಗಿ ತಮ್ಮನ್ನು ಸಂಪೂರ್ಣವಾಗಿ ಭಗವಂತನ ಕೈಯಲ್ಲಿರಿಸಿಕೊಂಡರು ಮತ್ತು ಹೀಗಾಗಿ, ಮಾನವತೆಯಲ್ಲಿ ಅಂತಸ್ಥವಾಗಿರುವ ವಿಕಾಸಾತ್ಮಕ ಪ್ರೇರಣೆಯ ಮುಮ್ಮೊನೆಯಾಗಿದ್ದರು. ತಮ್ಮ ಗಾಢ ಅಧ್ಯಾತ್ಮಿಕ ಪ್ರಯತ್ನದ ದೀರ್ಘ, ಘಟನಾಪೂರ್ಣ ಬದುಕಿನ ಅವಧಿಯಲ್ಲಿ ಬಹುಪಾಲು ಅವಶ್ಯಕ ಶಕ್ತಿಯನ್ನು ಕೂಡಿಸಿಕೊಂಡರು ಮತ್ತು ಈಗ ಇತಿಹಾಸವಾಗಿರುವ ಸಂಗತಿಗಳನ್ನು ಸಾಧಿಸಿದರು.

ಗಾಂಧೀಜಿ ಯಾವಾಗಲೂ ಇಡೀ ಮನುಕುಲದ ದೃಷ್ಟಿಯಿಂದ ಆಲೋಚಿಸಿದರು. ಅವರು ಸ್ವತಃ ಅಳವಡಿಸಿಕೊಂಡ ತತ್ತ್ವದರ್ಶನ ಎಲ್ಲರಿಗೂ ಒಳಿತಾಗಿತ್ತು; ಏಕೆಂದರೆ, ಅದು ಇಡೀ ಮಾನವ ಸಮಾಜದ ವಿಕಾಸವನ್ನೆ ತನ್ನ ಗುರಿಯನ್ನಾಗಿ ಸ್ವೀಕರಿಸಿತ್ತು. ಅವರು ಹೇಳಿದರು: "ಮನುಷ್ಯನ ಅಂತಿಮಧ್ಯೇಯ ಭಗವತ್ ಸಾಕ್ಷಾತ್ಕಾರ; ಅವನೆಲ್ಲ ಚಟುವಟಿಕೆಗಳು– ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ– ಭಗವದ್ದರ್ಶನದ ಅಂತಿಮ ಧ್ಯೇಯದಿಂದ ಮಾರ್ಗದರ್ಶನಗೊಳ್ಳಬೇಕು." ಭಗವಂತನ ಜೀವಂತ, ಜಾಗೃತ ಪ್ರಜ್ಞೆಯಲ್ಲದೆ ಮತ್ತೇನಲ್ಲ. ಆ ಶ್ರದ್ಧೆಯನ್ನು ಸಂಪಾದಿಸಿದವನು ಏನನ್ನೂ ಬಯಸುವುದಿಲ್ಲ. ದೈಹಿಕವಾಗಿ ಅವನು



ಅಸ್ವಸ್ಥನಾಗಿದ್ದರೂ ಆಧ್ಯಾತ್ಮಿಕವಾಗಿ ಸ್ವಸ್ಥ; ಭೌತಿಕವಾಗಿ ಬಡವನಾಗಿದ್ದರೂ ಆಧ್ಯಾತ್ಮಿಕ ಸಂಪತ್ತಿನಲ್ಲಿ ಉರುಳಾಡುತ್ತಾನೆ:

ಶ್ರದ್ಧೆಗೂ ಸತ್ಯವನ್ನು ಕಂಡು ಅನುಷ್ಠಿಸುವ ನಮ್ಮ ಪ್ರಯತ್ನಕ್ಕೂ ಬಹಳ ಸಂಬಂಧವಿದೆ. ಆದರೆ ಸತ್ಯವನ್ನ ಪ್ರಮಾಣಿಸುವ ಉಪಕರಣ ಅಥವಾ ಶಕ್ತಿ ಯಾವುದು? ನಿರ್ದಿಷ್ಟ ಸಂಗತಿ ಅಥವಾ ಭಾವನೆ ಅಥವಾ ಪರಿಕಲ್ಪನೆ ದಿಟವಾದದ್ದು ಮತ್ತು ಅದು ಸತ್ಯ ಎಂದು ತಿಳಿಯುವುದು ಹೇಗೆ? ಗಾಂಧೀಜಿ ಉತ್ತರಿಸುತ್ತಾರೆ: "ಸತ್ಯವೆಂದರೇನು? ಕಠಿಣ ಪ್ರಶ್ನೆ. ಅದು ಅಂತರ್ವಾಣಿಯ ಹೇಳಿಕೆ ಎನ್ನುವುದರ ಮೂಲಕ ನಾನದನ್ನು ನನ್ನ ಮಟ್ಟಿಗೆ ಬಗೆಹರಿಸಿಕೊಂಡಿದ್ದೇನೆ. ಹಾಗಾದರೆ, ಬೇರೆ ಬೇರೆ ಮಂದಿ ವಿಭಿನ್ನ, ವಿರುದ್ಧ ಸತ್ಯಗಳ ಬಗೆಗೆ ಆಲೋಚಿಸುವುದು ಹೇಗೆ ಎಂದು ನೀವು ಕೇಳುತ್ತೀರಿ. ಒಳ್ಳೆಯದು. ಮಾನವ ಮನಸ್ಸು ಅಸಂಖ್ಯ ಮಾಧ್ಯಮಗಳ ಮೂಲಕ ಕೆಲಸ ಮಾಡುತ್ತದೆ ಮತ್ತು ಮನಸ್ಸಿನ ವಿಕಾಸ ಎಲ್ಲರಲ್ಲೂ ಒಂದೇ ಆಗಿರುವುದಿಲ್ಲ ಎಂಬುದನ್ನು ಅರಿತಾಗ, ಒಬ್ಬರಿಗೆ ಸತ್ಯವಾದದ್ದು ಮತ್ತೊಬ್ಬರಿಗೆ ಅಸತ್ಯವಾಗಬಹುದು ಎಂಬುದು ಸಿದ್ಧವಾಗುತ್ತದೆ; ಹಾಗಾಗಿ ಈ ಪ್ರಯೋಗಗಳನ್ನು ಮಾಡಿದವರು, ಅವುಗಳ ಬಗೆಗೆ ಕೆಲವು ವಿಧಿಗಳನ್ನು ಪಾಲಿಸಬೇಕು... ಬಹಳಷ್ಟು ವಿನಮ್ರತೆಯಿಲ್ಲದವರು ಯಾರೂ ಸತ್ಯವನ್ನು ಕಾಣಲಾರರು." ಸತ್ಯಾನ್ವೇಷಣೆಗೆ ಸಂಪೂರ್ಣ ವಸ್ತುನಿಷ್ಠತೆ ಮತ್ತು ವೈಯಕ್ತಿಕ ಅನಾಸಕ್ತಿ ಬೇಕು. ಇದರ ಅರ್ಥವೇನೆಂದರೆ, ವೈಜ್ಞಾನಿಕ ಮನೋಧರ್ಮದಿಂದ ಮಾತ್ರ ದೈನಂದಿನ ಜೀವನದ ಸತ್ಯವನ್ನು ಹಾಗೂ ಅನುಭವವನ್ನು ಅನ್ವೇಷಿಸಬೇಕು ಮತ್ತು ಪರೀಕ್ಷಿಸಬೇಕು ಎನ್ನುವುದು. ಗಾಂಧೀಜಿ ಒಮ್ಮೆ ಮತ್ತು ಆಗಾಗ ಹೇಳಿದ್ದಾರೆ: "ನಾನು ಅಹಿಂಸೆ ಮತ್ತು ಅದರ ಸಾಧ್ಯತೆಗಳನ್ನು ಐವತ್ತು ವರ್ಷಗಳಿಗೂ ಮಿಕ್ಕ ಅವಿಚ್ಛಿನ್ನ ಅವಧಿಯಲ್ಲಿ ವೈಜ್ಞಾನಿಕ ನಿಖರತೆ ಸಹಿತ ಅನುಷ್ಠಿಸಿದ್ದೇನೆ." ಸತ್ಯ ಶೋಧನೆಯ ಪ್ರಜ್ಞೆ ಸ್ವಾರ್ಥ, ಪೂರ್ವಗ್ರಹಗಳಿಗೆ ಅತೀತವಾಗಿರಬೇಕು, ವಿಚಾರಣೆಯ ಶುದ್ಧ ಮನೋಭಾವದಿಂದ ಕೂಡಿರಬೇಕು; ಅದು ಅಪ್ಪಟ ವಿಜ್ಞಾನಿಯ ಲಕ್ಷಣ." ಆದರೂ ಅವರೊಂದು ಎಚ್ಚರಿಕೆ ಕೊಡುತ್ತಾರೆ: "ತಮ್ಮ ಸ್ವಂತ ಸತ್ಯದೃಷ್ಟಿಗನುಸಾರವಾಗಿ ವರ್ತಿಸುವಂತೆ ಇತರರನ್ನು ಬಲಾತ್ಕರಿಸುವ ಹಕ್ಕು ಯಾರಿಗೂ ಇಲ್ಲ." ಹೀಗೂ ಹೇಳುತ್ತಾರೆ: "ಸತ್ಯದ ಲಕ್ಷಣೀಕರಣ ಪ್ರತಿಯೊಂದು ಹೃದಯದಲ್ಲೂ ನಿಕ್ಷಿಪ್ತವಾಗಿದೆ. ದಿಟವೆಂದು ಈ ಕ್ಷಣದಲ್ಲಿ ನೀವು ನಂಬತಕ್ಕದ್ದು ಸತ್ಯ; ಅದು ನಿಮ್ಮ ದೇವರು. ಒಬ್ಬ ವ್ಯಕ್ತಿ ಈ ಸಾಪೇಕ್ಷ ಸತ್ಯವನ್ನು ಪೂಜಿಸಿದರೆ, ನಿರಪೇಕ್ಷ ಸತ್ಯವನ್ನು, ಎಂದರೆ ಕಾಲಕ್ರಮದಲ್ಲಿ ದೇವರನ್ನು, ಅವನು ಖಂಡಿತ ಪಡೆಯುತ್ತಾನೆ.

ಗಾಂಧೀಜಿಯ ತತ್ತ್ವದರ್ಶನವನ್ನು ಬಹಳ ಸಂಕ್ಷಿಪ್ತವಾಗಿ ನಿರೂಪಿಸುವುದು ಕಷ್ಟ; ಅವರೇ ಹಾಗೆ ಮಾಡಲು ಎಂದೂ ಪ್ರಯತ್ನಿಸಲಿಲ್ಲ. ಅವರದು ಜೀವನ

ತತ್ತ್ವದರ್ಶನ, ಕರ್ಮತತ್ತ್ವದರ್ಶನ, ಧಾರ್ಮಿಕ ವ್ಯಕ್ತಿಯ ತತ್ತ್ವದರ್ಶನ, ಆಧ್ಯಾತ್ಮಿಕ ಪರಿಪೂರ್ಣತೆಯನ್ನು ಸಾಧಿಸುವಲ್ಲಿ ತೀವ್ರವಾಗಿ ಆಸಕ್ತನಾದ ವ್ಯಕ್ತಿಯ ತತ್ತ್ವದರ್ಶನ, ಅವರು ತಾತ್ತ್ವಿಕ ಸಮಸ್ಯೆಗಳ ಕ್ಷೇತ್ರದಲ್ಲಿ ಬೌದ್ಧಿಕ ಸಾಹಸಿಯಾಗಿ ಹೊರಡಲಿಲ್ಲ. ಅವರ ತತ್ತ್ವದರ್ಶನ ಪರಂಪರಾಗತ ಧಾರ್ಮಿಕ ಸತ್ಯಗಳ ಬೆಳಕಿನಲ್ಲಿ ಆಧ್ಯಾತ್ಮಿಕ ಪರಿಗ್ರಹಿಕೆಗಳ ಮತ್ತು ಅವರ ಸ್ವಂತ ಶ್ರದ್ಧಾನ್ವಿತ 'ಸತ್ಯ ಪ್ರಯೋಗ'ಗಳ ಫಲಿತಾಂಶ.

ಅವರು ತಥ್ಯ, ಇರುವಿಕೆ ಮತ್ತು ಆಗುವಿಕೆ, ಕೆಡುಕಿನ ಸಮಸ್ಯೆ ಇತ್ಯಾದಿಗಳ ಸ್ವರೂಪದ ಆಳವಾದ ಪರಿಶೀಲನೆಗೆ ಪ್ರಯತ್ನಿಸಿಲ್ಲ. ಈ ಹೇಳಿಕೆಯಿಂದ ಅವರು ತೃಪ್ತರಾಗಿದ್ದಾರೆ: "ಕೆಡುಕು ಏತಕ್ಕೆ ಅಸ್ತಿತ್ವದಲ್ಲಿದೆ, ಅದರ ಸ್ವರೂಪವೇನು ಎಂಬವು ನಮ್ಮ ಸೀಮಿತ ತರ್ಕವನ್ನು ಮೀರಿದಂತೆ ತೋರುವ ಪ್ರಶ್ನೆಗಳು." ಒಳ್ಳೆಯದು, ಕೆಟ್ಟದ್ದು ಎರಡೂ ಉಂಟು; ನಾವು ಒಳ್ಳೆಯದನ್ನು ಆರಿಸಿಕೊಂಡು, ಕೆಟ್ಟದ್ದನ್ನು ವರ್ಜಿಸಬಲ್ಲವರಾದರೆ, ತೃಪ್ತರಾಗಬೇಕು. ಅಧ್ಯಾತ್ಮ ಶಾಸ್ತ್ರೀಯ ಚಿಂತನಗಳ ಬಗೆಗೆ ಅವರಿಗೆ ಒಲವಿಲ್ಲ.

ಗಾಂಧೀಜಿ ಆಧ್ಯಾತ್ಮಿಕವಾಗಿ ಸ್ವ–ಪ್ರಜ್ಞೆಯುಳ್ಳವರಾದಾಗ, ತಮ್ಮ ಆತ್ಮ ತೃಪ್ತಿಯ ಹಸಿವನ್ನುಳ್ಳುದಾಗಿತ್ತೆಂದು ಅವರು ಕಂಡುಕೊಂಡರು. ಆದರೂ ಶುದ್ಧಿ, ಸ್ವಾತಂತ್ರ್ಯ, ಔನ್ನತ್ಯ, ಪರಿಪೂರ್ಣತೆಗಳಿಗಾಗಿ ಹಂಬಲಿಸುವ ಅವಿನಾಶಿ, ಜಂಗಮ ಆತ್ಮವೊಂದು ತಮ್ಮಲ್ಲಿರುವುದನ್ನು ಅವರು ಕಾಣಬಲ್ಲವರಾಗಿದ್ದರು. ಅವರ ಪಾಲಿಗೆ ಘರ್ಷಣೆ ಸುಸ್ಪಷ್ಟವಾಗಿತ್ತು. ಅವರು ಆಯ್ಕೆ ಮಾಡಿಕೊಳ್ಳಬೇಕಿತ್ತು. ಅಗತ್ಯ ಬಿದ್ದರೆ ದೇಹದ ಬೆಲೆ ತೆತ್ತು ಆತ್ಮದ ಹಸಿವನ್ನು ತಣಿಸಲು ಅವರು ಇಷ್ಟಪಟ್ಟರು. ಅದು ಅವರ ಜೀವನಗತಿಯನ್ನು ನಿರ್ಧರಿಸಿತು ಮತ್ತು ಅದನ್ನು ಶಾಂತಿ, ಶುದ್ಧ ಸಂತೋಷ ಹಾಗೂ ವಿಶಿಷ್ಟ ಸಾಧನೆಗಳಿಂದ ತುಂಬಿತು.

ಅವರು ವಸ್ತು, ಚೇತನಗಳತ್ತ, ಅದ್ಭುತ ವಿಶ್ವದತ್ತ ಹಾಗೂ ವಿಶ್ವ ಪ್ರಕ್ರಿಯೆಗಳತ್ತ ದೃಷ್ಟಿ ಹರಿಸಿದಂತೆ, ಕ್ರಮ ಹಾಗೂ ವ್ಯವಸ್ಥೆಯನ್ನು, ಕಾರಣಕಾರ್ಯಗಳನ್ನು ಕಂಡರು. ಅವರು ಹೇಳುತ್ತಾರೆ: "ಸೇಂದ್ರಿಯ ಜೀವಿಗಳ (ಹಾಗೂ ಭೌತ ದ್ರವ್ಯದ) ಈ ವಿಶ್ವವನ್ನು ಒಂದು ನಿಯತಿ ಆಳುತ್ತಿದೆಯೆಂಬುದರಲ್ಲಿ ಸಂಶಯವಿಲ್ಲ. ನೀವು ನಿಯತಿಯನ್ನು ಕುರಿತು, ಅದರ ದಾತೃವಿಲ್ಲದೆ ಆಲೋಚಿಸಬಲ್ಲಿರಾದರೆ, ನಿಯತಿಯೆ ನಿಯತಿದಾತೃ, ಎಂದರೆ ದೇವರು ಎಂದು ನಾನು ಹೇಳುತ್ತೇನೆ."

ಗಾಂಧೀಜಿಯ ದೈವಪರಿಕಲ್ಪನೆ ಬಹು ಸ್ಪಷ್ಟ ಅವರು ಹೇಳುತ್ತಾರೆ: "ದೇವರೊಬ್ಬ ವ್ಯಕ್ತಿಯಲ್ಲ... ಅವನೊಂದು ಶಕ್ತ. ಅವನು ಬದುಕಿನ ಸಾರ. ಅವನು ಶುದ್ಧ ಮತ್ತು ಅಕಲುಷಿತ ಪ್ರಜ್ಞೆ." ಅವನು ಏಕ, ಅನೇಕವಲ್ಲ. ಅವನು ಸರ್ವವ್ಯಾಪಿ. ಜೀವಂತ ಸಾನ್ನಿಧ್ಯ. ನಿಜ, ಸತ್ಯವೇ ದೇವರೆಂದು, ಅಂತೆಯೆ ಪ್ರೀತಿಯೆಂದು ಅಂತಿಮವಾಗಿ



ಗಾಂಧಿ ಹೇಳಿದರೆಂಬುದು ನಮಗೆ ಗೊತ್ತು. ಅವನು ಎಲ್ಲೆಡೆ ಇರುವಂತೆ ನಮ್ಮ ಹೃದಯಗಳಲ್ಲಿ ವಾಸಿಸುತ್ತಾನೆ. ದೇವರೂ ಸೇರಿದಂತೆ ಇತರ ಎಲ್ಲ ವಿಷಯಗಳನ್ನೂ ನಿರಾಕರಿಸುವುದು ಸಾಧ್ಯ; ನಿರಾಕರಿಸಲಾಗಿದೆ. ಆದರೆ ನಾಸ್ತಿಕನಾಗಲಿ ವಿಜ್ಞಾನಿಯಾಗಲಿ ಅತೀವ– ಭೌತವಾದಿಯಾಗಲಿ ಸತ್ಯವನ್ನು ನಿರಾಕರಿಸಿಲ್ಲ. ಸತ್ಯವನ್ನು ಅಲ್ಲಗಳೆಯುವುದಾದರೆ ಅಸ್ತಿತ್ವವನ್ನು ಅಲ್ಲಗಳೆದಂತೆ!

ಚೈತನ್ಯ ಒಂದು; ರೂಪಗಳು ಅನೇಕ. ಏಕ ಅನೇಕವಾಗಿ ಅಭಿವ್ಯಕ್ತಿಗೊಂಡಿರುವುದೇಕೆ ಎಂಬುದು ಅಧ್ಯಾತ್ಮ ಶಾಸ್ತ್ರೀಯ ಪ್ರಶ್ನೆ. ಆದರೂ ಗಾಂಧೀಜಿ ಹೇಳುತ್ತಾರೆ: "ಈ ಸಾರರೂಪಿ ಏಕತೆಯ ಸಾಕ್ಷಾತ್ಕಾರನೆ ಎಲ್ಲ ಧರ್ಮಗಳ ಅಂತಿಮ ಧ್ಯೇಯ."

ಗಾಂಧೀಜಿಯನ್ನು ಸರ್ವದಾ, ಸರ್ವತ್ರ ಸ್ಫೂರ್ತಿಸಿದ್ದು ಆಧ್ಯಾತ್ಮಿಕ ಏಕತೆಯ ಮತ್ತು ಪರಿಪೂರ್ಣತೆಯ ಸಾಕ್ಷಾತ್ಕಾರಕ್ಕಾಗಿ ಆಳವೂ ತೀವ್ರವೂ ಆದ ಆಧ್ಯಾತ್ಮಿಕ ಅಭೀಪ್ಸೆ. ಗಾಂಧೀಜಿಯ ಈ ದರ್ಶನ ತತ್ತ್ವಗಳಿಂದ ಅನೇಕ ಉಪಸಿದ್ಧಾಂತಗಳೂ ಅನುಮಿತಿಗಳೂ ಹೊರಡುತ್ತವೆ. ಕೆಲವು ಬಹಳ ಮಹತ್ವಪೂರ್ಣ; ಭಾರತೀಯ ಮತ್ತು ಜಾಗತಿಕ ಆಲೋಚನೆಯ ಮೇಲೆ ಶಾಶ್ವತ ಪ್ರಭಾವ ಬೀರಬಹುದಾದವು ಅವೇ.

### ೩. ಗಾಂಧೀಜಿಯ ತತ್ತ್ವದರ್ಶನ: ಭಾರತೀಯ ಮತ್ತು ಜಗತಿಕ ಆಲೋಚನೆಯ ಮೇಲೆ ಅದರ ಪ್ರಭಾವ

ಭಾರತದ ಮೇಲೆಂತೊ ಅಂತೆ ಜಗತ್ತಿನ ಮೇಲೆ ಗಾಂಧೀಜಿಯ ಬದುಕು, ಆಲೋಚನೆ, ಕಾರ್ಯಗಳ ಪ್ರಭಾವವನ್ನು ಇಂದು ಪೂರ್ಣವಾಗಿ ಅಥವಾ ಸುಲಭವಾಗಿ ಬೆಲೆಗಟ್ಟುವುದು ಸಾಧ್ಯವಿಲ್ಲ. ಏಕೆಂದರೆ ಅವರು ಬದುಕಿ ಕ್ರಿಯಾಶೀಲವಾಗಿದ್ದ ಯುಗಕ್ಕೆ ನಾವು ತೀರ ಹತ್ತಿರದಲ್ಲಿದ್ದೇವೆ ಎಂಬ ಹೇಳಿಕೆಯಿಂದ ನಾನು ಮೊದಲು ಮಾಡುತ್ತೇನೆ. ಅವರ ತತ್ತ್ವದರ್ಶನವನ್ನು ಅವರ ಒಟ್ಟು ಆಲೋಚನೆ, ಕ್ರಿಯೆಗಳಿಂದ ಪ್ರತ್ಯೇಕಿಸಿ, ವಿವಿಕ್ತವಾಗಿ ವಿಚಾರ ಮಾಡುವುದು ಅಶಕ್ಯವಾದ್ದರಿಂದ, ಅದರ ಪ್ರಭಾವವನ್ನು ಕುರಿತು ಖಚಿತವಾಗಿ ಏನನ್ನಾದರೂ ಹೇಳುವುದು ಮತ್ತಷ್ಟು ಕಷ್ಟ. ಅವರಲ್ಲಿ ತತ್ತ್ವದರ್ಶನ ಮತ್ತು ನಾನಾ ಸಂದರ್ಭಗಳಲ್ಲಿ ಅವರು ನಿರೂಪಿಸಿದ ದರ್ಶನ ತತ್ತ್ವಗಳು, ಅವರು ಬೋಧಿಸಿದ ಮತ್ತು ಬದುಕಿನಲ್ಲಿ ವಾಸ್ತವವಾಗಿ ಅನುಸರಿಸಿದ ನೈತಿಕ ತತ್ತ್ವಗಳಿಗೆ ಸಂಗತವಾಗಿವೆ. ಅವರು ಸತತ ಬೆಳೆಸಿಕೊಂಡ ನಡೆವಳಿಕೆಯ ನೀತಿಸಂಹಿತೆಯು ಅವರು ತಳೆದ ನಂಬಿಕೆಗಳ ಮತ್ತು ರೂಪಿಸಿಕೊಂಡ ಜೀವನದರ್ಶನದ ಅಭಿವ್ಯಕ್ತಿಯಾಗಿತ್ತೆಂಬುದು ಸ್ಪಷ್ಟ. ಈ ಪ್ರಕ್ರಿಯೆಯನ್ನು ಆಚಾರ್ಯ ಜೆ.ಬಿ. ಕೃಪಲಾನಿ ತಮ್ಮ 'ಗಾಂಧಿಮಾರ್ಗ'ದಲ್ಲಿ ಬಹಳ ಚೆನ್ನಾಗಿ ಬಣ್ಣಿಸಿದ್ದಾರೆ:

"ಗಾಂಧೀಜಿ ಸಾಮಾನ್ಯವಾಗಿ ಸಮಸ್ಯೆಗಳನ್ನು, ಅವು ಹುಟ್ಟಿದಂತೆಯೆ, ನೈತಿಕತೆಯ ತಮ್ಮ ಮೂಲತತ್ತ್ವಗಳಿಗೆ, ತಮ್ಮ ಜನತೆಯ ಮನೋಧರ್ಮಕ್ಕೆ, ಅವರ ಚಾರಿತ್ರಿಕ ಹಿನ್ನೆಲೆಗೆ ಮತ್ತು ದೇಶದಲ್ಲಿದ್ದ ಸನ್ನಿವೇಶಗಳಿಗೆ ಹೊಂದಿಕೊಳ್ಳುವಂತೆ ಪರಿಹರಿಸಲು ಪ್ರಯತ್ನಿಸುತ್ತಿದ್ದರು. ೧೯೧೫ರ ಆರಂಭದಲ್ಲಿ ಅವರು ಭಾರತಕ್ಕೆ ಮರಳಿದಾಗ, ದೇಶದ ರಾಜಕೀಯ ಬದುಕಿನಲ್ಲಿ ತಾವು ವಹಿಸಲಿರುವ ಪಾತ್ರದ ಕಲ್ಪನೆ ಅವರಿಗಿರಲಿಲ್ಲ. ತಮ್ಮದೇ ಮಾರ್ಗದ ಪ್ರಜ್ಞೆ ಅವರಿಗಿತ್ತು. ವಿಶ್ವ ಕಾರ್ಯವೊಂದು ತಮ್ಮ ಪಾಲಿಗಿದೆ ಎಂಬ ಭಾವನೆ ಅವರಿಗೆ ನಿಧಾನವಾಗಿ, ಬಹಳ ತಡವಾಗಿ ಹೊಳೆಯಿತು. ಸಮಸ್ಯೆಗಳು ಉದ್ಭವಿಸಿದಂತೆ ಅವುಗಳನ್ನು ಎದುರಿಸುತ್ತಿದ್ದ ಗಾಂಧೀಜಿ, ಅವುಗಳ ಪರಿಹಾರಕ್ಕೆ ಬಿಗಿಯಾದ ವ್ಯವಸ್ಥೆಯನ್ನೇನೂ ರೂಪಿಸಿಕೊಂಡಿರಲಿಲ್ಲ. ಸಮಸ್ಯೆಗಳನ್ನು ಪರಿಹರಿಸಬಯಸಿದ ವಿಧಾನದಿಂದ ಯಾವುದೋ ಒರಟು ವ್ಯವಸ್ಥೆ ರೂಪುಗೊಳ್ಳುತ್ತಿತ್ತು. ಅನುಷ್ಠಾನದಿಂದ ಹುಟ್ಟಿ ಬೆಳೆಸುತ್ತಿತ್ತು, ವಿನ್ಯಾಸ. ಹಾಗಿದ್ದೂ ಅದು ಬಿಗಿಯಾಗಿರಲಿಲ್ಲ; ಅಥವಾ ಬೌದ್ಧಿಕವಾಗಿ, ತಾರ್ಕಿಕವಾಗಿ ಒಂದು ವ್ಯವಸ್ಥೆಯ ರೂಪ ತಳೆಯುತ್ತಿರಲಿಲ್ಲ. ಗಾಂಧೀಜಿಯ ವಿವಿಧ ಸತ್ಯಾಗ್ರಹ ಚಳವಳಿಗಳಲ್ಲಿ, ಅವುಗಳ ಹಿಂದಿನ ಮೂಲಭೂತ ತತ್ತ್ವಗಳು ಒಂದೇ ಆಗಿದ್ದರೂ ಹೋರಾಟದ ರೀತಿ ಒಂದೇ ಆಗಿರಲಿಲ್ಲ. ಇದು ಗಾಂಧೀಜಿಯ ವ್ಯಕ್ತಿತ್ವದ ಮತ್ತು ವೈಯಕ್ತಿಕ ಹಾಗೂ ಸಾಮಾಜಿಕ ಜೀವನದರ್ಶನದ ನಿರಂತರ ವಿಕಾಸದ ರಹಸ್ಯವೆಂದು ನನ್ನ ಅನಿಸಿಕೆ. ತಾವು ಸತ್ಯಸಂಬಂಧವಾದ ಪ್ರಯೋಗಗಳನ್ನು ಮಾಡುತ್ತಿರುವುದಾಗಿ ಅವರು ಯಾವಾಗಲೂ ಭಾವಿಸುತ್ತಿದ್ದರು. ತಮ್ಮ ಆತ್ಮಕಥೆಯನ್ನು ಅವರು 'ಸತ್ಯದೊಡನೆ ನನ್ನ ಪ್ರಯೋಗಗಳ ಕಥೆ' ಎಂದು ಅರ್ಥವತ್ತಾಗಿ ಕರೆದರು.

ಈ ದೃಷ್ಟಿಯಿಂದ ಗಾಂಧೀಜಿಯ ತತ್ತ್ವದರ್ಶನದ ಪ್ರಭಾವ ಒಟ್ಟು ಪ್ರಭಾವದೊಡನೆ ಮತ್ತು ಅವರು ಪ್ರತಿನಿಧಿಸತಕ್ಕದ್ದರೊಡನೆ, ಬಿಡಿಸಲಾಗದಂತೆ ಸಂಬದ್ಧವಾಗಿದೆಯೆಂಬುದನ್ನು ಅರಿತುಕೊಳ್ಳುವುದು ಅಗತ್ಯ. ಅಥವಾ, ನಮ್ಮನ್ನು ಪ್ರಭಾವಿಸುತ್ತಿರುವುದು ಅಷ್ಟಾಗಿ ಅವರ ತತ್ತ್ವದರ್ಶನ ಮಾತ್ರವಲ್ಲ, ಆದರೆ ಬದುಕು, ಕಾರ್ಯಗಳ ಬಗೆಗೆ ಗಾಂಧಿ ನಿಲುವಿನ ವಿಧಾನ ಎಂದೂ ಹೇಳಬಹುದು. ಆದ್ದರಿಂದ, ತತ್ತ್ವದರ್ಶಿಯಾಗಿ ಗಾಂಧೀಜಿಯ ಪಾತ್ರದ ಅರ್ಥಪೂರ್ಣತೆಯಿರುವುದು ಅಷ್ಟಾಗಿ ಅವರ ತತ್ತ್ವದರ್ಶನದಲ್ಲಿಲ್ಲ; ತಮ್ಮ ತತ್ತ್ವದರ್ಶನದ ಬೆಳಕಿನಲ್ಲಿ ಅವರು ಬದುಕಿದ, ನಡೆದುಕೊಂಡ ಮತ್ತು ಜೀವಂತ ಸಮಸ್ಯೆಗಳನ್ನು ಎದುರಿಸಿದ ರೀತಿಯಲ್ಲಿ. ಹೀಗಾಗಿ, ಅವರು ಬೌದ್ಧಿಕ ತತ್ತ್ವಜ್ಞಾನಿಗಳ ಮಾಮೂಲು ತಾರ್ಕಿಕ ರೀತಿಯಲ್ಲಿ ತಮ್ಮ ತತ್ತ್ವಗಳನ್ನು ಕೇವಲ ನಿರೂಪಿಸಿದ್ದರೆ ಮತ್ತು ಅವುಗಳ ಬಗೆಗೆ ವಾದಿಸಿದ್ದರೆ ಪಡೆದುಕೊಳ್ಳುತ್ತಿದ್ದುದಕ್ಕಿಂತ ಬಹಳ ಹೆಚ್ಚಿನ ಪ್ರಾಮುಖ್ಯವನ್ನು ಅವರ ತತ್ತ್ವದರ್ಶನ ಪಡೆದುಕೊಂಡಿದೆ.



ಇದಕ್ಕೆ ಮುಖ್ಯ ಕಾರಣವೇನೆಂದರೆ, ತಾವು ಪ್ರತಿನಿಧಿಸಿದ ತತ್ತ್ವದರ್ಶನ, ನೀತಿ ಸಂಹಿತೆಗಳನ್ನು ಅವರು ವಾಸ್ತವ ಜೀವನದಲ್ಲಿ ಪ್ರದರ್ಶಿಸಿದರು. ಇದು ಮತ್ತು ಇತರ ಕೆಲವು ಸಂಗತಿಗಳು, ಅವರ ತತ್ತ್ವದರ್ಶನವನ್ನು ರೂಪಿಸಿರುವ ಆಲೋಚನಾ ವ್ಯವಸ್ಥೆಯ ವಾಸ್ತವ ಪ್ರಭಾವಕ್ಕೆ ಸೇರ್ಪಡೆಗಳಾಗಿವೆ.

ಕೇವಲ ಅಮೂರ್ತ ತಥ್ಯವಲ್ಲ, ಸತ್ಯ–ಅನುಭವದ ದಿನದಿನದ ಸತ್ಯ ತಮ್ಮ ದೇವರು ಎಂದು ಘೋಷಿಸಿ, ಗಾಂಧೀಜಿ ತಮ್ಮ ತತ್ತ್ವದರ್ಶನವನ್ನು ಸಾರ್ವತ್ರೀಕರಿಸಿದರು. ಏಕೆಂದರೆ, ಯಾರೂ– ನಾಸ್ತಿಕನೂ ಅಲ್ಲ, ವಿಜ್ಞಾನಿ ಖಂಡಿತ ಅಲ್ಲ– ತಮ್ಮ ಸ್ವಂತ ಅನುಭವವನ್ನು ನಿರಾಕರಿಸಲಾರರು. ವಿಜ್ಞಾನಿಯ ಪಾಲಿಗೆ ಅನುಭವಗಮ್ಯವಾದ ಮತ್ತು ಜ್ಞಾನಪರಿಕರಗಳಿಂದ ಪರೀಕ್ಷಿತವಾದ ಈ ಬಗೆಯ ಸತ್ಯ ನಿಜವಾಗಿಯೂ ದೇವರು; ನಿಯತಿ. ಈ ಅರ್ಥದಲ್ಲೇ ಸತ್ಯದ ಬಗೆಗಿನ ಗಾಂಧೀಜಿಯ ನಿಲುವು ಯಾವಾಗಲೂ ಅತ್ಯಂತ ವೈಜ್ಞಾನಿಕವಾಗಿತ್ತು. ಸತ್ಯವನ್ನು ಕಾಣುವುದರಲ್ಲಿ ಮತ್ತು ಅದಕ್ಕನುಗುಣವಾಗಿ ನಡೆದುಕೊಳ್ಳುವುದರಲ್ಲಿ ಗಾಂಧೀಜಿ ಅತ್ಯಂತ ಎಚ್ಚರಿಕೆಯಿಂದಿರುತ್ತಿದ್ದರು. ಆದ್ದರಿಂದಲೇ ಅವರು ಬದುಕಿನ ಸಮಸ್ಯೆಗಳನ್ನು ಅವುಗಳ ಪರಿಹಾರಗಳಲ್ಲಿ ವೈಜ್ಞಾನಿಕ ವಿಧಾನದಲ್ಲಿ ಸಮ್ಮತಿಸಿದರು. ಅವರ ವೈಜ್ಞಾನಿಕ ಮನೋಧರ್ಮದ ಸಾರವೆಂದರೆ, ಸತ್ಯವನ್ನು ಹುಡುಕುವ, ಮನಸ್ಸನ್ನು ಯಾವಾಗಲೂ ತೆರೆದಿಟ್ಟುಕೊಂಡು ಹುಡುಕುವ, ಪ್ರಯೋಗಗಳ ಮೂಲಕ ಹುಡುಕುವ ಮತ್ತು ಅಂತಿಮವಾಗಿ ಅದನ್ನು ಬದುಕಿಗೆ ಅನ್ವಯಿಸಿ ಹುಡುಕುವ ಶ್ರದ್ಧೆ. ಒಮ್ಮೆ ಅವರು ಸತ್ಯವನ್ನು ಕಂಡು, ಅದು ಸತ್ಯವೆಂದು ಸಂತೃಪ್ತರಾದರೆ, ಅದನ್ನು ನಿರ್ಭಯವಾಗಿ ಘೋಷಿಸುತ್ತಿದ್ದರು ಮತ್ತು ಅದು ನಿರ್ದೇಶಿಸಿದ ಪಥವನ್ನು ನಿಶ್ಚಲ ಧೈರ್ಯದಿಂದ ಅನುಸರಿಸುತ್ತಿದ್ದರು. ಸತ್ಯಸ್ಥಾಪನೆಯ ಏಕೈಕ ಮಾರ್ಗವೆಂದರೆ, ವ್ಯಕ್ತಿ ಅದನ್ನು ಸ್ವತಃ ಪ್ರಾಣ ತೆತ್ತಾದರೂ ಅನುಸರಿಸುವುದು; ಯಾವುದೇ ಬಗೆಯ ಬಲಾತ್ಕಾರದಿಂದ ಅದನ್ನು ಇತರರ ಮೇಲೆ ಹೊರಿಸತಕ್ಕದ್ದಲ್ಲ. ಹೀಗಾಗಿ, ಅವರ ತತ್ತ್ವದರ್ಶನದಲ್ಲಿ ಸತ್ಯ ಮತ್ತು ಅಹಿಂಸೆ, ಒಂದೇ ನಾಣ್ಯದ ಎರಡು ಮುಖಗಳೆನಿಸುವಷ್ಟರಮಟ್ಟಿಗೆ ಸಾಹಚರ್ಯಗೊಂಡಿದ್ದುವು. ಅವರ ಅಹಿಂಸೆ ತ್ರಿಕರಣಗಳಲ್ಲಿ ಅಖಂಡವಾಗಿತ್ತು ಮಾತ್ರವಲ್ಲ, ಇತ್ಯಾತ್ಮಕವೂ ಆಕ್ರಮಣಕಾರಿಯೂ ಆಗಿತ್ತು. ಹಿಂಸಾವಿಮುಖತೆ ಅಥವಾ ಯಾವುದೇ ಜೀವಿಗೆ ಯಾವುದೇ ಬಗೆಯ ದೈಹಿಕ, ಮಾನಸಿಕ ಅಥವಾ ಆಧ್ಯಾತ್ಮಿಕ– ಹಾನಿಮಾಡದಿರುವಿಕೆ, ನೇತ್ಯಾತ್ಮಕ ಗುಣವೆಂದು ಹೇಳಬಹುದು. ಆದರೂ ಅವರು ಸರ್ವಸೃಷ್ಟಿಯ ಪ್ರೀತಿಯನ್ನೂ, ಆಕ್ರಮಣಕಾರಿ ಪ್ರೀತಿಯನ್ನೂ ಪ್ರತಿಪಾದಿಸಿದರು; ಎಲ್ಲರಿಗೂ ಸೇವೆ ಸಲ್ಲಿಸುವ ಮತ್ತು ಇತರರ ಸೇವೆಯಲ್ಲಿ ಆತ್ಮತ್ಯಾಗವನ್ನೂ ಮಾಡುವ ಅದಮ್ಯ, ಸತತ ಪ್ರೇರಣೆಯೆಂಬುದು ಅದರ ಅರ್ಥ. ಸತ್ಯ ಅತೀತ ಮತ್ತು ಆಂತರಿಕವಾದುದು, ಸತ್ಯ ಸನ್ನಿಧಿ ಅಸ್ತಿತ್ವದಲ್ಲಿರುವ ಎಲ್ಲವನ್ನೂ ತುಂಬಿದೆ ಎಂಬ

ಅವರ ತತ್ತ್ವದರ್ಶನದಿಂದ ಇದು ಹೊಮ್ಮಿತು. ಹೀಗಾಗಿ, ಅವರು ತಮ್ಮ ಸಂಪರ್ಕಕ್ಕೆ ಬಂದ ಎಲ್ಲದರಲ್ಲೂ, ಎಲ್ಲರಲ್ಲೂ ಸತ್ಯ ಅಥವಾ ದೇವರನ್ನು ಕಂಡರು; ಇಂತಹ ವ್ಯಕ್ತಿ ಎಲ್ಲರೊಡನೆ ಹಿತಾಸಕ್ತಿಯ ಏಕತೆಯನ್ನು ಅನುಭವಿಸುವುದಲ್ಲದೆ ಮತ್ತು ಅಗತ್ಯ ಬಿದ್ದರೆ ಜೀವ ತೆತ್ತಾದರೂ ಆ ಹಿತವನ್ನು ಸಾಧಿಸುವುದಲ್ಲದೆ ಮತ್ತೇನು ತಾನೆ ಮಾಡಬಹುದಿತ್ತು?

ಈ ನಿಲುವು ಸಮಸ್ತ ಸೃಷ್ಟಿಗೆ, ಅದರಲ್ಲೂ ಮನುಕುಲಕ್ಕೆ ಸೇವೆ ಸಲ್ಲಿಸುವ ತುರ್ತನ್ನು ಅವರ ಇಡೀ ಜೀವನಕ್ಕೆ ಒದಗಿಸಿತು. ಕೆಡುಕು, ಅನ್ಯಾಯ ಕಂಡಲ್ಲಿ ಅದರ ವಿರುದ್ಧ ಹೋರಾಡುವುದು ತಮ್ಮ ವೈಯಕ್ತಿಕ ಜವಾಬ್ದಾರಿ ಎಂದು ಅವರು ಭಾವಿಸಿದರು. ಅದು ಅವರ ಆಕ್ರಮಣಕಾರಿ ಪ್ರೀತಿಯ ರೀತಿ. ಒಳಿತು, ಸದ್ಗುಣ, ಸತ್ಯಗಳ ಆಯುಧಗಳೊಡನೆ ಎಲ್ಲ ಕೆಡಕುಗಳ ವಿರುದ್ಧ ಹೋರಾಡಲು ಬೇಕಾದ ಪರಿಣಾಮಕಾರಿ, ಚುರುಕು ಕ್ರಿಯೆಯ ಉತ್ಸಾಹವನ್ನು ಈ ತುರ್ತು ಅಥವಾ ಉತ್ಕಟತೆ ಅವರಲ್ಲಿ ತುಂಬಿತು. ಒಳ್ಳೆಯ ಗುರಿಗಳನ್ನು ಸಾಧಿಸುವುದಕ್ಕೆ ಕೂಡ ಕೆಟ್ಟ ವಿಧಾನಗಳಿಗೆ ಅವರ ತತ್ತ್ವದರ್ಶನದಲ್ಲಿ ಸ್ಥಾನವಿರಲಿಲ್ಲ. ಬಹುದೊಡ್ಡ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಕೆಡುಕುಗಳ ವಿರುದ್ಧ ಹೋರಾಡುವ ಉದ್ದೇಶಕ್ಕಾಗಿ ಸಂಘಟನೆ, ಶಿಸ್ತುಗಳ ಅಸಾಧಾರಣ ಸಾಮರ್ಥ್ಯವನ್ನುಳ್ಳ ಕ್ರಿಯಾಶಾಲಿ ವ್ಯಕ್ತಿಯಾಗಿ ಅವರು ಬೆಳೆದರು. ಅವರ ಧ್ಯೇಯ ಕೇವಲ ವ್ಯಷ್ಟಿ ಉದ್ಧಾರ ಅಥವಾ ವೈಯಕ್ತಿಕ ಗುಣಗಳ ಬೆಳವಣಿಗೆಯಾಗಿರಲಿಲ್ಲ; ಯಾವುದೇ ಬಗೆಯ ಹಿಂಸೆಯಿಂದ ಮುಕ್ತವಾದ ಸಮಾಜವೊಂದನ್ನು ರೂಪಿಸುವುದಾಗಿತ್ತು. ಇಂಥ ಸಮಾಜ ಮಾತ್ರವೇ ಯಾವುದೇ ಭೇದ ಅಥವಾ ಪಕ್ಷಪಾತವಿಲ್ಲದೆ, ಎಲ್ಲರಿಗೂ ಶಾಂತಿ, ಅಭ್ಯುದಯ ಸುಖಗಳ ನ್ಯಾಯಬದ್ಧ ಗುರಿಗಳಲ್ಲಿ ಅನ್ವೇಷಿಸಬಲ್ಲುದು.

ಗಾಂಧೀಜಿಯ ತತ್ತ್ವದರ್ಶನದ ಪ್ರಭಾವದ ಬಗೆಗೆ ನಾವು ಆಲೋಚಿಸುವಾಗ, ಇನ್ನೂ ಎರಡು ಅಥವಾ ಮೂರು ಸಂಗತಿಗಳು ಪರಿಗಣನ ಯೋಗ್ಯ. ಬದುಕಿನ ಸತ್ಯವನ್ನು ಕುರಿತ ಅವರ ನಿಲುವು ವೈಜ್ಞಾನಿಕವಾಗಿದ್ದಂತೆಯೆ, ಮಾನವನ ವಿಕಾಸ ಮತ್ತು ಅವನ ಪ್ರಗತಿಯ ಚಾರಿತ್ರಿಕ ಪರಿಪ್ರೇಕ್ಷ್ಯಕ್ಕೆ ಹೊಂದಿಕೊಂಡಿತ್ತು. ಎಲ್ಲ ಜೀವಿಗಳಲ್ಲಿ ಮಾನವನಿಗೆ ಮಾತ್ರ ಆತ್ಮಶೋಧನೆ. ಆತ್ಮವಿಮರ್ಶೆಗಳ ಮತ್ತು ತತ್ಕಾರಣದಿಂದ ಸ್ವಪ್ರಯತ್ನದ ಮೂಲಕ ಪ್ರಗತಿಯ ಹಕ್ಕು ಸೌಲಭ್ಯಗಳಿರತಕ್ಕದ್ದು. ಮನುಷ್ಯ ಜೈವಿಕ ವಿಕಸದ ಉತ್ಪನ್ನವೆಂಬುದರಲ್ಲಿ ಸಂದೇಹವಿಲ್ಲ. ಆದರೆ ಒಮ್ಮೆ ಅವನು ನೇರ ಬೆನ್ನೆಲುಬು ಹಾಗೂ ದೊಡ್ಡ ಮೆದುಳಿನ ಸಹಿತ ಎರಡು ಕಾಲುಗಳ ಮೇಲೆ ಎದ್ದುನಿಂತ ಬಳಿಕ, ಯುಗ ಯುಗಗಳುದ್ದಕ್ಕೂ ನಾಗರಿಕ, ಸುಸಂಸ್ಕೃತ ಸಾಮಾಜಿಕ ಜೀವನವೆಂದು ಸ್ಥೂಲವಾಗಿ ಕರೆಯಬಹುದಾದುದನ್ನು ಬೆಳೆಸಲು ಪ್ರಯತ್ನಿಸುತ್ತಿದ್ದಾನೆ. ಈ ಸಾಮಾಜಿಕ ಜೀವನದ ಸಾರ ಅಥವಾ ಇಂದಿನ ಆಧುನಿಕ ಮಾನವ ಸಮಾಜದ



ಇಡೀ ಕಟ್ಟಡದ ಆಧಾರ ಸ್ತಂಭಗಳು ಸತ್ಯ ಮತ್ತು ಅಹಿಂಸೆ. ಒಬ್ಬರೊಬ್ಬರ ಮಾತುಗಳಲ್ಲಿ ಪರಸ್ಪರ ನಂಬಿಕೆ ಹಾಗೂ ಮತ್ತೊಬ್ಬರ ಅಹಿಂಸೆಯಲ್ಲಿ ಪರಸ್ಪರ ನಂಬಿಕೆ ಉರುಳಿಹೋದರೆ, ಇಡೀ ಸಾಮಾಜಿಕ ಸಂರಚನೆ ಕುಸಿಯುವುದು ಅನಿವಾರ್ಯ. ಅಷ್ಟೇ ಅಲ್ಲ, ಗಂಡ–ಹೆಂಡಿರಲ್ಲಿ ಪರಸ್ಪರ ಅಸತ್ಯ, ಹಿಂಸೆಗಳಿದ್ದರೆ ಒಂದು ಸರಳ ಸಂಸಾರವನ್ನು ಕೂಡ ಕಟ್ಟುವುದು ಸಾಧ್ಯವಿಲ್ಲ. ಇಂದು ಮನುಷ್ಯ ಕುಟುಂಬ ವಿವಕ್ತವಾಗಿ ಮತ್ತು ಪರಸ್ಪರ ಹಿಂಸೆಯ ನಿರಂತರ ಭಯದಲ್ಲಿ ವಾಸಿಸುವ ಕೆಲವೇ ಕೆಲವು ಬುಡಕಟ್ಟು ಗುಂಪುಗಳಿಂದ ಮೊದಲ್ಗೊಂಡು ದೊಡ್ಡ ದೊಡ್ಡ ಭೂಖಂಡಗಳನ್ನು ತುಂಬಿರುವ ವಿಶಾಲ ಸಮಾಜವಾಗಿ ಬೆಳೆದಿದೆ. ಅಹಿಂಸೆಯ, ಪ್ರೀತಿಯ ಪ್ರಾಚುರ್ಯ ಇದಕ್ಕೆ ಕಾರಣವೆಂದು ಮಾರ್ಮಿಕವಾಗಿ ಸೂಚಿಸುತ್ತಾರೆ, ಗಾಂಧಿ. ಹಿಂಸೆ ಕಾಡಿನ ನಿಯಮವಾದರೆ, ಪ್ರೀತಿ ಮಾನವ ಜಾತಿಯ ನಿಯಮವೆಂದು ಅವರು ಹೇಳುವುದು ಅದಕ್ಕಾಗಿಯೆ.

ಅಲ್ಲದೆ, ಗಾಂಧೀಜಿ ಈಚೆಗೆ ನಮ್ಮ ನಡುವೆ ಆದರ್ಶ ರೀತಿಯಲ್ಲಿ ದೀರ್ಘಕಾಲ, ಪಾರದರ್ಶಕ ಪರಿಯಲ್ಲಿ ಬದುಕಿದರು; ಚಟುವಟಿಕೆಯ ಅನೇಕ ಕ್ಷೇತ್ರಗಳನ್ನು ಸ್ಪರ್ಶಿಸಿದರು; ಎಷ್ಟರಮಟ್ಟಿಗೆಂದರೆ, ಒಂದಲ್ಲ ಒಂದು ಸಂದರ್ಭದಲ್ಲಿ ಅವರ ಮಾರ್ಗದರ್ಶನವನ್ನು ಬಯಸದವರು ಮತ್ತು ಅವರು ಆಡಿದ್ದು ಮಾಡಿದ್ದರಿಂದ ಕಲಿಯಬಯಸದವರು ಯಾರೂ ಇರಲಾರರು. ಅವರು ಸ್ವತಃ ಸಮೃದ್ಧವಾಗಿ ಬರೆದಿದ್ದಾರೆ ಮತ್ತು ಅನೇಕರು ಅವರ ಬಗೆಗೆ ಸಂಪುಟಗಟ್ಟಲೆ ಬರೆದಿದ್ದಾರೆ ಎಂಬುದೂ ಗಮನಾರ್ಹ. ಆ ಸಾಮಗ್ರಿಯೆಲ್ಲ ಕೈಗೆಟಕುವಂತಿದೆ. ಮಹಾಪುರುಷರ ಬಗೆಗೆ ಇಂಥ ಅಧಿಕೃತ ದಾಖಲೆಗಳು ವಿರಳ.

ಈ ಎಲ್ಲ ಸಂಗತಿಗಳು ಗಾಂಧೀಜಿಯ ಪ್ರಭಾವವನ್ನು ಸುಲಭತರ ಮತ್ತು ವ್ಯಾಪಕವಾಗಿಸುತ್ತವೆ. ಅವರು ಮತ್ತು ಅವರ ಸ್ಮೃತಿ ನಮ್ಮಿಂದ ದೂರವಾದಂತೆ, ಅವರು ಹೆಚ್ಚು ಹೆಚ್ಚು ಅಧ್ಯಯನಗೊಳ್ಳುವುದು ಅನಿವಾರ್ಯ; ಏಕೆಂದರೆ, ವಿಕಾಸಪರ ಮನುಕುಲಕ್ಕೆ ಅವರದೊಂದು ಸಂದೇಶವಿದೆ.

ಜಗತ್ತಿನ ಮೇಲೆ ಗಾಂಧೀಜಿಯ ಪ್ರಭಾವ ಮಂದಗತಿಯದಾಗುವುದು ಅನಿವಾರ್ಯ; ಅಂತೆಯೆ, ನಿಶ್ಚಿತವಾಗುವುದೂ ಅನಿವಾರ್ಯ. ಅಮೆರಿಕದಲ್ಲಿ ಸಮಾನ ಹಕ್ಕುಗಳಿಗಾಗಿ ನಡೆದ ಅಹಿಂಸಾತ್ಮಕ ನೀಗ್ರೋ ಚಳುವಳಿಯ ಪ್ರಶ್ನಾತೀತ ನಾಯಕ ಡಾ. ಮಾರ್ಟಿನ್ ಲೂಥರ್ ಕಿಂಗ್, ಭಾರತದಲ್ಲಿದ್ದಾಗ, ಘೋಷಿಸಿದರು: "ಗಾಂಧಿ ಅನಿವಾರ್ಯ." ಹೀಗೆ ಹೇಳಿದಂದಿನಿಂದ ಕಿಂಗ್‌ರ ಮಟ್ಟ ಹೊಸ ಎತ್ತರಗಳಿಗೆ ಬೆಳೆದಿದೆ; ಏಕೆಂದರೆ, ಅಲ್ಲಿನ ಕೋಟ್ಯಂತರ ಮಂದಿ ನೀಗ್ರೋಗಳಲ್ಲಿ ಮಹಾ ನೈತಿಕ ಶಕ್ತಿಯನ್ನೂ, ಆತ್ಮವಿಶ್ವಾಸವನ್ನೂ ಅವರ ನಾಯಕತ್ವ ಮೂಡಿಸಿದೆ. ತಮ್ಮ ಶ್ರದ್ಧೆಯನ್ನು ಕ್ರಿಸ್ತನಿಂದ, ತಂತ್ರವನ್ನು (ಸತ್ಯಾಗ್ರಹ) ಗಾಂಧಿಯಿಂದ ಗಳಿಸಿದುದಾಗಿ ಕಿಂಗ್

ಮುಚ್ಚುಮರೆಯಿಲ್ಲದೆ ಘೋಷಿಸಿದ್ದಾರೆ. ಬ್ರಿಟನ್ನಿನ ಮಹಾವಿದ್ವಾಂಸ ಮತ್ತು ತತ್ತ್ವಜ್ಞಾನಿ ಪ್ರೊ. ಸಿ.ಇ.ಎಂ. ಜೋಡ್, ಗಾಂಧಿಯನ್ನು 'ನೈತಿಕ ಪ್ರತಿಭೆ'ಯೆಂದು ಕರೆದಿದ್ದಾರೆ. ನಾವು ಎರಡು ಸಾವಿರ ವರ್ಷಗಳಷ್ಟು ಹಿಂದಕ್ಕೆ ಹೋಗದಿದ್ದರೆ, ಗಾಂಧಿಗೆ ಸಮಾನನಾದ ವ್ಯಕ್ತಿಯೊಬ್ಬನನ್ನು ಕಾಣಲಾರೆವು ಎಂದು ಗಾಂಧೀಜಿಯ ಅತ್ಯುತ್ತಮ ಜೀವನ ಚರಿತ್ರಕಾರರಲ್ಲಿ ಒಬ್ಬರಾದ ಲೂಯಿ ಫಿಷರ್ ಹೇಳಿದ್ದಾರೆ. ಜಗತ್ತಿನ ಚಿಂತನಪರ ಮನಸ್ಸುಗಳ ಮೇಲೆ ಗಾಂಧೀಜಿ ಯಾವ ಪ್ರಭಾವವನ್ನು ಬೀರಿದ್ದಾರೆ ಎಂಬುದನ್ನು ತಿಳಿಯಬೇಕಾದರೆ, ಅವರ ಮಹತ್ತಿಗೆ ಎಲ್ಲ ಧರ್ಮಗಳ ಮತ್ತು ರಾಷ್ಟ್ರಗಳ ಗಣ್ಯವ್ಯಕ್ತಿಗಳು ಸಲ್ಲಿಸಿರುವ ಗೌರವ ಕಾಣಿಕೆಗಳತ್ತ ಕಣ್ಣು ಹಾಯಿಸಿದರೆ ಸಾಕು.

ಅವರ ಪ್ರಭಾವಕ್ಕೆ ಮೂರು ಸಂಗತಿಗಳು ಮುಖ್ಯ ಕಾರಣವೆನ್ನಬಹುದು: ಮೊದಲನೆಯದು, ಪ್ರಧಾನತಃ ಗಾಂಧೀಜಿಯ ತತ್ವದರ್ಶನದ ಮತ್ತು ನೀತಿಶಾಸ್ತ್ರದ ಭದ್ರ ಬುನಾದಿಯಾದ ಅಹಿಂಸಾ ವಿಧಾನದಿಂದ ಭಾರತ ಸ್ವಾತಂತ್ರ್ಯ ಗಳಿಸಿದ್ದು. ಸತ್ಯಾಗ್ರಹ ಆತ್ಮಶುದ್ಧಿಯ, ಆತ್ಮೋದ್ಧಾರದ ಪ್ರಾಚೀನ ವಿಧಾನ ಹಾಗೂ ವೈಯಕ್ತಿಕ ಆಧ್ಯಾತ್ಮಿಕ ಉದಾತ್ತೀಕರಣದ ಪರಾಕಾಷ್ಠೆಯಾದರೂ ಮಾನುಷ ಚಟುವಟಿಕೆಯ ಎಲ್ಲ ಕ್ಷೇತ್ರಗಳಲ್ಲೂ ಕೆಡುಕು ಮತ್ತು ಅನ್ಯಾಯದ ವಿರುದ್ಧ ಹೋರಾಟಕ್ಕಾಗಿ ಅಹಿಂಸೆಯ ಹಾಗೂ ನೈತಿಕತೆಯ ಶಕ್ತಿಗಳಲ್ಲಿ ಸಂಘಟಿಸುವ ವಿಧಾನವೊಂದನ್ನು ರೂಪಿಸಿದ ಕೀರ್ತಿ ಗಾಂಧೀಜಿಗೆ ಮಾತ್ರ ಸಲ್ಲುತ್ತದೆ. ಎರಡನೆಯದು, ಸತ್ಯ ಸ್ಥಾಪನೆಗೆ ಅಹಿಂಸೆ ಅತ್ಯುತ್ತಮ ಮತ್ತು ಏಕೈಕ ಮಾರ್ಗವೆಂದು ಗಾಂಧೀಜಿ ರಾಜಿರಹಿತ ದೃಢತೆಯಿಂದ ಎತ್ತಿ ಹಿಡಿದರು. ಮಾರ್ಗ ಮತ್ತು ಧ್ಯೇಯದ ನಡುವಣ ಅಭೇದ್ಯ ಸಂಬಂಧದ ಅವರ ಸಿದ್ಧಾಂತವನ್ನು 'ದಾರಿಯೆ ಗುರಿ' ಎಂದು ಅಭಿವ್ಯಕ್ತಿಸಬೇಕು. ಹಾಗೆ ಹೇಳಿ ಅವರು ನಡೆವಳಿಕೆಯ ಪ್ರಚಲಿತ ದ್ವಂದ್ವ ಮಾನದಂಡಗಳನ್ನು ಒಂದೇ ಏಟಿಗೆ ವಜಾ ಮಾಡಿದರು– ಈ ಹೊತ್ತು ಸಮೂಹ ನೀತಿಸಂಹಿತೆ ಅಥವಾ ರಾಷ್ಟ್ರೀಯ ನೀತಿ ಸಂಹಿತೆಗಿಂತ ವೈಯಕ್ತಿಕ ನೀತಿಸಂಹಿತೆ ಭಿನ್ನವಾಗಿದೆ. ಖಾಸಗಿ ಜೀವನದ ಮತ್ತು ಸಾರ್ವಜನಿಕ ಜೀವನದ ಗುಣಗಳನ್ನು ಪ್ರತ್ಯೇಕಿಸಿ, ಬೇರೆಬೇರೆಯಾಗಿ ಬೆಲೆಗಟ್ಟ ಬಯಸಲಾಗುತ್ತದೆ. ವೈಯಕ್ತಿಕ ಮತ್ತು ಖಾಸಗಿ ಕೊಲೆಯೊಂದು ಹೇಯ ಅಪರಾಧವಾದರೆ, ವಿವಿಧ ದೇಶಗಳಿಂದಾಗುವ ಸಾಮೂಹಿಕ ಕೊಲೆ ಅಥವಾ ಅದಕ್ಕಾಗಿ ವ್ಯವಸ್ಥೆ ದೇಶಭಕ್ತಿಯೆಂದು ಪ್ರಶಂಸೆಗೊಳ್ಳುತ್ತದೆ. ಮೂರನೆಯದು ಮತ್ತು ಅವರು ಒತ್ತಿ ಹೇಳಿದ ಅತ್ಯಂತ ಮುಖ್ಯವಾದುದು, ಎಂದರೆ ಶಾಂತಿಮಾರ್ಗ ಅಣ್ವಸ್ತ್ರಗಳ ಬಳಕೆಯಲ್ಲಾಗಿರುವ ಇತ್ತೀಚಿನ ಬೆಳವಣಿಗೆಯ ದೃಷ್ಟಿಯಿಂದ ಅತ್ಯಂತ ಪ್ರಸ್ತುತವಾಗಿ ಪರಿಣಮಿಸಿದೆ. ಎಲ್ಲ ಸಂಘರ್ಷ, ಅದರಲ್ಲೂ ಅಂತರರಾಷ್ಟ್ರೀಯ ಸಂಘರ್ಷಗಳನ್ನು ಹಿಂಸೆ ಮತ್ತು ಯುದ್ಧಕ್ಕಿಂತ ಬೇರೆಯಾದ ವಿಧಾನಗಳಿಂದ ಪರಿಹರಿಸಲೆಳಸಬೇಕು.



ಮನುಷ್ಯ ಎಲ್ಲ ನಾಗರಿಕತೆಯನ್ನು ನಾಶಗೊಳಿಸದಿರಬೇಕಾದರೆ, ಗಾಂಧೀಜಿಯ ಹಿತವಚನವನ್ನು ಒಂದು ದಿನ ಅನುಸರಿಸಬೇಕೆಂದು ಬಹುದೊಡ್ಡ ಸೈನ್ಯಾಧಿಕಾರಿ ಜನರಲ್ ಮೆಕಾರ್ಥರ್ ಹೇಳಿದ್ದಾರೆ. ಸಮರಕ್ಕೆ ಸ್ಥಾನವಿಲ್ಲದ ಸ್ವತಂತ್ರ ರಾಷ್ಟ್ರಗಳ ಪ್ರಪಂಚ ಸಂಯುಕ್ತ ಸಂಘದ ಅಗತ್ಯವನ್ನು ಅವರು ಪ್ರತಿಪಾದಿಸಿದರು. ಶಾಂತಿ, ಪ್ರಗತಿಗಳು ಸುರಕ್ಷಿತವಾಗಬೇಕಾದರೆ, ಈ ಭಾವನೆ ಬೆಳೆಯಬೇಕು. ಗಾಂಧೀಜಿಯ ಸತ್ಯ, ಅಹಿಂಸೆಗಳ ತತ್ತ್ವದರ್ಶನ ಕ್ರಿಯೆಯಲ್ಲಿ ಸಂಪೂರ್ಣ ಅಂಗೀಕಾರಗೊಳ್ಳಲು ದಶಕಗಳ ಕಾಲ ಕಾಯಬೇಕಾಗಬಹುದಾದರೂ ಅಂತರರಾಷ್ಟ್ರೀಯ ಸಂಬಂಧ ಮುಂದುವರಿಯಬೇಕಾದ ದಿಕ್ಕು ಅವರು ಪ್ರತಿಪಾದಿಸಿದ ತತ್ತ್ವಗಳಿಗೆ ಹೊಂದಿ ಕೊಳ್ಳಬೇಕು. ಶಬ್ದಕೋಶದಲ್ಲಿ ಮತ್ತು ರಾಜತಾಂತ್ರಿಕ ಭಾಷೆಯಲ್ಲಿ ಈಗ ಸ್ವೀಕೃತ ಭಾವನೆಯಾಗಿರುವ 'ಪಂಚಶೀಲ' ಆ ರಂಗದಲ್ಲಿ ಗಾಂಧೀಜಿಯ ಕೆಲವು ಭಾವನೆಗಳ ತಾತ್ಪರ್ಯವಾಗಿದೆ.

ಹೀಗಾಗಿ ಗಾಂಧೀಜಿಯ ತತ್ತ್ವದರ್ಶನ, ಆಲೋಚನೆ ಮತ್ತು ಕ್ರಿಯೆ ಈಗ ಮಾನವ ಚರಿತ್ರೆಯ ಒಂದು ಭಾಗವಾಗಿದ್ದು, ಒಮ್ಮೆ ಬಿತ್ತಿದ ಮೇಲೆ ಮೊಳಕೆಯೊಡೆದು ಬೃಹದ್ ವಟವೃಕ್ಷವಾಗಿ ಬೆಳೆಯುವ ಪುಟ್ಟ ಬೀಜದ ಸುಪ್ತಶಕ್ತಿಯುಳ್ಳದ್ದಾಗಿದೆ.

* * * *

# ೩. ಸಾರ್ವಜನಿಕ ಆಡಳಿತ ಗಾಂಧೀಜಿಯವರ ಪರಿಕಲ್ಪನೆ

ಗಾಂಧೀಜಿಯ ಭಾವನೆಗಳನ್ನು ಯಾವುದೇ ವಿಷಯದ ಬಗ್ಗೆ ಒಂದಲ್ಲ ಒಂದು ಕಡೆಯಲ್ಲಿ, ಒಂದಲ್ಲ ಒಂದು ಪುಸ್ತಕದಲ್ಲಿ, ಅಥವಾ ಒಂದಲ್ಲ ಒಂದು ಸಂದರ್ಭದಲ್ಲಿ ಕಾಣುವುದು ಸಾಧ್ಯ. ಅವರು ಮಾನವೀಯ ಸ್ವಾರಸ್ಯ ಮತ್ತು ಪ್ರಾಮುಖ್ಯವುಳ್ಳದ್ದೆನ್ನಬಹುದಾದ ಪ್ರತಿಯೊಂದು ವಿಷಯದ ಬಗೆಗೂ ತಮ್ಮ ಬದುಕಿನುದ್ದಕ್ಕೂ ವ್ಯಾಪಕವಾಗಿ ಬರೆದರು. ಅವರ ಬರಹಗಳು ವಿಷಯವನ್ನು ಕುರಿತ ಓದು ವ್ಯಾಖ್ಯಾನದ ಹಾಗೆ ಓದಿಸಿಕೊಳ್ಳುತ್ತವೆ; ಮಾನವ ಜೀವನದ ಅಪಾರ ವೈವಿಧ್ಯ, ಅದರ ಅಭೀಪ್ಸೆಗಳು ಮತ್ತು ಅಗತ್ಯಗಳು, ಸಮಸ್ಯೆಗಳು ಮತ್ತು ಪರಿಹಾರಗಳು ವಿಷಯಗಳು, ಮಾನವ ಜೀವನದ ಪ್ರಕ್ಷುಬ್ಧ ಜಲರಾಶಿಯಲ್ಲಿ ಧುಮುಕಿ ಮುಳುಗಿ, ತಮ್ಮ ಘಟನಾಪೂರ್ಣ ಜೀವಮಾನವೆಲ್ಲ ಪ್ರವಾಹ, ಅಡ್ಡ ಪ್ರವಾಹಗಳ ವಿರುದ್ಧ ಹೋರಾಡುತ್ತ ಸಾಗಿದ ಸಮರ್ಥ ಈಜುಗಾರನಿಗೆ ಅವರನ್ನು ಹೋಲಿಸಬಹುದು. ಅವರು ಪ್ರವಾದಿಗಳ ವರ್ಗಕ್ಕೆ ಸೇರಿದ ಅಸಾಧಾರಣ ದಾರ್ಶನಿಕ ಅಥವಾ ಕನಸುಗಾರರಾಗಿದ್ದು, ಕ್ರಿಯಾಶೀಲ ಜಗತ್ತಿನ ಅನುಷ್ಠಾನಪರ ವ್ಯಕ್ತಿಯ ಪಾತ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ತಾವು ಮಾತನಾಡುತ್ತಿದ್ದುದನ್ನು ಅವರು ಬಲ್ಲವರಾಗಿದ್ದರು. ಅವರು ತಮ್ಮನ್ನು ತಾವು 'ಅನುಷ್ಠಾನನಿಷ್ಠ ಆದರ್ಶವಾದಿ' ಎಂದು ಕರೆದುಕೊಂಡಿದ್ದಾರೆ. ಮಾನವ ಪ್ರಗತಿಯ ಅನಂತ ಸಾಮರ್ಥ್ಯಗಳನ್ನು ಅವರು ಬಲ್ಲವರಾಗಿದ್ದರೂ ವರ್ತಮಾನದ ಸದ್ಯಃ ಪರಿಮಿತಿಗಳ ವಿಷಾದಪೂರ್ಣ ಅರಿವು ಅವರಿಗಿತ್ತು. ಮನುಷ್ಯ ನಿರ್ಮಾಣ ಹಂತದಲ್ಲಿರುವ ದೇವರೆಂದು ಅವರು ಒಪ್ಪುತ್ತಿದ್ದರೂ, "ಬಹುದೊಡ್ಡ ದುರಂತವೆಂದರೆ, ತಮ್ಮ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಗ್ರಾಮೀಣ ಜನತೆಯ ಸಂಕಲ್ಪರಾಹಿತ್ಯ" ಎಂದು ಅವರು ವಿವರಿಸಿದರು. ಆದರೆ ಈ ವಾಸ್ತವಿಕತೆ, ಅವರನ್ನು ಎಂದೂ ನಿರಾಶೆಗೆ ಒಯ್ಯಲಿಲ್ಲ; ಅಗತ್ಯದಲ್ಲಿರುವವರು ಹಸಿದವರ, ಬಡವರ, ಅಜ್ಞಾನಿಗಳ, ಅಸಹಾಯಕರ, ಅಲಕ್ಷಿತರ, ದಮನಿತರ, ದಲಿತರ, ಶೋಷಿತರ ಮತ್ತು ಕೈಬಿಟ್ಟವರ ಉದ್ಧಾರಕ್ಕೆ ಅವರು ತಮ್ಮನ್ನು ಮರುಸಮರ್ಪಣ ಮಾಡಿಕೊಳ್ಳಲು ಕಾರಣವಾಯಿತು. ನಾವು ಉಸಿರಾಡುವ ವಾತಾವರಣದಲ್ಲಿ ಹೇಗೋ ಹಾಗೆ ಸರ್ವವ್ಯಾಪಕ ಚೈತನ್ಯದಲ್ಲಿ ಅವರು ನಂಬಿಕೆಯಿಟ್ಟಿದ್ದರು; ಆದರೆ ಶರೀರದ ಪ್ರಾಣಿ ಸಹಜ ಅಗತ್ಯಗಳಿಗೆ ಗಮನ ಕೊಡುವುದರಿಂದ ಅವರು ಮೊದಲು ಮಾಡಿದರು.



ಭಗವಂತ ಕೂಡ ಹಸಿದವರ ಮುಂದೆ 'ಅನ್ನ'ದ ರೂಪದಲ್ಲಿ ವಿನಾ ಕಾಣಿಸಿಕೊಳ್ಳುವ ಧೈರ್ಯ ಮಾಡಲಾರನೆಂದು ಅವರೊಮ್ಮೆ ಹೇಳಿದರು.

ಭವಿಷ್ಯವನ್ನು ಕುರಿತ ಅವರ ಭಾವನೆಗಳು ಎಷ್ಟೇ ಆದರ್ಶವಾದೀಯವಾಗಿ ಕಾಣಲಂತೆ, ಸದ್ಯದ ಕೆಡುಕುಗಳಿಗೆ ಅವರ ಪರಿಹಾರಗಳು ವ್ಯಾವಹಾರಿಕ ಪರಿಗಣನೆಗಳನ್ನು ಆಧರಿಸಿದ್ದುವು. ಬದುಕನ್ನು ಕುರಿತ ಅವರ ನಿಲುವು ವೈಜ್ಞಾನಿಕವಾಗಿತ್ತು: ಪ್ರಯೋಗಗಳಿಂದ ಕಲಿಯಲು ಅವರು ಯಾವಾಗಲೂ ಸಿದ್ಧರಾಗಿದ್ದರು. ಅವರು ಪ್ರಜಾಪ್ರಭುತ್ವವಾದಿಯಾಗಿದ್ದರು: ಎಲ್ಲ ವ್ಯಕ್ತಿಗಳ ಸಮಾನ ಸ್ವಾತಂತ್ರ್ಯದಲ್ಲಿ ಅವರು ನಂಬಿಕೆಯಿರಿಸಿದ್ದರು; ಜಾತಿ, ಪಂಥ, ಜನಾಂಗ, ಲಿಂಗ, ಮೇಲು, ಕೀಳು, ಶ್ರೀಮಂತ, ದರಿದ್ರ ಎಂಬ ಭೇದವಿಲ್ಲದೆ ವಿಶಾಲ ಜನ ಸಮುದಾಯಗಳ ಹಿತ ಅವರ ಧ್ಯೇಯವಾಗಿತ್ತು. ಅವರ ಮನೋಧರ್ಮ ಸಾರತಃ ನೈತಿಕವಾಗಿತ್ತು: ಮಾನವೀಯ ಸಂಬಂಧ ವ್ಯಕ್ತಿಗಳ ಅಥವಾ ಗುಂಪುಗಳ ನಡುವಣದಾಗಲಿ, ಮೇಲುವರ್ಗಗಳ ಅಥವಾ ಜನ ಸಮುದಾಯಗಳ ಅಥವಾ ರಾಜ್ಯಗಳ ನಡುವಣದಾಗಲಿ, ಪ್ರೀತಿಯ ಮೇಲೆ ಅಥವಾ ಪರೋಪಕಾರದ ಮೇಲೆ ಆಧರಿಸಿರಬೇಕು ಮತ್ತು ಇತರರ ಹಿತದ ಬಗೆಗೆ ಸಮಾನ ಆದರವುಳ್ಳದಾಗಿರಬೇಕು ಎಂಬುದು ಅವರ ನಂಬಿಕೆಯಾಗಿತ್ತು.

ಗಾಂಧಿ ತತ್ತ್ವದರ್ಶಿಯಾಗಿರಲೇ ಇಲ್ಲ, ಆ ಶಬ್ದದ ಸ್ವೀಕೃತ ಅರ್ಥದಲ್ಲಿ. ಆದರೆ ಸುಶಕ್ತ ಕರ್ಮತತ್ತ್ವದರ್ಶನವೊಂದನ್ನು– ಹಾಗೆ ಹೇಳಬಹುದಾದರೆ– ಅವರು ಬೆಳೆಸಿದರು. ನೂತನ ಆಲೋಚನೆಗಳಿಗೆ, ಪ್ರಯೋಗಗಳಿಗೆ ಅವರು ತಮ್ಮ ಮನಸ್ಸನ್ನು ಸದಾ ತೆರೆದಿಟ್ಟುಕೊಂಡದ್ದರಿಂದ, ತಮ್ಮ ಬದುಕಿನ ಕಡೆಯ ದಿನದವರೆಗೂ ವಿಕಾಸಶೀಲರಾಗಿದ್ದರೆಂದು ಹೇಳಬಹುದು. ಬದುಕಿನ ಮತ್ತು ಅದರ ಸಮಸ್ಯೆಗಳ ಬಗೆಗೆ ಸಮಗ್ರ ದೃಷ್ಟಿಯೊಂದು ಅವರಿಗಿತ್ತು. ಆದರೂ ಅವರ ವಿಷಯದಲ್ಲಿ ವಿಶಿಷ್ಟವಾಗಿದ್ದುದೇನೆಂದರೆ, ಅವರು ಕೇವಲ ಸಿದ್ಧಾಂತೀಕರಿಸಿ ಬೋಧಿಸಲಿಲ್ಲ, ತಾವು ಬೋಧಿಸಿದ್ದನ್ನು ಆಚರಿಸಿದರು ಎಂಬುದು. ಅವರು ಆಲೋಚಿಸಿದ್ದು, ಆಡಿದ್ದಕ್ಕೆಲ್ಲ ಇದು ನಿಶಿತತೆಯನ್ನಿತ್ತಿತು.

ತಾವು ವಿನೀತ ಸತ್ಯಾನ್ವೇಷಕರೆಂದು ಅವರು ಹೇಳಿಕೊಂಡರು. ಆದರೆ ಅವರಿಗೂ ಇತರ ಸತ್ಯಾನ್ವೇಷಕರಿಗೂ ಬಹಳ ಅಂತರವಿತ್ತು. ಅಮೂರ್ತ ಸತ್ಯ ಅಥವಾ ತಥ್ಯದ ಬಗೆಗೆ ಸ್ಪಷ್ಟ, ಖಚಿತ ಭಾವನೆಗಳು ಅವರಿಗಿದ್ದು, ಜೀವನದ ಅಥವಾ ಅನುಭವದ ಸತ್ಯಗಳ ಬಗೆಗೆ, ದೈನಂದಿನ ಜೀವನದ ನಿಯಮಗಳ ಬಗೆಗೆ ಹಾಗೂ ಬದುಕು ಒಡ್ಡಿದ ಸಮಸ್ಯೆಗಳ ಬಗೆಗೆ ಅವರು ಆದರಪೂರ್ವಕವಾಗಿ ಕ್ರಿಯಾಶೀಲರಾದರು. ಆದ್ದರಿಂದ, ವಸ್ತುಗಳೊಡನೆ, ಜೀವಿಗಳೊಡನೆ ಅಥವಾ ಸಹಮಾನವರೊಡನೆ ಸಂಕೀರ್ಣ ರೀತಿಯ ಮಾನವ ಸಂಬಂಧದಿಂದ ಉದ್ಭವಿಸುವ

ಸಂಗತಿಯೊಡನೆ, ಸನ್ನಿವೇಶಗಳೊಡನೆ ಮತ್ತು ಆಂತರಿಕ ಮತ್ತು ಬಾಹ್ಯ ಅನುಭವಗಳೊಡನೆ ವ್ಯವಹರಿಸುವುದರಲ್ಲಿ ಅವರು ಯಾವಾಗಲೂ ಮಗ್ನರಾಗಿದ್ದರು.

ಯಾರ ಪಾಲಿಗೆ ಸತ್ಯವೆ, ಎಂದರೆ ಬದುಕಿನ ಸಂಗತಿಗಳು, ಅನುಭವಗಳು, ಅಸ್ತಿತ್ವದ ಮತ್ತು ಆಗುವಿಕೆಯ ನಿಯಮಗಳು ದೇವರಾಗಿದ್ದುವೊ ಅಂಥ ಈ ಸತ್ಯಾನ್ವೇಷಕನಿಗೆ ಅದನ್ನು ಅನ್ವೇಷಿಸುವ ತನ್ನದೇ ವಿಧಾನವಿತ್ತು. ಬದುಕಿನ ಸತ್ಯದ ಸಾಕ್ಷಾತ್ಕಾರ ಮತ್ತು ಸಾಕ್ಷಾತ್ಕೃತ ಸತ್ಯಕ್ಕನುಗುಣವಾಗಿ ಬದುಕುವುದು ಅಂತಿಮ ಧ್ಯೇಯವೆನ್ನಬಹುದು. ಅದು ಸಾಮಾನ್ಯವಾಗಿ ಮಾನವಜೀವಿಯ ಅತ್ಯುನ್ನತ ಸಾಧನೆಯಾಗಿರುತ್ತದೆ. ಆದರೆ ಗಾಂಧೀಜಿಯ ಪಾಲಿಗೆ ಅದು ಆರಂಭಗೊಳಿಸ ಬಹುದಿತ್ತು. ಹೀಗಾಗಿ ಅವರ ಸತ್ವತತ್ತ್ವದರ್ಶನ ಅಥವಾ ಕರ್ಮತತ್ತ್ವದರ್ಶನಕ್ಕೆ ಮಾನವತೆಯಷ್ಟೆ ವ್ಯಾಪಕ, ಶೀಲವಾದ ಸಾಮಾಜಿಕ ಹೂರಣವಿತ್ತು.

ಆದರೆ ತಾವು ಸ್ವತಃ ಸಾಕ್ಷಾತ್ಕರಿಸಿಕೊಂಡದ್ದನ್ನು ಇತರರು ಸಾಕ್ಷಾತ್ಕರಿಸಿ ಕೊಳ್ಳುವಂತೆ ಮಾಡಲು ಅವರ ಸಲಹೆಯೇನು? ಸತ್ಯದ ಸಂವಿಧಾನ, ಪ್ರಸರಣಗಳಿಗೆ ಗಾಂಧೀಜಿಯ ವಿಶಿಷ್ಟ ಕೊಡುಗೆ ಇಲ್ಲಿ ಕಾಣಿಸಿಕೊಳ್ಳುತ್ತದೆ. ಅವರು ಪ್ರಾಣಾಪಾಯವನ್ನೆ ಎದುರಿಸಿ ಸತ್ಯಸಾಕ್ಷಾತ್ಕಾರ ಮಾಡಿಕೊಳ್ಳುತ್ತಿದ್ದರು ಮತ್ತು ಸತ್ಯಕ್ಕೆ ಅನುಸಾರವಾಗಿ ನಡೆದುಕೊಳ್ಳುತ್ತಿದ್ದರು. ತಮ್ಮ ಪಾಲಿಗೆ ಸತ್ಯವಾದದ್ದು ಇತರರಿಗೆ ಹಾಗಲ್ಲದಿರಬಹುದು ಎಂಬ ಭಾವನೆಯಿಂದ ಅವರು ಮುನ್ನಡೆಯುತ್ತಿದ್ದರು. ಆದರೂ ತಮ್ಮ ಧೋರಣೆಗೆ ಇತರರನ್ನು ಪರಿವರ್ತಿಸಲು ಯಾವುದೇ ಬಲಾತ್ಕಾರವನ್ನು ಬಳಸುವುದಕ್ಕಿಂತ ಸ್ವತಃ ನೋವನ್ನನುಭವಿಸುತ್ತಿದ್ದರು. ಇದು, ಇತರರನ್ನು ತಮ್ಮ ದೃಷ್ಟಿಯ ಬಗೆಗೆ ಮನವೊಲಿಸಲು ಸಣ್ಣ ವಿಷಯಗಳಲ್ಲಿ ಅವರು ಆಶ್ರಮದಲ್ಲಿ ಕೈಗೊಳ್ಳುತ್ತಿದ್ದ ಖಾಸಗಿ ಉಪವಾಸಗಳ, ಅಂತೆಯೇ ದೊಡ್ಡ ಸಾರ್ವಜನಿಕ ಉಪವಾಸಗಳ ರಹಸ್ಯವಾಗಿತ್ತು. ಬದುಕಿನಲ್ಲಿ ಪ್ರತಿಯೊಬ್ಬರೂ ಸ್ವತಂತ್ರರೂ ನಿರ್ಭಯರೂ ಆಗಿರಬೇಕೆಂದು ಅವರು ಬಯಸಿದರು; ಸಮಾನ ಧ್ಯೇಯಗಳ ಸಾಧನೆಗಾಗಿ ಸಮಾನ ಕಾರ್ಯಗಳಲ್ಲಿ ಮತ್ತು ಯೋಜನೆಗಳಲ್ಲಿ ಸ್ವತಂತ್ರ ವ್ಯಕ್ತಿಗಳ ಮತ್ತು ಗುಂಪುಗಳ ಸ್ವಯಂಪ್ರೇರಿತ ಭಾಗವಹಿಸುವಿಕೆಯನ್ನು ಅವರ ಪ್ರಜಾಪ್ರಭುತ್ವ ಆಧರಿಸಿತ್ತು.

ಹೀಗಾಗಿ, ಅಹಿಂಸೆಯ ಅಥವಾ ಪ್ರೀತಿಯ ಮೂಲಕ ಸತ್ಯದ ಅನ್ವೇಷಣೆ ಹಾಗೂ ಸಾಕ್ಷಾತ್ಕಾರ, ಜೀವನದ ನಕ್ಷಾರಹಿತ ಸಾಗರದಲ್ಲಿ ಅವರ ಸುದೀರ್ಘ ಪ್ರಯಾಸಕರ ಸಾಹಸದ ಭಾರಿ ಲಂಗರು ಆಗಿತ್ತು.

ಗಾಂಧೀಜಿಯ ಜೀವನದೃಷ್ಟಿ, ಆಲೋಚನೆ, ಕ್ರಿಯೆಗಳನ್ನು ನಾವು ಪರಿಗಣಿಸುವಾಗ, ಅವರ ಬಗೆಗಿನ ಈ ಇಡೀ ಹಿನ್ನೆಲೆಯನ್ನು ಮನಸ್ಸಿನಲ್ಲಿಡ ಬೇಕು.



ಸ್ವಲ್ಪಕಾಲ ಜಗತ್ತು ಕಂಡ ಅತ್ಯುನ್ನತ ಮಾನವತಾವಾದಿಗಳಲ್ಲಿ ಒಬ್ಬರಾಗಿದ್ದರು ಗಾಂಧಿ ಎಂಬುದು ಸ್ಪಷ್ಟ. ಅಲ್ಲದೆ, ಅವರ ಮಾನವತಾವಾದದಲ್ಲಿ ಒಂದು ವೈಶಿಷ್ಟ್ಯವಿತ್ತು. ಸಾಮಾನ್ಯ ಮಾನವತಾವಾದದ ತಳಹದಿಯನ್ನು ರೂಪಿಸುವ ಮಾಮೂಲು ಪರಿಗಣನೆಗಳಿಂದ ಅದು ಉದ್ಭವಿಸಿದ್ದಲ್ಲ. ಅವರ ಮಾನವತಾವಾದ ಜೀವ, ಚೈತನ್ಯಗಳ ಏಕತೆಗೆ ಸಂಬಂಧಿಸಿದ ಅವರ ಆಧ್ಯಾತ್ಮಿಕ ಮತ್ತು ಆನುಭಾವಿಕ ಅನುಭವದ ಫಲಿತಾಂಶವಾಗಿತ್ತು. "ಜೀವವೆಲ್ಲ ಒಂದು" ಎಂದು ಅವರು ಘೋಷಿಸಿದರು. ಹೀಗಾಗಿ ಅವರು ಮಾನವತಾವಾದ ಆಲಿಂಗಿಸಿದ್ದು ಮನುಕುಲವನ್ನು ಮಾತ್ರವಲ್ಲ, ಸಮಗ್ರ ಜೀವಂತ ಸೃಷ್ಟಿಯನ್ನು. ಅದು ಡಾ. ಆಲ್ಬರ್ಟ್ ಷೆವಿತ್ಸರ್ ಅವರ 'ಜೀವಗೌರವ' ಸಂಬಂಧಿ; ಲ್ಯಾಂಬ್ರೇನ್‌ನ ಆ ವೈದ್ಯರು ಅದನ್ನು ನವನಾಗರಿಕತೆಯ ತಳಹದಿಯೆಂದು ಪ್ರತಿಪಾದಿಸುತ್ತಾರೆ.

ಈ ನಿಲುವಿನ ಸೂಚನೆಯೇನೆಂದರೆ, ಮನುಷ್ಯನನ್ನು ಸೃಷ್ಟಿಯ ಕೇಂದ್ರವೆಂದಾಗಲಿ ಈ ಇಡೀ ಸೃಷ್ಟಿ ಅವನ ಸುಖ, ಶೋಷಣೆಗಳಿಗೆ ಉದ್ದಿಷ್ಟವಾಗಿದೆ ಎಂದಾಗಲಿ ಭಾವಿಸಕೂಡದೆಂಬುದು. ಸೃಷ್ಟಿ ಅಲ್ಲಿದೆ, ಜೀವ ಅಲ್ಲಿದೆ; ಮನುಷ್ಯ ಎಂದೂ ನಿಲ್ಲದ, ಮುಂದೆಯೂ ನಿಲ್ಲದ ವಿಕಾಸದಲ್ಲಿ ತನ್ನ ಸರದಿಯನ್ನು ಸ್ಥಾನವನ್ನೂ ಪಡೆಯುತ್ತಾನೆ. ಆದ್ದರಿಂದ, ವಿಕಾಸಪರ ಸೃಷ್ಟಿಯ ಗತಿಯಲ್ಲಿ ಈ ಗ್ರಹದ ಮೇಲೆ ಆಕಸ್ಮಿಕವಾಗಿ ಕಾಣಿಸಿಕೊಂಡಿರುವ ಒಂದು ಪ್ರಾಣಿಯೊಂದು ಮನುಷ್ಯನನ್ನು ಪರಿಗಣಿಸಬೇಕು. ವ್ಯತ್ಯಾಸ, ಮನುಷ್ಯನ ಅತ್ಯಂತ ಅನುಕೂಲ ವೈಶಿಷ್ಟ್ಯವೇನೆಂದರೆ, ಪರಿಶೋಧಿಸುವ, ಪರಿಸ್ಥಿತಿಯನ್ನು ಅವಲೋಕಿಸುವ, ವಿಕಾಸಾತ್ಮಕ ಪ್ರೇರಣೆಯ ಗುಟ್ಟನ್ನು ಅರ್ಥಮಾಡಿಕೊಳ್ಳುವ ಮತ್ತು ಅಷ್ಟರಮಟ್ಟಿಗೆ ಮನುಕುಲದ ಪ್ರಗತಿಯನ್ನು ಸವೇಗಗೊಳಿಸಲು ನೆರವಾಗುವ ಸಾಮರ್ಥ್ಯ ಅವನಿಗುಂಟೆನ್ನುವುದು.

ಆದರೂ 'ಮಾನವ'ನ ಅರ್ಥ ಬೇರೆ ಬೇರೆ ಸಾಮಾಜಿಕ ಮತ್ತು ಇತರ ತತ್ತ್ವಜ್ಞಾನಿಗಳಿಗೆ ಬೇರೆಬೇರೆಯಾಗುತ್ತದೆ. ಗಾಂಧೀಜಿಯ ಪಾಲಿಗೆ ಮಾನವ ಪರಿಪೂರ್ಣತೆಗೆ ಯಾತ್ರೆ ಕೈಕೊಂಡ ಒಂದು ಆಧ್ಯಾತ್ಮಿಕ ಘಟಕ. ಪ್ರಾಯಶಃ ಮಾನವ ಮೃಗೀಯತೆಯ ಸೂಕ್ಷ್ಮ ಸ್ಥಿತಿಯಿಂದ ಇನ್ನೂ ಹೊರಬಿದ್ದಿಲ್ಲ ಎಂದು ಅವರು ಒಪ್ಪಿದರು. ಆದರೂ ಅವನು ಪ್ರಜ್ಞಾಪೂರ್ವಕವಾಗಿ ಅಥವಾ ಅಪ್ರಜ್ಞಾಪೂರ್ವಕವಾಗಿ ಅರಸುವುದು, ಸತ್ಯ ಅಥವಾ ವಿಶ್ವಾತ್ಮದೊಡನೆ ಪರಿಪೂರ್ಣ ಸಾಮರಸ್ಯ ಸಾಧ್ಯವಾಗುವಂತೆ, ಪ್ರಜ್ಞೆಯ ಮತ್ತು ಅಸ್ತಿತ್ವದ ಆಂತರಿಕ ತಿರುಳಿನ ತುಂಬು ಬೆಳವಣಿಗೆ ಮತ್ತು ಅಭಿವ್ಯಕ್ತಿಯನ್ನು ಆ ಗುರಿಯತ್ತ ಮಾನವ ಸಾಧಿಸುವ ಪ್ರಗತಿಯಿಂದ ಮಾನವ ವಿಕಾಸವನ್ನು ಪರೀಕ್ಷಿಸುತ್ತಾರೆ, ಗಾಂಧೀಜಿ. ದೇಹದ ರಕ್ಷಣೆ, ಮನಸ್ಸಿನ ನಿಶಿತತೆ, ಸೌಂದರ್ಯಪ್ರಜ್ಞೆಯ ಜಾಗೃತಿ, ಆತ್ಮಸಾಕ್ಷಿಯ ದೃಢೀಕರಣ, ನೈತಿಕ ಅಸ್ತಿತ್ವ, ವ್ಯಕ್ತಿತ್ವದ ಸಮಗ್ರ ಬೆಳವಣಿಗೆ– ಇವೆಲ್ಲ ಸಾಧನಗಳಾಗಿ ಮತ್ತು ಶಿಸ್ತುಗಳಾಗಿ ಅವಶ್ಯಕ. ಆದರೆ

ಶಿಖರವೆಂದರೆ, ಸತತ ಅಭಿವ್ಯಕ್ತಿಪರ, ಸರ್ವವ್ಯಾಪಕ, ಅನಂತ ಶಾಶ್ವತ ಜೀವನ ಶಕ್ತಿಯೊಡನೆ ವ್ಯಷ್ಟಿಯ ಸಮಗ್ರ ಸಾಮರಸ್ಯ. ಗಾಂಧೀಜಿ ಬಳಸುವ ಮಾತುಗಳು, ನೀತಿಸಂಹಿತೆ ಆಗಾಗ ಮನುಷ್ಯನ ಆಧ್ಯಾತ್ಮಿಕ ವಿಕಾಸದ ಘಟ್ಟಗಳಿಗೆ ಸಮಾನಾರ್ಥಕ ವಾಗುತ್ತವೆ.

ಅನೇಕ ಚಿಂತಕರ ಮತ್ತು ತತ್ತ್ವಜ್ಞಾನಿಗಳ ಪ್ರಕಾರ, ಮನುಷ್ಯನೇ ವಾಸ್ತವವಾಗಿ ವಿಷಯಗಳಿಗೆ ಪ್ರಮಾಣ. ಮಾನವನೇ ಪರಮ ಪರಿಗಣನೆಯೆಂದು ಗಾಂಧಿ ಕೂಡ ಹೇಳಿದ್ದಾರೆ. ಆದರೆ ಈಗಾಗಲೇ ಉಕ್ತವಾದ ಪರಿಪ್ರೇಕ್ಷ್ಯದಲ್ಲಿ ಪರಿಗಣಿಸಿದಾಗ ಈ ದೃಷ್ಟಿಕೋನ ಮನುಷ್ಯನಲ್ಲಿ ಅಹಂಕಾರಕ್ಕಿಂತ ಮಿಗಿಲಾಗಿ ವಿನಯವನ್ನು ಹುಟ್ಟಿಸುತ್ತದೆ.

ವಿಶಾಲಾರ್ಥದಲ್ಲಿ, ಗಾಂಧೀಜಿಯೊಬ್ಬ ಆಧ್ಯಾತ್ಮಿಕ ಕ್ರಾಂತಿಕಾರಿ; ಎಂದರೆ, ವಿಕಾಸ ಪ್ರಕ್ರಿಯೆಯಲ್ಲಿ ಪ್ರತಿಯೊಬ್ಬರೂ ಸ್ವನಿಯಂತ್ರಿತರಾಗುವ ಮತ್ತು ಸರ್ಕಾರವೊಂದರ ಅಗತ್ಯವಿಲ್ಲದ ದಿನವೊಂದು ಉದಿಸುತ್ತದೆಂದು ಕಲ್ಪಿಸಿಕೊಂಡವರು. ಆದರೂ ಕಠಿಣ ವಾಸ್ತವವಾದಿಯಾದ್ದರಿಂದ, ಆ ದಿವಸ ಇಂದಿನ ಮನುಕುಲದ ವ್ಯಾಪ್ತಿಯಾಚೆಗೆ ಇರುತ್ತದೆಂಬುದನ್ನು ಅವರು ಬಲ್ಲವರಾಗಿದ್ದರು. ಆದ್ದರಿಂದ, ಕನಿಷ್ಠ ಪ್ರಮಾಣದಲ್ಲಿ ಆಳುವ ಸರ್ಕಾರವೆ ಅತ್ಯುತ್ತಮ ಸರ್ಕಾರವೆಂದು ಘೋರೋನಂತೆ ಅವರು ನಂಬಿದ್ದರು. ಸರ್ಕಾರದ ಪದ್ಧತಿ ಎಷ್ಟೇ ಒಳ್ಳೆಯದಾಗಲಿ ಅಥವಾ ಕೆಟ್ಟದ್ದಾಗಲಿ, ಯಾವಾಗಲೂ ಅದರ ಅಂಗಗಳಾದ ವ್ಯಕ್ತಿಗಳು ಮಾಡಿದಂತಿರುತ್ತದೆ ಎಂಬುದನ್ನು ಅವರು ಅನುಭವದಿಂದ ಬಲ್ಲವರಾಗಿದ್ದರು. ಆದ್ದರಿಂದ ಅವರು ವೈಯಕ್ತಿಕ ಸುಧಾರಣೆಗೆ ಅತ್ಯಂತ ಪ್ರಾಮುಖ್ಯವನ್ನಿತ್ತರು. ಉದಾಹರಣೆಗೆ, ಆಡಳಿತವೊಂದು ಒಳ್ಳೆಯದಾಗಿರಬೇಕಾದರೆ, ನಿಃಸ್ವಾರ್ಥಿಗಳೂ ಸಮರ್ಥರೂ ಭ್ರಷ್ಟರಾಗದವರೂ ಆದ ಅಧಿಕಾರಿಗಳಿಂದ ಅದು ನಿರ್ವಹಣೆಗೊಳ್ಳಬೇಕು ಎಂದು ಅವರು ಹೇಳಿದರು. ಗಾಂಧೀಜಿಯ ಪ್ರಕಾರ, ವೈಯಕ್ತಿಕ ಅಂಶ ಇಡೀ ಆಡಳಿತ ವ್ಯವಸ್ಥೆಯನ್ನು ಕಟ್ಟಬಲ್ಲ ಅಥವಾ ಕೆಡವಬಲ್ಲ ಮುಖ್ಯತಮ ಏಕೈಕ ಅಂಶ. ವ್ಯವಸ್ಥೆಗಳನ್ನು ಉತ್ತಮಪಡಿಸಬಾರದೆಂಬುದು ಅವರ ಅಭಿಪ್ರಾಯವಾಗಲಿಲ್ಲ; ಆದರೆ ವ್ಯವಸ್ಥೆಗಳನ್ನು ನಿರ್ವಹಿಸುವ ಸಿಬ್ಬಂದಿಗೆ ಅವರು ಹೆಚ್ಚು ಒತ್ತುಕೊಟ್ಟರು. ಆಡಳಿತ ಯಾರ ಲಾಭಕ್ಕಾಗಿ ಇದೆಯೊ ಅಂಥ ಜನರ ಲೇಸಿನ ಬಗೆಗೆ ಪ್ರಾಮಾಣಿಕತೆಯುಳ್ಳವರಿಂದ ವ್ಯವಸ್ಥೆಗಳು ಕೂಡ ಸುಧಾರಣೆಗೊಳ್ಳಬೇಕು.

ನಮ್ಮ ಪ್ರಥಮ ಕರ್ತವ್ಯ ನಮ್ಮ ಸ್ವಂತ ಆತ್ಮಸಾಕ್ಷಿಗೆ ನಿಷ್ಠೆ ಎಂದು ಗಾಂಧೀಜಿ ಲಾಸ್ಕಿಯಂತೆ ಭಾವಿಸಿದರೆಂಬುದೂ ಗಮನಾರ್ಹ. ಹೀಗಾಗಿ, ಆಲೋಚನೆ, ಭಜನೆ, ಕ್ರಿಯೆಗಳಲ್ಲಿ ಪ್ರಜೆಗೆ ಮಾರ್ಗದರ್ಶನ ಮಾಡಬೇಕಾದ್ದು ಬಾಹ್ಯ ಮೂಲ ಅಥವಾ ಅಧಿಕಾರ ಅಥವಾ ಸರ್ಕಾರವಲ್ಲ; ಅವರ ಸ್ವಂತ ಆಂತರಿಕ ಜ್ಯೋತಿ. ನಿರ್ಮಾಣದಲ್ಲಿ ಸಂಬಂಧಿಸಿದ ವ್ಯಕ್ತಿಗಳ ಸ್ವತಂತ್ರ, ಸ್ವಯಂಪ್ರೇರಿತ ಪಾಲ್ಗೊಳ್ಳುವಿಕೆಯಿಲ್ಲದ ಬಾಹ್ಯ



ಅಧಿಕಾರದಿಂದ– ಅದು ಸರ್ಕಾರವಾಗಲಿ, ರೂಢಿಯ ನಿಯಮವಾಗಲಿ, ಸಂಪ್ರದಾಯವಾಗಲಿ– ಮಾನವ ಮನಸ್ಸಿನ ಮತ್ತು ನಡೆವಳಿಕೆಯ ನಿಯಂತ್ರಣ ಹೆಚ್ಚಿದಷ್ಟೂ ದಾಸ್ಯ ಹೆಚ್ಚುತ್ತದೆ ಎಂಬುದು ಗಾಂಧೀಜಿಯ ಸಕಾರಾತ್ಮಕ ಅಭಿಪ್ರಾಯವಾಗಿತ್ತು. ಅದರ ಫಲಿತಾಂಶವೆಂದರೆ, ಯಂತ್ರಗಳ ಮಟ್ಟಕ್ಕೆ ವ್ಯಕ್ತಿಗಳ ಇಳಿಕೆ. ಆದ್ದರಿಂದ, ಪ್ರತಿಯೊಬ್ಬರ ಅಂತಸ್ಸಾಕ್ಷಿಯನ್ನು ಅತ್ಯುತ್ತಮ ಮಾರ್ಗದರ್ಶಿಯ ಪೀಠಕ್ಕೇರಿಸುವುದು ಅಗತ್ಯ.

ಆಡಳಿದ ಚೌಕಟ್ಟಿನ ಬಗೆಗೆ ಗಾಂಧೀಜಿಯ ಪರಿಕಲ್ಪನೆಯನ್ನು ಕುರಿತು ನಾವು ಮಾತನಾಡಬಲ್ಲವರಾಗುವುದಕ್ಕೆ ಮುನ್ನ, ಅವರ ಇನ್ನೂ ಮೂರು ಭಾವನೆಗಳನ್ನು ಅರ್ಥಮಾಡಿಕೊಳ್ಳುವುದು ಅಗತ್ಯ. ಹಿಂಸೆ, ದ್ವೇಷ, ಬಲ, ವಿನಾಶ ಪ್ರವೃತ್ತಿಗಳು ಮಾನವ ಸಮಾಜದ ವಿಕಾಸದ ಚಾಲಕ ಶಕ್ತಿಗಳು ಅಥವಾ ಮೂಲ ಸಂಗತಿಗಳು ಎಂದು ಅವರೆಂದೂ ಒಪ್ಪಲಿಲ್ಲ. ಅವರ ಪಾಲಿಗೆ ಇವು ನಮ್ಮ ಆರೋಗ್ಯಕ್ಕಿಂತ ಮಿಗಿಲಾಗಿ ನಮ್ಮ ಗಮನ ಸೆಳೆಯುವ ರೋಗಗಳ ಹಾಗೆ. ಮಾನವ ನಾಗರಿಕತೆ ಈ ವೈನಾಶಿಕ ಪ್ರವೃತ್ತಿಗಳಿಂದ ಪ್ರೇರಿತವಾಗುವುದಿಲ್ಲ. ಅವುಗಳನ್ನು, ರಚನಾತ್ಮಕ ಶಕ್ತಿಗಳಾದ ಪ್ರೀತಿ, ಅಹಿಂಸೆ, ಮನವೊಲಿಕೆಗಳಿಂದ ಹಾಗೂ ಅಸ್ತಿತ್ವದ ಉದಾತ್ತ, ಉನ್ನತ ಸ್ತರಗಳಲ್ಲಿ ಬದುಕುವ ಮತ್ತು ಸೃಜನಾತ್ಮಕವಾಗಿ ಸ್ವಾಭಿವ್ಯಕ್ತಿಸುವ ಆಂತರಿಕ ಅಭೀಪ್ಸೆಯಿಂದ ಎದುರಿಸಿ, ಗೆಲ್ಲಬೇಕು; ಆ ಸ್ತರಗಳು ಪರಿಪೂರ್ಣ ಶಾಂತಿ, ಸಾಮರಸ್ಯ ಮತ್ತು ಸರ್ವರ ಸಂತೋಷದಲ್ಲಿ ಪರಿಣಮಿಸುತ್ತವೆ. ಈ ಹೊತ್ತು ಸಾಕಷ್ಟು ಹಿಂಸೆಯಿದೆಯೆಂದು ಗಾಂಧೀಜಿ ಒಪ್ಪುತ್ತಾರೆ. ವಾಸ್ತವವಾಗಿ, ಹಳ್ಳಿಗಳ ಶೋಷಣೆ ಬಹುದೊಡ್ಡ ಹಿಂಸೆಯೆಂದು ಅವರು ಹೇಳಿದರು. ಆದರೆ ಮಾನವ ಧ್ಯೇಯ ಈಡೇರಬೇಕಾದರೆ, ನರ ಮೀರಬೇಕಾದ ಹಂತವದು ಎಂದು ಅವರು ನಂಬಿದ್ದರು. ಆದ್ದರಿಂದ, ರಚನಾತ್ಮಕ ಮತ್ತು ಸೃಜನಾತ್ಮಕ ಶಕ್ತಿಗಳನ್ನು ಉತ್ತೇಜಿಸಿ, ಬಲಗೊಳಿಸುವುದು ಪ್ರತಿಯೊಂದು ಸಮಾಜದಲ್ಲೂ ಎಲ್ಲರ ನಿರಂತರ ಪ್ರಯತ್ನವಾಗ ಬೇಕು.

ಎರಡನೆಯ ಭಾವನೆ, ಈಶಾವಾಸ್ಯ ಉಪನಿಷತ್ತಿನ ಮೊದಲ ವಾಕ್ಯವನ್ನು ಆಧರಿಸಿ ಧರ್ಮದರ್ಶಿತ್ವದ್ದು. ಅದು ಮನುಷ್ಯನ ಮತ್ತು ಅವನ ಆಸ್ತಿಗಳ ಸಂಬಂಧವನ್ನು, ಲಕ್ಷಣಿಸುತ್ತದೆ. ಮನುಷ್ಯ, ವ್ಯಕ್ತಿಯ ದಿನದಿನದ ವಾಸ್ತವ ಬದುಕಿಗೆ ಬೇಕಾದ ಎಲ್ಲ ವಸ್ತುಗಳ ಧರ್ಮದರ್ಶಿ; ಒಡೆಯನಲ್ಲ. ಎಂದರೆ, ಸಮಾಜದ ಲಾಭಕ್ಕಾಗಿ ಸರಿಯಾಗಿ ಬಳಸಿಕೊಳ್ಳಲಾಗುವಂತೆ ಹೆಚ್ಚುವರಿ ವಸ್ತುಗಳು ಅವರ ವಶದಲ್ಲಿವೆ. ಹೆಚ್ಚುವರಿ ವಸ್ತುಗಳ ಬಳಕೆಯಲ್ಲಿ ಅವನಿಗೆ ಮಾರ್ಗದರ್ಶನ ಮಾಡತಕ್ಕದ್ದು ಅವನ ಇಷ್ಟ ಅಥವಾ ಖಯಾಲಿ ಅಥವಾ ಸ್ವಾರ್ಥ ಪರಿಗಣನೆಯಲ್ಲ; ನಿರ್ದೇಶಕ ಕೊಡಬೇಕಾದ್ದು ಸಮಾಜದ ಅವಶ್ಯಕತೆ. ಭೂದಾನ, ಗ್ರಾಮದಾನ, ಸಂಪತ್ತಿದಾನಗಳ ಭಾವನೆಗಳು,

ಜೀವನದಾನದ ಭಾವನೆ ಕೂಡ ಧರ್ಮದರ್ಶಿತ್ವದ ಈ ಮೂಲಭೂತ ಭಾವನೆಯಲ್ಲಿ ಮೂಲ ವುಳ್ಳದ್ದಾಗಿದೆ.

ಸಮಾಜದಿಂದ ಪರಮಾವಧಿ ಪಡೆದು, ಕನಿಷ್ಠತಮವಾದುದನ್ನು ಮರಳಿಸಲು ಯತ್ನಿಸಲಿಲ್ಲ. ಪ್ರತ್ಯೇಕ ಜೀವಿ ತಾನಲ್ಲ ಎಂಬುದನ್ನು ಪ್ರತಿಯೊಬ್ಬ ವ್ಯಕ್ತಿಯೂ ಅರ್ಥ ಮಾಡಿಕೊಳ್ಳಬೇಕು. ಅವರು ಮಾನವ ಸಮಾಜದೊಡನೆ ಅಭೇದ್ಯ ಅವಿನಾಭಾವ ಸಂಬಂಧವುಳ್ಳ ಒಂದು ಘಟಕ. ವಸ್ತುತಃ ಅವನು ತನ್ನ ಅಸ್ತಿತ್ವ ಮತ್ತು ಬೆಳವಣಿಗೆಗಾಗಿ ಸಮಾಜಕ್ಕೆ ಋಣಿ. "ಸೀಸರನ ವಸ್ತುವನ್ನು ಸೀಸರನಿಗೆ ಕೊಡು" ಎಂಬುದು ಪ್ರತಿ ವ್ಯಷ್ಟಿಯ ವಿಷಯದಲ್ಲಿ ಕೆಲಸ ಮಾಡಬೇಕಾದ ಏಕೈಕ ನಿಯಮ. ಆದರೆ, ಸಂವಾದಿ ನಿಯಮವೂ ಉಂಟು: ಅಸ್ತಿತ್ವದ ಉನ್ನತ ಹಂತಗಳತ್ತ ಸಮಾಜ ಮುಂದುವರಿಯ ಬಯಸಿದರೆ, ಎಲ್ಲ ವ್ಯಕ್ತಿಗಳಿಗೂ ಅದು ಅತ್ಯುತ್ತಮ ಮತ್ತು ಸಮಾನ ಅವಕಾಶ ವನ್ನೀಯಬೇಕು. ಹೀಗಾಗಿ, ವ್ಯಕ್ತಿಗಳ ಮತ್ತು ಸಮಾಜದ ಹಿತ ಮತ್ತು ಪ್ರಗತಿ ಅವಿಭಾಜ್ಯ.

ಆಹಾರಕಾಯಕ ಮತ್ತು 'ಅಂತ್ಯೋದಯ'(Unto This Last)ದ ಭಾವನೆಗಳು ಗಾಂಧೀಜಿಯವರನ್ನು ಬಹಳ ಪ್ರಬಲವಾಗಿ ಪ್ರಭಾವಿಸಿದ್ದುವು. ವಾಸ್ತವವಾಗಿ, ಅವು ಸಾರ್ವಜನಿಕ ಸೇವಕರಿಗೆ ಸಂಬಳ, ಸಂಭಾವನೆಗಳ ಪ್ರಶ್ನೆಯನ್ನು ಅವರ ಪಾಲಿಗೆ ನಿರ್ಧರಿಸಿದುವು. ದೈಹಿಕ ದುಡಿಮೆ ಅನೇಕ ಕಾರಣಗಳಿಗಾಗಿ ಪ್ರತಿಯೊಬ್ಬ ವ್ಯಕ್ತಿಗೂ ಅವಶ್ಯಕವೆಂದು ಭಾವಿಸಿದರು, ಗಾಂಧೀಜಿ. ಅವರನ್ನು ತಟ್ಟಿದ ಪ್ರಥಮ ಮತ್ತು ಅತ್ಯಂತತೆಯನ್ನು ಅರ್ಥಮಾಡಿಕೊಳ್ಳುವ ಅತ್ಯುತ್ತಮ ಶಿಸ್ತು ಎಂಬುದು. ಬೌದ್ಧಿಕ ಶ್ರಮ ಮತ್ತು ದೈಹಿಕ ಶ್ರಮದ ನಡುವಣ ಕಂದರವನ್ನು ಅವರು ಅಳಿಸಬಯಸಿದರು. ಯಾವ ವರ್ಗದ್ದೆ ಆಗಲಿ, ಸಮಾಜದ ಸ್ಥಿತಿ, ಪ್ರಗತಿಗಳಿಗೆ ಬೇಕಾದ ಎಲ್ಲ ಕಾಯಕವೂ ಪವಿತ್ರ. ಅದರ ಬಗೆಗೆ ಮೇಲು–ಕೀಳು, ಗರಿಷ್ಠ–ಕನಿಷ್ಠ ಎಂಬುದಿಲ್ಲ. ಕೆಲಸಗಾರನ ಅಗತ್ಯಕ್ಕೆ ತಕ್ಕಂತೆ ಪ್ರತಿಫಲ ಕೊಡಬೇಕು; ಪ್ರತಿಯೊಬ್ಬನ ಕೆಲಸದ ವಿಧಕ್ಕೆ ಸಂಬಂಧಿಸಿದ ಯಾವುದೇ ಕೃತಕ ಮೌಲ್ಯಕ್ಕಲ್ಲ. ಇದು, ಸಾರ್ವಜನಿಕ ಸೇವೆಗೆ ವೇತನದ ಪ್ರಶ್ನೆಯನ್ನು ಗಾಂಧೀಜಿಯ ದೃಷ್ಟಿಯಲ್ಲಿ ನಿರ್ಧರಿಸಿದ ಪ್ರಧಾನ ಪರಿಗಣನೆ.

ಸಾರ್ವಜನಿಕ ಆಡಳಿತದ ಕೇಂದ್ರ ಹಾಗೂ ಸಂಕೇತವಾದ ಸರ್ಕಾರ ಯಾವಾಗಲೂ ಒಂದು ದಾರಿಯೆ ಹೊರತು ಎಂದೂ ಒಂದು ಗುರಿಯಲ್ಲ ಎಂಬುದು ಇಷ್ಟರಲ್ಲಿ ಸ್ಪಷ್ಟ. ಸಂಬಂಧಿಸಿದ ಜನತೆಯ ಸರ್ವತೋಮುಖ ಬೆಳವಣಿಗೆ ಮತ್ತು ಯೋಗಕ್ಷೇಮ ನಿಜವಾದ ಗುರಿ. ಉದ್ದಿಷ್ಟ ಜನತೆಯ ಬೆಂಬಲವಿಲ್ಲದ ಯಾವುದೇ ಸರ್ಕಾರದ ಅಸ್ತಿತ್ವ ಅಥವಾ ಮುಂದುವರಿಕೆಯ ಆಲೋಚನೆ ಗಾಂಧೀಜಿಗಿರಲಿಲ್ಲ. ಗುಪ್ತ ಮತದಾನದ ಮೂಲಕ ವ್ಯಕ್ತವಾದ ಜನತೆಯ ಇಚ್ಛೆಯೆ ಸರ್ಕಾರದ ಹಿಂದಿನ ಮಂಜೂರಾತಿಯಾಗಬೇಕು. ಗಾಂಧಿ ವ್ಯವಸ್ಥೆಯಲ್ಲಿ ಯಾದೃಚ್ಛಿಕ



ಅಥವಾ ಅಂಕುಶರಹಿತ ಅಧಿಕಾರ ಒಂದು ಕ್ಷಣವೂ ಸಹನೀಯವಲ್ಲ. ಅವರು ವಯಸ್ಕ ಅಭಿಮತದ ಪರವಾಗಿದ್ದರು– ಮತದಾನ, ಪ್ರಾತಿನಿಧ್ಯ ಹಾಗೂ ಅಧಿಕಾರ ಗ್ರಹಣದ ವಯಸ್ಸಿನಲ್ಲಿ ಅಲ್ಪಸ್ವಲ್ಪ ಬದಲಾವಣೆಗಳಿರಬಹುದಾದರೂ, ಅವರು ಬೆಂಬಲಿಸಿದ ಎರಡನೆಯ ಮುಖ್ಯ ತತ್ತ್ವವೆಂದರೆ, ಅಧಿಕಾರ ವಿಕೇಂದ್ರೀಕರಣ. ಎಲ್ಲ ಅಧಿಕಾರ–ಆರ್ಥಿಕ, ಸಾಮಾಜಿಕ, ರಾಜಕೀಯ ಅಥವಾ ಆಧ್ಯಾತ್ಮಿಕ ಕೂಡ– ಕೇಂದ್ರೀಕೃತವಾದಾಗ, ಗ್ರಾಹಕರ ಮುಖಂಡನಿಗೆ ಹೋಗುತ್ತದೆ. ಆದ್ದರಿಂದ ಕೇಂದ್ರೀಕರಣದ ಕಡು ವಿರೋಧಿಯಾಗಿದ್ದರು. ಅವರು ಯಂತ್ರದ ಬಳಕೆಯ ವಿಸ್ತರಣದ ಬಗೆಗೆ ಬಹಳ ಎಚ್ಚರಿಕೆಯಿಂದಿದ್ದುದರ ಕಾರಣಗಳಲ್ಲಿ ಒಂದೆಂದರೆ, ಅದು ಆರ್ಥಿಕ ಶಕ್ತಿಯ ಕೇಂದ್ರೀಕರಣಕ್ಕೆ ಒಯ್ಯುತ್ತದೆಂಬುದು. ವಾಸ್ತವವಾಗಿ, ಅವರು ಎಲ್ಲ ಬಗೆಯ ಬಂಡವಾಳಶಾಹಿಗೆ– ಆರ್ಥಿಕವಾಗಿರಲಿ ಅಥವಾ ಆಧ್ಯಾತ್ಮಿಕವಾಗಿರಲಿ–, ಅಂತಹ 'ಬಂಡವಾಳ'ದ ಸ್ವಾಮ್ಯ ಧರ್ಮದರ್ಶಿತ್ವದ ಉದಾತ್ತ ಪರಿಕಲ್ಪನೆಯಿಂದ ಹದಗೊಳ್ಳದಿದ್ದ ಪಕ್ಷದಲ್ಲಿ, ವಿರುದ್ಧವಾಗಿದ್ದರು.

ಎಲ್ಲ ಪೂರ್ವೋಕ್ತ ಸಂಗತಿಗಳನ್ನು ಗಣನೆಗೆ ತೆಗೆದುಕೊಂಡಾಗ, ಗಾಂಧೀಜಿ ತೀವ್ರವಾಗಿ, ತಮ್ಮನ್ನು ತಾವು ಆಳಿಕೊಳ್ಳುವ ಸ್ವಯಂಪೂರ್ಣ ಗ್ರಾಮ ಘಟಕಗಳ ಪರವಾಗಿದ್ದುದೇಕೆಂಬುದನ್ನು ಕಂಡುಕೊಳ್ಳುವುದು ಸುಲಭ.

ಭಾರತದ ಪ್ರಾಚೀನ ಗ್ರಾಮ ಗಣರಾಜ್ಯ ಪದ್ಧತಿಯನ್ನು ವಿಶೇಷವಾಗಿ ಮೆಚ್ಚಿಕೊಂಡಿದ್ದರು, ಗಾಂಧೀಜಿ. ಈ ವಿಷಯದಲ್ಲಿ ಅವರು ಏಕಾಂಗಿಯಾಗಿರಲಿಲ್ಲ. ಮಾರ್ಕ್ಸ್, ಹೆನ್ರಿ ಮೇನ್‌ರಂತಹ ವಿಭಿನ್ನ ಚಿಂತನ ಪ್ರಸ್ಥಾನಗಳ ಚಿಂತಕರು ಭಾರತದ ಪ್ರಾಚೀನ ಗ್ರಾಮಾಡಳಿತ ವ್ಯವಸ್ಥೆಯನ್ನು ಹೊಗಳಿದ್ದಾರೆ. ಆದ್ದರಿಂದ ಗಾಂಧಿಜಿ ಒಳ್ಳೆಯ ಸಹವಾಸದಲ್ಲಿದ್ದಾರೆ! ಬ್ರಿಟಿಷ್ ಆಡಳಿತಗಾರರಾದ ಮನ್ರೋ, ಎಲ್ಫಿನ್‌ಸ್ಟೋನ, ಮೆಟ್ಕಾಫ್ ಮತ್ತು ಇತರರು, ಕೃಷ್ಣಸ್ವಾಮಿ ಅಯ್ಯರ್‌ರಂತಹ ಭಾರತೀಯ ಲೇಖಕರು ಆ ಬಗೆಯ ಆಡಳಿತದ ಪ್ರಯೋಜನಗಳನ್ನು ಉಜ್ವಲ ಶಬ್ದಗಳಲ್ಲಿ ಬಣ್ಣಿಸಿದ್ದಾರೆ. ಅದು ಸಮಾನ ಜೀವನ, ಉದ್ದೇಶಗಳ 'ಗಟ್ಟಿ ತಳಹದಿ'ಯನ್ನೊದಗಿಸಿತೆಂದು ಅವರೆಲ್ಲ ಒಪ್ಪುತ್ತಾರೆ. ಸಮಾಜಾಭಿವೃದ್ಧಿ ಕಾರ್ಯಕ್ರಮ ಯಶಸ್ವಿಯಾಗಿ ಕೆಲಸ ಮಾಡಲು ಕಷ್ಟವಾಗುತ್ತಿರುವುದು 'ಆತ್ಮ'ದ ಅಭಾವದಿಂದ. ಹಿಂದೆ ಭಾರತದ ಹಳ್ಳಿಗಳಲ್ಲಿ ಪ್ರಾಪ್ತವಾದ ಸ್ವಯಂ–ಸರ್ಕಾರ ನಿಜವಾದುದೆಂದು ೧೮೪೪ರಷ್ಟು ಹಿಂದೆಯೆ ಬರೆಯುತ್ತ ಸರ್ ವಿಲಿಯಂ ಸ್ಲೀಮನ್ ಹೇಳಿದ್ದಾನೆ. ಮಿಲ್ಡ್ರೆಡ್ ಸ್ಕೂಪ್ ಹೀಗೆ ಹೇಳುವಷ್ಟು ದೂರ ಹೋಗಿದ್ದಾನೆ: "ನಮಗಿರುವುದಕ್ಕಿಂತ ಆಳವೂ ಮೂಲಭೂತವೂ ಆದ ಸಮಾಜಜ್ಞಾನ ಈ ಭಾರತೀಯ ಗ್ರಾಮೀಣ ಜನರಿಗುಂಟೆಂದು ನನಗನಿಸಿದೆ." ಇದು ೧೯೫೧ರ ಮೋರ್‌ಗಾನ್ ಕೃತ 'ಕಮ್ಯೂನಿಟಿ ಸರ್ವಿಸ್ ನ್ಯೂಸ್'ನಿಂದ ತೆಗೆದ ಉದ್ಧೃತಿ. ಈ ಗಣರಾಜ್ಯಗಳು ಬಹಳ ಪ್ರಜಾಸತ್ತಾತ್ಮಕವಾಗಿದ್ದು, ಗ್ರಾಮದ ಎಲ್ಲ 'ಪಂಚ'ದ (ಐವರು

ಪ್ರತಿನಿಧಿಗಳು) ಒಂದು ಬಗೆಯ 'ಸಂಯುಕ್ತ ಅಭಿಪ್ರಾಯ'ದಿಂದ ಅದರ ವ್ಯವಹಾರಗಳು ನಿಯಂತ್ರಿತವಾಗುತ್ತಿದ್ದುವು. ಒಂದು ಒಪ್ಪಿಗೆಗೆ ಬರಲು ಯಾವುದೇ ಮತದಾನದ ಅಗತ್ಯವಿರಲಿಲ್ಲ. ಕಾಲಕಾಲಕ್ಕೆ ನಗರ ಪ್ರದೇಶಗಳಲ್ಲಿ ಸರ್ಕಾರದ ಬದಲಾವಣೆಗಳು ನಡೆದರೂ ಭಾರತೀಯ ಸಂಸ್ಕೃತಿಯನ್ನೂ ಭಾರತೀಯ ಜೀವನ ವಿಧಾನವನ್ನು ಉಳಿಸಿದ್ದು ಈ ಗಣರಾಜ್ಯಗಳ ಶಕ್ತಿ ಮತ್ತು ದೃಢ ಅಸ್ತಿತ್ವ ಎಂಬುದು ಕೆಲವರು ಚಿಂತಕರ ಖಚಿತವಾದ ಅಭಿಮತ. ಗಾಂಧೀಜಿ ಅವುಗಳನ್ನು ಅಹಿಂಸಾತ್ಮಕ ಪ್ರಜಾಪ್ರಭುತ್ವಗಳೆಂದು ಕರೆಯುತ್ತಿದ್ದರು; ಏಕೆಂದರೆ, ಅವು ಪಡೆಯಬಲ್ಲುದಾದ ಏಕೈಕ ಮಂಜೂರಾತಿ ಅಹಿಂಸಾತ್ಮಕವಾಗಿತ್ತು. ಹಿಂಸಾಶಸ್ತ್ರಗಳಿಂದ ಶಸ್ತ್ರಗಳ ತಂಡಗಳ ಪ್ರತಿರೋಧವನ್ನು ಕುರಿತು ಚಿಂತಿಸುವುದು ಅವುಗಳಿಂದ ಸಾಧ್ಯವೇ ಇರಲಿಲ್ಲ.

ಈಗ, ಗಾಂಧಿ ಆಡಳಿತದ ಬಂಡೆ ಬುನಾದಿಯಾಗುವ ತತ್ತ್ವಗಳನ್ನು ನೋಡೋಣ. ಶಿಖರ ಬುಡದಲ್ಲಿರುವಂಥ ಪಿರಮಿಡ್ ರಚನೆಯನ್ನು ಅವರು ತಳ್ಳಿ ಹಾಕುತ್ತಾರೆ. ಪ್ರತಿ ಗ್ರಾಮವೂ ತೌಲನಿಕವಾಗಿ ಸ್ವಯಂಪೂರ್ಣ ಘಟಕವಾಗಿರುವಂಥ ಸಮಾನಕೇಂದ್ರಕ ವೃತ್ತಭಾವನೆಯನ್ನು ಅವರು ಪ್ರತಿಪಾದಿಸಿದರು. ಎಲ್ಲ ಪ್ರಮುಖ ವಿಷಯಗಳಲ್ಲೂ ಅದು ಸಣ್ಣ ಘಟಕಗಳ ಸ್ವಾತಂತ್ರ್ಯವನ್ನು ಗೌರವಿಸುವ ದೊಡ್ಡ ಘಟಕಗಳಾಗಿ ವಿಸ್ತರಿಸುವುದು.

ಕೆಲವರು ವಿಮರ್ಶಕರು ನಮ್ಮನ್ನು ನಂಬಿಸಬಯಸುವಷ್ಟು ಭ್ರಾಮಕವಾಗಿರಲಿಲ್ಲ, ಗಾಂಧೀಜಿಯ ಅರ್ಥದ ಸ್ವಯಂಪೂರ್ಣ ಗ್ರಾಮಾಡಳಿತ. ನೀರು, ಆಹಾರ, ಬಟ್ಟೆ, ವಸತಿ, ಪ್ರಾಥಮಿಕ ವಿದ್ಯಾಭ್ಯಾಸ, ಆರೋಗ್ಯ, ಔಷಧ ಪರಿಹಾರಗಳ ಮುಖ್ಯ ಆವಶ್ಯಕತೆಗಳಿಗೆ ಸಂಬಂಧಿಸಿದ ಮಟ್ಟಿಗೆ, ಗ್ರಾಮಸ್ಥರು ಸ್ವಯಂಪೂರ್ಣತೆಗಾಗಿ ಪ್ರಯತ್ನಿಸಬೇಕಾದ ಒಂದು ಘಟಕವಾಗಿ ತಮ್ಮನ್ನು ತಾವು ಪರಿಗಣಿಸಬೇಕೆಂಬುದು ಅವರ ಮನೋಗತವಾಗಿತ್ತು. ಇದು ಪರಸ್ಪರ ಸಹಾಯ, ಸಹಕಾರಗಳನ್ನು ಉಂಟುಮಾಡುವ ಸಮಗ್ರ ಅಸ್ತಿತ್ವದ ಪ್ರಜ್ಞೆಯನ್ನು ಬೆಳೆಸುವುದು. ಒಂದು ಕುಟುಂಬದಲ್ಲೆಂಬಂತೆ ನಿರ್ದಿಷ್ಟ ಹಿತಾಸಕ್ತಿಯ ಏಕತೆ ಸ್ಥಾಪಿತವಾಗುವುದು. ಅಂತೆಯೇ ಸಾಮರ್ಥ್ಯ ಹಾಗೂ ಅಗತ್ಯಕ್ಕೆ ಅನುಗುಣವಾಗಿ ಸಾರ್ವಜನಿಕ ಸೇವೆಗಾಗಿ ಆಹಾರಕಾಯಕ, ಪ್ರತಿಫಲಗಳ ಮೇಲೆ ಒತ್ತು ಹಾಕುತ್ತಾರೆ, ಗಾಂಧೀಜಿ. ಭಾರಿ ವೇತನಗಳ ಬಗೆಗೆ ಗಾಂಧೀಜಿಯ ಭಾವನೆಗಳು ಪ್ರಸಿದ್ಧವಾಗಿವೆ. ಸೇವೆಗಾಗಿ ಆರ್ಥಿಕ ಮೌಲ್ಯಗಳ ಸಕಾರಾತ್ಮಕ ನಿಂದನೆಯನ್ನೂ ಸಾರ್ವಜನಿಕ ಸೇವೆಯ ಉನ್ನತ ಶ್ರೇಣೀಕರಣವನ್ನೂ ಅವರು ಬಯಸಿದರು. ಯಾರು ಯಾವ ಧರ್ಮಕ್ಕೆ, ಜನಾಂಗಕ್ಕೆ, ಜಾತಿಗೆ, ಇಲ್ಲವೆ ಲಿಂಗಕ್ಕೆ ಸೇರಿದವರೆಂಬ ಪರಿಗಣನೆಯಿಲ್ಲದಂತೆ ಗ್ರಾಮೀಣ ಸಮಾಜ ಲೌಕಿಕ ದೃಷ್ಟಿಯದಾಗಬೇಕೆಂದು ಅವರು ಆಶಿಸಿದರು. ಆದರೆ ಅತ್ಯಂತ ದೀನದರಿದ್ರರನ್ನು ಮೇಲೆತ್ತುವ ವಿಷಯದಲ್ಲಿ ಅವರು ಸಕಾರಾತ್ಮಕವಾಗಿದ್ದರು ಮತ್ತು ಇಡೀ



ಸಮುದಾಯವನ್ನು ಅದಕ್ಕೆ ಹೊಣೆಯಾಗಿಸುತ್ತಿದ್ದರು. ಗ್ರಾಮ ಪಂಚಾಯಿತಿಗಳಿಗೆ ಅವರು ಪೌರ ನ್ಯಾಯವನ್ನೊದಗಿಸುತ್ತಿದ್ದರು; ಅವಶ್ಯವಾಗಿ 'ಅಪರಾಧ' ನ್ಯಾಯವನ್ನಲ್ಲ. ಗ್ರಾಮೀಣ ಮಂದಿಯ ಸಾಮರ್ಥ್ಯದ ಬಗೆಗೆ ಅವರು ಎಷ್ಟರಮಟ್ಟಿಗೆ ವಾಸ್ತವವಾದಿಯಾಗಿದ್ದರೆಂಬುದನ್ನು ಇದು ತೋರುತ್ತದೆ.

ಆದರೆ ಒಂದು ಸಂಗತಿ ಸಂಪೂರ್ಣ ಸ್ಪಷ್ಟ: ಒಂದು ಕಾಲದಲ್ಲಿ ಭಾರತೀಯ ಗ್ರಾಮಗಳಲ್ಲಿದ್ದ ಪಂಚಾಯತ್ ಆಡಳಿತ ಪದ್ಧತಿ ಬ್ರಿಟಿಷ್ ಆಡಳಿತ ಪದ್ಧತಿಯಿಂದ ಭಗ್ನವಾಯಿತು. ಮುಂದೆ ಬ್ರಿಟಿಷರಿಂದ ಭಾಗಶಃ ಆದ ಪುನರುಜ್ಜೀವನ ದುರ್ಬಲ ಅನುಕರಣವಷ್ಟೆ; ಏಕೆಂದರೆ, ಅದು ಅತ್ಮವನ್ನು ಗ್ರಾಮೀಣದಲ್ಲಿ ಐಕ್ಯದ ಮತ್ತು ಸಮಾನ ಹಿತದ ಪ್ರಜ್ಞೆಯನ್ನು ಎಂದೂ ಮರಳಿಸಲಿಲ್ಲ. ಗುರುತ್ವ ಕೇಂದ್ರ ಪಂಚಾಯತಿಗಳಿಂದ ದೂರಸ್ಥಳಗಳಲ್ಲಿ ವಾಸಿಸುವ ಅಧಿಕಾರಿಗಳಿಗೆ ವರ್ಗಾವಣೆಯಾಯಿತು. ಇಡೀ ಗ್ರಾಮದ ಸಮಾನ ಜವಾಬ್ದಾರಿಯ ಬದಲು, ಅದು ವ್ಯಕ್ತಿಗಳಲ್ಲಿ ಹಂಚಿಕೆಯಾಯಿತು. ಹೀಗಾಗಿ ಗ್ರಾಮಸಮುದಾಯದ ಛಿದ್ರೀಕರಣಕ್ಕೆ ಒಯ್ದ ಒಂದು ಬಗೆಯ ಸೂಕ್ಷ್ಮ ವಿಭಜನೆ ಯುಂಟಾಯಿತು.

ಗ್ರಾಮಗಳ ತಾತ್ಕಾಲಿಕ ಆತ್ಮ ಹಿಂದಿರುಗಿ, ಮತ್ತೆ ಸ್ಪಂದಿಸಿ, ತನ್ಮೂಲಕ ಗ್ರಾಮೀಣ ಜನತೆಯನ್ನು ಪುನರುಜ್ಜೀವಿಸಬೇಕೆಂದು ಗಾಂಧೀಜಿ ಬಯಸಿದರು. ಗ್ರಾಮದಾನದ ಮೂಲಕ ವಿನೋಬಾ ಭಾವೆ ಮಾಡಿದ ಪ್ರಯತ್ನಗಳು ಆ ಜಾಡಿನಲ್ಲಿವೆ; ಆದರೆ ಆಧುನಿಕ ಪರಿಸ್ಥಿತಿ ನಮಗೆ ಬಹಳ ಅನುಕೂಲವಾಗಿರುವಂತೆ ತೋರುವುದಿಲ್ಲ; ಏಕೆಂದರೆ, ಅಷ್ಟಪಾದಿಯಂತೆ ಸರ್ಕಾರದ ಮತ್ತು ಕೇಂದ್ರೀಕರಣದ ಗ್ರಹಣಾಂಗಗಳು ಅದರ ಸ್ವಂತ ಜಾಯಮಾನ ಮತ್ತು ಸ್ವಂತ ನಿಯಮಗಳ ಮೂಲಕ ಬೆಳೆಯಲು ಯಾವುದೇ ಸ್ವತಂತ್ರ ಮುಂತೊಡಗು ಅವಕಾಶವೀಯುವುದಿಲ್ಲ. ನಿಜವಾದ ಬೆಳವಣಿಗೆಯ ಬಗೆಗಿನ ಗಾಂಧಿ ಪರಿಕಲ್ಪನೆ ಜನತೆಯ ಮುಂತೊಡಗು ಮತ್ತು ಉತ್ಸಾಹವನ್ನು ಆಧರಿಸಿತ್ತು; ಸರ್ಕಾರದ– ಅದೆಷ್ಟೆ ಒಳ್ಳೆಯದಾಗಿರಲಿ– ಮೇಲೆ ಜನತೆಯ ಅವಲಂಬನೆಯನ್ನಲ್ಲ. ಸಾರ್ವಜನಿಕ ಆಡಳಿತವನ್ನು ಕುರಿತ ಗಾಂಧಿ ಪರಿಕಲ್ಪನೆಯ ತಿರುಳನ್ನು ಯಾರಾದರೂ ಪುನರ್ ಗ್ರಹಿಸಲು ಯತ್ನಿಸುವುದಾದರೆ, ಎಲ್ಲ ಬಗೆಯ ಅಧಿಕಾರವನ್ನು ವಿಕೇಂದ್ರೀಕರಿಸುವುದು, ಗ್ರಾಮೀಣ ಪ್ರದೇಶಗಳಲ್ಲಿ ಸ್ಥಳೀಯ ಮುಂತೊಡಗನ್ನು ಬೆಳೆಸುವುದು, ಮುಖ್ಯ ಆವಶ್ಯಕತೆಗಳಿಗೆ ಸಂಬಂಧಿಸಿದಂತೆ ಸ್ವಯಂಪೂರ್ಣ ವಾಗುವುದನ್ನು ಅವರಿಗೆ ಕಲಿಸುವುದು, ಇಂದು ಗ್ರಾಮಜೀವನದ ಶಕ್ತಿಯನ್ನು ಹೀರುತ್ತಿರುವ ಎಲ್ಲ ಬಗೆಯ ಶೋಷಣೆಯನ್ನು ಪ್ರತಿರೋಧಿಸಲು ಗ್ರಾಮೀಣ ಸಮುದಾಯಗಳನ್ನು, ಅವುಗಳ ಅಂತಃಸತ್ತ್ವಕ್ಕೆ ಎಚ್ಚರಿಸುವುದು ತೀರಾ ಅಗತ್ಯ.

* * * *